ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಐಕ್ಯರಂಗ

ಸಂಪುಟ 17
ಸಂಚಿಕೆ 28

ರೂ. 2.00
9 ಜುಲೈ 1995



ದೇವೇಗೌಡರೇ, ಮಳೆಯ ಅಭಾವವನ್ನೆದುರಿಸಲು ಸಿದ್ಧರಾಗಿದ್ದೀರಾ?

-ಎನ್.ಕೆ. ಉಪಾಧ್ಯಾಯ

ಈ ವರ್ಷ ಸಕಾಲದಲ್ಲಿ ಸಾಕಷ್ಟು ಮಳೆಯಾಗುತ್ತದೆ. ಆಹಾರ ಧಾನ್ಯದ ಕೊರತೆ ಉಂಟಾಗುವುದಿಲ್ಲ. ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಮತದಾರರನ್ನೆದುರಿಸಲು ನರಸಿಂಹರಾಯರಿಗೆ ಕಷ್ಟವಾಗಲಿಕ್ಕಿಲ್ಲ ಎಂಬ ಸುದ್ದಿ ಮಾರ್ಚ್ ತಿಂಗಳಲ್ಲಿ ಪ್ರಕಟವಾಗಿತ್ತು. ಆ ಸುದ್ದಿಯ ಬೆನ್ನ ಹಿಂದೆಯೇ ಮತ್ತೊಂದು ಸುದ್ದಿ ಪ್ರಚಾರ ಪಡೆದಿತ್ತು. ಅದೆಂದರೆ ಈ ಮುಂಗಾರು ಸಕಾಲದಲ್ಲಿ ಬೀಳುತ್ತದೆ, ಹಿಂಗಾರು ಮಳೆಗೆ ಏನೂ ತೊಂದರೆಯಿಲ್ಲ, ರೈತರು ಯಾವ ಚಿಂತೆಯಿಲ್ಲದೆ ಆನಂದದಿಂದ ಸುಖಜೀವನ ನಡೆಸಬಹುದು ಎಂದಿತ್ತು.

ಈ ಸುದ್ದಿಗಳು ಎರಡು ತಿಂಗಳ ಹಿಂದೆಯೇ ಪ್ರಚಾರ ಕಂಡಿರುವುದು ನರಸಿಂಹರಾಯರ ಕಾಂಗ್ರೆ ಪಕ್ಷದ ಚುನಾವಣೆಯ ಪ್ರಚಾರವೋ? ಅಥವಾ ಅವರ ಆಡಳಿತೆಯಲ್ಲಿ ಕೆಲಸ ಮಾಡುತ್ತಿರುವ ಹವಾಮಾನ ಖಾತೆಯ ಅದಿಕಾರಿಗಳ ಕುತಂತ್ರವೋ ಎಂಬ ಸಂಗತಿ ಈಗ ಸಂಶಯಕ್ಕೆ ಎಡೆ ಮಾಡಿಕೊಟ್ಟಿದೆ.

ಎರಡನೇ ವಾರದಲ್ಲಿಯೇ ಭರಣಿ-ಕೃತ್ತಿಕ ಮಳೆಗಳಾಗಿ ರೈತರಿಗೆ ಭೂಮಿ ಹದಮಾಡಲು ಅವಕಾಶ ಕೊಟ್ಟು ಜೂನ್ 7 ರಂದು ಮಗಿಮಳೆ ಪ್ರಾರಂಭವಾಗಿ ಎಲ್ಲೆಡೆ ಮುಂಗಾರು ಬಿತ್ತನೆ ನಡೆಯಬೇಕಿತ್ತು. ಆದರೆ ಹವಾಮಾನ ವರದಿಗಾರರ ಹೇಳಿಕೆಯಂತೆ ಮಳೆ ಬೀಳಲಿಲ್ಲ, ರಾಜ್ಯದ ಮುಕ್ಕಾಲು ಭಾಗ ಅನಾವೃಷ್ಟಿಯ ತೀವ್ರತೆಯನ್ನೆದುರಿಸಬೇಕಾದಂಥ ಗಂಭೀರ ಪರಿಸ್ಥಿತಿ ಉಂಟಾಗಿದೆ. 8-10 ದಿವಸಗಳಲ್ಲಿ ಮಳೆಯಾಗದಿದ್ದರೆ ರಾಜ್ಯದ ಅರ್ಧಕ್ಕಿಂತಲೂ ಹೆಚ್ಚಿನ ಪ್ರದೇಶ ಬರಗಾಲವನ್ನೆದುರಿಸಬೇಕಾದೀತು. ಕಳೆದೆರಡು ತಿಂಗಳುಗಳಿಂದಲೂ ಗ್ರಾಮಾಂತರ ಪ್ರದೇಶದ ಜನ ಹಾಗೆಯೇ ಪೇಟೆ-ಪಟ್ಟಣಗಳ ಜನ ನೀರಿನ ಅಭಾವವನ್ನೆದುರಿಸುತ್ತಿದ್ದಾರೆ. ಇನ್ನೆರಡು ವಾರಗಳು ಮಳೆ ಕಾಣದಿದ್ದರೆ ಜನರಷ್ಟೇ ಅಲ್ಲ ಜಾನುವಾರುಗಳು ಕೂಡಾ ನೀರಿಗಾಗಿಯೂ ಮೇವಿಗಾಗಿಯೂ ಗಂಭೀರ ಪರಿಸ್ಥಿತಿಯನ್ನೆದುರಿಸಬೇಕಾದೀತು. ಅಷ್ಟೇ ಅಲ್ಲ ಯಾವಾಗಲೂ ಅನಾವೃಷ್ಟಿಯೆನ್ನುದುರಿಸುತ್ತಿರುವ ಜಿಲ್ಲೆಗಳಾದ ಕೋಲಾರ, ಬಳ್ಳಾರಿ, ತುಮಕೂರು, ರಾಯಚೂರು, ಗುಲ್ಬರ್ಗಾ, ಬಿಜಾಪುರ, ಧಾರವಾಡದಂಥ ಜಿಲ್ಲೆಗಳಲ್ಲಿಯ ಜನ ಬೇಸಿಗೆಯಲ್ಲಿ ಮಹಾರಾಷ್ಟ್ರವೋ, ದಕ್ಷಿಣ ಕನ್ನಡ ಬೆಂಗಳೂರು,ಗೋವಾನೋ ಮೊದಲಾದೆಡೆ ದುಡಿಮೆಗಾಗಿ ಸಕುಟುಂಬ ಹೋಗುತ್ತಾ, ಮೇ ಕೊನೆಯಲ್ಲಿ ತಂತಮ್ಮ ಊರಿಗೆ ಹೋಗಿ ಜೂನ್ ತಿಂಗಳಲ್ಲಿ ಬಿತ್ತನೆ ಮುಗಿಸಿ ಮತ್ತೆ ದುಡಿಯಲಿಕ್ಕೆ ಹೋಗುವ ಪರಂಪರೆಯಿದ್ದು. ಈ ವರ್ಷ ಮಳೆಯಾಗದಿರುವುದರಿಂದ ಅವರೆಲ್ಲ ಮತ್ತೆ ಊರು ಬಿಟ್ಟು ಗುಳೇ ಹೋಗುವ ಪರಿಸ್ಥಿತಿ ಉಂಟಾಗಬಹುದಾಗಿದೆ.

ಕಂಗಾಲಾಗುವ ಪರಿಸ್ಥಿತಿ

ಅಧಿಕೃತ ವರದಿ ಪ್ರಕಾರ 41 ತಾಲೂಕುಗಳಲ್ಲಿ ಮಳೆಯೇ ಬಿದ್ದಿಲ್ಲ. 30 ತಾಲೂಕುಗಳಲ್ಲಿ ಮಾಮೂಲಿಗಿಂತ ಕಡಿಮೆ ಮಳೆ ಬಿದ್ದಿದೆ. ಕೇವಲ 17 ತಾಲೂಕುಗಳಲ್ಲಿ ಮಾತ್ರ ಪ್ರತಿವರ್ಷಕ್ಕಿಂತ ಸ್ವಲ್ಪ ಹೆಚ್ಚು ಮಳೆಯಾಗಿದೆ. ಮುಂಗಾರು ಬಿತ್ತನೆ ಮುಗಿಯುವ ಲಕ್ಷಣ ಕಂಡು ಬರುತ್ತಿಲ್ಲ.

ಅಭಾವ ಪರಿಸ್ಥಿತಿಯನ್ನೆದುರಿಸುತ್ತಿರುವ ಪ್ರದೇಶಗಳ ವಿಸ್ತಾರವನ್ನು ಕಡಿಮೆಗೊಳಿಸಲು ಸರಕಾರ. ಕೃಷ್ಣಾ, ಕಾವೇರಿ. ಮೊದಲಾದ ಯೋಜನೆಗಳನ್ನು ಯುದ್ಧೋಪಾದಿಯಲ್ಲಿ ಕೈಗೊಂಡು ರೈತರಿಗೆ ಸಹಾಯ ಮಾಡಬೇಕೆಂದು ಮಾರ್ಕ್ಸ್ ವಾದಿ ಕಮ್ಯುನಿಸ್ಟ್ ಪಕ್ಷ ಪ್ರತಿ ವರ್ಷ ಸರಕಾರವನ್ನು ಎಚ್ಚರಿಸುತ್ತಾ ಬಂದಿದೆ. ಹಾಗೆಯೇ ಬರಗಾಲ ಪರಿಸ್ಥಿತಿ ಉಂಟಾದಾಗ ಅದನ್ನು ಎದುರಿಸಲು ಸರಕಾರ ಅವಶ್ಯಕತೆಯ ಕುರಿತು ಸರಕಾರಕ್ಕೆ ಮನವರಿಕೆ ಮಾಡಿಕೊಡುತ್ತ ಗಮನ ಹರಿಸದೆ, ಅನಾವೃಷ್ಟಿಯಿಂದುಂಟಾದ ಸಮಸ್ಯೆಗಳ ಅತ್ಯಂತ ಅಸಮರ್ಪಕ ರೀತಿಯಲ್ಲಿ ಪರಿಹಾರ ಕಾಮಗಾರಿ ಕೈಗೊಂಡು ಜನರಿಗೆ ಸರಿಯಾದ ಪರಿಹಾರ ಕಾಮಗಾರಿ ಕೈಗೊಂಡು ಜನರಿಗೆ ಸರಿಯಾದ ಪರಿಹಾರ ಒದಗಿಸದೆ ಸಾರ್ವಜನಿಕ ಹಣವನ್ನು ದುರುಪಯೋಗಪಡಿಸಲು ಹೆಚ್ಚಿನ ಅವಕಾಶ ಮಾಡಿಕೊಟ್ಟು ಜನರ ಟೀಕೆಗಳಿಗೆ ಗುರಿಯಾಗುತ್ತಿತ್ತು. ಹಾಗಾಗಿ ಕೋಟ್ಯಾವಧಿ ರೂಪಾಯಿ ಪರಿಹಾರೋಪಾದಿಗಾಗಿ ಖರ್ಚಾದರೂ ಕೂಡ ಕಾಯಂ ರೀತಿಯ ಪರಿಹಾರ ಸಿಗದೆ ಜನ ಕಂಗಾಲಾಗುವಂಥ ಪರಿಸ್ಥಿತಿ ಬಂದಿದೆ.

ಪರಿಸ್ಥಿತಿಯ ಭೀಕರತೆ ಅರ್ಥವಾಗಿದೆಯೇ?

ಗ್ರಾಮಾಂತರ ಪ್ರದೇಶದಲ್ಲಿ ಕುಡಿಯುವ ನೀರಿನ ಅಭಾವವನ್ನು ದೂರೀಕರಿಸುವ ಸಲುವಾಗಿ ರೂ. 160ಕೋಟಿ ಬಿಡುಗಡೆ ಮಾಡುವ ನಿರ್ಣಯವನ್ನು ಹೋದವಾರದ ಮಂತ್ರಿ ಮಂಡಳದ ಸಭೆಯಲ್ಲಿ ಕೈಗೊಳ್ಳಲಾಗಿದೆಯಂತೆ. ಆಗ ಅನಾವೃಷ್ಟಿಯ ವರದಿಗಳು ಪ್ರಕಟವಾಗಲಾರಂಭಿಸಿದ್ದರೂ ಕೂಡ ದೇವೇಗೌಡ ಸರಕಾರ ಇಂದಿಗೂ ಅನಾವೃಷ್ಟಿಯ ಭೀಕರತೆಯನ್ನು ಅರ್ಥ ಮಾಡಿಕೊಂಡಂತೆ ಕಂಡು ಬರುವುದಿಲ್ಲ, ಯಾಕೆಂದರೆ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳ ಸಭೆ ರಾಜ್ಯ. ಎದುರಿಸುತ್ತಿರುವ ಮಳೆ ಅಭಾವದ ಪರಿಸ್ಥಿತಿಯ ಹಿನ್ನೆಲೆಯಲ್ಲೇ ಮೊನ್ನೆ ತಾನೇ ನಡೆಯಿತು. ಮಕ್ಕಳಿಗೆ ಶಾಲೆಮಾಸ್ತರು ಬುದ್ಧಿ ಹೇಳುವಂತೆ ಮುಖ್ಯಮಂತ್ರಿ ದೇವೇಗೌಡರು ಅವರಿಗೆ ಬುದ್ಧಿವಾದದ ಪಾಠ ಹೇಳಿದರಷ್ಟೆಯಲ್ಲದೆ ರಾಜ್ಯದ ಬಹುಭಾಗದ ರೈತರು, ದನಕರುಗಳು ಎದುರಿಸ ಬೇಕಾಗಿ ಬಂದಿರುವ ಗಂಭೀರ ಸಮಸ್ಯೆ-ಅನಾವೃಷ್ಟಿ ಸಮಸ್ಯೆಯ ಕುರಿತು ಚರ್ಚಿಸುವ ಸೌಹಾರ್ದತೆಯನ್ನು ತೋರಿಸಲಿಲ್ಲ, ಅಂದರೆ ನರಸಿಂಹರಾಯರ ಖಾಸಗೀಕರಣ ನೀತಿಯನ್ನು ಒಪ್ಪಿಕೊಳ್ಳುವ ದೇವೇಗೌಡರು, ಕಳೆದೆರಡು ತಿಂಗಳಿಂದ ಕಾಂಗ್ರೆ ಹಾಗೂ ಹವಾಮಾನ ಅಧಿಕಾರಿಗಳು ಮುಂಗಾರು ಮಳೆಯ ಕುರಿತು ನುಡಿದಿರುವ ಭವಿಷ್ಯವನ್ನು ನಂಬಿಕೊಂಡು

ಪುಟ 8 ನೋಡಿ

ಮುಖಂಡರು ವಿಶ್ವಾಸಘಾತ ಮಾಡಿದರೂ ಹೊಸ ಅಧ್ಯಾಯ ಬರೆದ ಟೆಲಿಕಾಂ ಮುಷ್ಕರ

-ಇ. ಬಾಲಾನಂದನ್

ಈ ದೇಶದ ಕಾರ್ಮಿಕ ವರ್ಗ ಈಗ ತನ್ನನ್ನು ಕೇವಲ ತಕ್ಷಣದ ಆರ್ಥಿಕ ಮತ್ತಿತರ ಬೇಡಿಕೆಗಳಿಗೇ ಮಿತಿಗೊಳಿಸುವಂತಿಲ್ಲ, ಅದೀಗ ಮಹತ್ವದ ರಾಷ್ಟ್ರೀಯ ಹಿತಾಸಕ್ತಿಯ ಪ್ರಶ್ನೆಗಳನ್ನು ಎತ್ತಲು ಸನ್ನದ್ಧವಾಗಿದೆ ಎಂದು ಜೂನ್ 19ರಿಂದ ಜೂನ್ 23ರ ವರೆಗೆ ನಡೆದ 4.5 ಲಕ್ಷ ಟೆಲಿಕಾಂ ನೌಕರರ ಮುಷ್ಕರ ತೋರಿಸಿಕೊಟ್ಟಿದೆ ಎಂದು ಸಿಐಟಿಯು ಅಧ್ಯಕ್ಷ ಇ. ಬಾಲಾನಂದನ್ ಹೇಳಿದ್ದಾರೆ. ಮೂರು ಪ್ರಮುಖ ರಾಷ್ಟ್ರೀಯ ಒಕ್ಕೂಟಗಳ ಕರೆಗೆ ಓಗೊಟ್ಟ ಟೆಲಿಕಾಂ ನೌಕರರ ಈ ಅಭೂತಪೂರ್ವ ಕಾರ್ಯಾಚರಣೆ ರಾಷ್ಟ್ರೀಯ ಹಿತಾಸಕ್ತಿಗಳ ಪ್ರಶ್ನೆ ಬಂದಾಗ ಉಳಿದೆಲ್ಲವೂ ಹಿನ್ನೆಲೆಗೆ ಸರಿಯುತ್ತವೆ ಎಂಬುದರತ್ತ ದೇಶದ ಗಮನ ಸೆಳೆದರು. ಉದಾರೀಕರಣ ಹಾಗೂ ಖಾಸಗೀಕರಣದ ವಿರುದ್ಧ ಕಳೆದ ನಾಲ್ಕು ವರ್ಷಗಳಲ್ಲಿ ಭಾರತದ ದುಡಿಯುವ ಜನ ನಡೆಸಿಕೊಂಡು ಬಂದ ನಿರಂತರ ಹೋರಾಟದ ಫಲ ಇದು ಎಂದಿರುವ ಇ. ಬಾಲಾನಂದನ್ ಸರಕಾರ ಎಸ್ಮಾ, ಪೋಲೀಸ್, ಸೇನೆಯ ನೆರವು, ಬೆದರಿಕೆ ಎಂದೆಲ್ಲಾ ದಮನ ಕ್ರಮಕ್ಕಿಳಿದ್ದದ್ದು ಈ ಕಾರ್ಯಾಚರಣೆಯ ಯಶಸ್ಸಿನ ಒಂದು ಸಂಕೇತ ಎಂದಿದ್ದಾರೆ. ದೇಶದ ಒಂದು ಮಹತ್ವಪೂರ್ಣ ವಲಯದಲ್ಲಿ ಕೆಲಸ ಕಾರ್ಯಗಳನ್ನೆಲ್ಲಾ ಇದು ಸ್ತಬ್ಧಗೊಳಿಸಿತು.

ಕೊನೆಗೂ ನೌಕರರು ಈ ಬೆದರಿಕೆ, ದಮನಗಳಿಗೆ ತಲೆಬಾಗಲಿಲ್ಲ, ತಮ್ಮ ಮುಖಂಡರ ವಿಶ್ವಾಸಘಾತದಿಂದಾಗಿ ಹಿಂದಕ್ಕೆ ಸರಿಯಲೇಬೇಕಾಯಿತು ಎಂದು ಕಾಂ. ಬಾಲಾನಂದನ್ ಖೇದ ವ್ಯಕ್ತಪಡಿಸಿದ್ದಾರೆ.

ಮುಷ್ಕರಕ್ಕೆ ಟೆಲಿಕಾಂ ನೌಕರರ ನಡುವೆ ವ್ಯಾಪಕ ಬೆಂಬಲ ದೊರೆಯಿತಷ್ಟೇ ಅಲ್ಲ, ಐದು ಕೇಂದ್ರ ಕಾರ್ಮಿಕ ಸಂಘಟನೆ ಸಿಐಟಿಯು, ಎಐಟಿಯುಸಿ, ಹೆಚ್.ಎಂ.ಎಸ್., ಇಂಟಕ್ ಮತ್ತು ಬಿ.ಎಂ.ಎಸ್. ಅದನ್ನು ಬೆಂಬಲಿಸಿದವು. ದೇಶಾದ್ಯಂತ ಇದಕ್ಕೆ ಬೆಂಬಲವಾಗಿ ಸೌಹಾರ್ದ ಕಾರ್ಯಾಚರಣೆಗಳು ನಡೆದವು. ಜೂನ್ 26 ರಂದು ಎರಡು ಗಂಟೆಗಳ ಸಿಟ್-ಇನ್ (ಕಛೇರಿಯೊಳಗೆ ಕುಳಿತುಕೊಳ್ಳದ) ಮುಷ್ಕರ ನಡೆಸಲು ಅಂಚೆ ನೌಕರರು ನಿರ್ಧರಿಸಿದ್ದರೆ ಪಶ್ಚಿಮ ಬಂಗಾಳದಲ್ಲಿ ಕೇಂದ್ರ ಸರ್ಕಾರಿ ನೌಕರರು ಅದೇ ದಿನ ನಾಲ್ಕು ಗಂಟೆಗಳ ಮುಷ್ಕರ ನಡೆಸುವ ಯೋಜನೆ ಹಾಕಿದ್ದರು.

ಅಭೂತಪೂರ್ವ ವಿಶ್ವಾಸಘಾತ

ಕೊನೆಗೂ ಜೂನ್ 23ರಂದು ಮುಷ್ಕರವನ್ನು ಹಿಂತೆಗೆದುಕೊಂಡದ್ದು ಆಶ್ಚರ್ಯ ಉಂಟು ಮಾಡಿದರೂ ಇದೇನು ಅನಿರೀಕ್ಷಿತವಾಗಿರಲಿಲ್ಲ ಎಂದಿರುವ ಇ. ಬಾಲಾನಂದನ್ ಟೆಲಿಕಾಂ ನೌಕರರಿಂದ ದೊಡ್ಡ ಪ್ರಮಾಣದಲ್ಲಿ ಒತ್ತಡ ಬಂದ ಮೇಲೆಯೇ ಮೂರು ಒಕ್ಕೂಟಗಳ ಮುಖಂಡರುಗಳು ಮುಷ್ಕರ ನೋಟೀಸು ಕೊಟ್ಟಿದ್ದಾರೆಂಬ ಸಂಗತಿಯತ್ತ ಗಮನ ಸೆಳೆದಿದ್ದಾರೆ. ಟೆಲಿಕಾಂ ವಲಯದ ಖಾಸಗೀಕರಣವನ್ನು ವಿರೋಧಿಸುವಲ್ಲಿ ನೌಕರರಿಗಿದ್ದ ಒತ್ತಾಸೆ ಮುಖಂಡರಿಗಿರಲಿಲ್ಲ. ಜೂನ್ 23ರ ಬದಲಾವಣೆ ಮೂರು ಒಕ್ಕೂಟಗಳ ಮುಖಂಡರು ಹಾಗೂ ಸರಕಾರದ ಬಗ್ಗೆ ಆದ ತಿಳುವಳಿಕೆ ನೌಕರರ ಹಾಗೂ ದೇಶದ ಹಿತಾಸಕ್ತಿಗಳಿಗೆ ಮಾಡಿರುವ ವಿಶ್ವಾಸ ಘಾತ ಎಂದು ಬಾಲಾನಂದನ್ ಟೀಕಿಸಿದ್ದಾರೆ.

ಎಐಎಟಿಯುಸಿ ಗೆ ಸಮೀಪವಿದ್ದೇವೆ ಎಂದು ಹೇಳಿಕೊಳ್ಳುವ ಓ.ಪಿ. ಗುಪ್ತಾ ರಂತಹ ಮುಖಂಡರು, ಬಿ.ಎಂ.ಎಸ್., ಹಾಗೂ ಇಂಟಕ್

ಪುಟ 8 ನೋಡಿ

ಜೂನ್ ೨೭ರಂದು ಬೆಂಗಳೂರಿನಲ್ಲಿ ಜಲಮಂಡಳಿಯ ಕಛೇರಿ ಕಾವೇರಿಭವನದೆದುರು ಹಾಲು, ನೀರು ದರ ಏರಿಕೆ ವಿರೋಧಿಸಿ ಸಿಪಿಐ(ಎಂ) ನೇತೃತ್ವದಲ್ಲಿ ಸಾಮೂಹಿಕ ಧರಣಿ ನಡೆಯಿತು.



4 ಧಬೋಲ್-ಕೊಜೆಂಟ್ರಿಕ್ಸ್ -ಜನತೆಯ ಕೊರಳಿಗೆ ಕಟ್ಟುವ ಒರಳುಗಲ್ಲುಗಳು
ಮೂರುವರೆ ವರ್ಷವಾದರೂ ಒಂದು ಮೆಗವಾಟ್ ಖಾಸಗೀ ವಿಧ್ಯುತ್ ಇಲ್ಲ

5 18ವರ್ಷ ಪೂರೈಸಿದ ಪ.ಬಂಗಾಳ ಎಡರಂಗ ಸರಕಾರ:

2 ಬೊಮ್ಮಾಯಿಯವರಿಗೆ ಸುರ್ಜಿತ್ ಪತ್ರ

2 ಲೆನಿನ್ 125ನೇ ಜನ್ಮಾದಿನಾಚರಣೆ -ವಿಶೇಷ ಲೇಖನ

7 ಯೆಲ್ಟ್‌ಸಿನ್‌ಗೆ ನಾಲಾಯಕ್ ಪಟ್ಟ!

6 ಬಿಹಾರದಲ್ಲಿ ಭೂಮಾಲಕರ ದೌರ್ಜನ್ಯ

8 ಉತ್ತರ ಪ್ರದೇಶದಲ್ಲಿ ಏನು ನಡೆಯುತ್ತಿದೆ?

ವರ್ತಮಾನ — ಇತಿಹಾಸ

ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್ ರವರು ಜನತಾದಳದ ಅಧ್ಯಕ್ಷರಿಗೆ ಬರೆದಿರುವ ಪತ್ರದ ಬಗ್ಗೆ ಸುದ್ದಿ ಮಾಧ್ಯಮಗಳಲ್ಲಿ ಪ್ರಸ್ತಾವವಾಗಿದೆ. ಸುರ್ಜಿತ್‌ರವರ ಅಭಿಪ್ರಾಯಗಳು ವಿಕೃತ ಪ್ರಚಾರ ಪಡೆಯದಂತಾಗಲೆಂಬ ಪತ್ರದ ಪೂರ್ಣಪಾಠವನ್ನು ಬಿಡುಗಡೆ ಮಾಡಲಾಗಿದೆ ಅದು ಹೀಗಿದೆ.

-ಬೊಮ್ಮಾಯಿಯವರಿಗೆ ಸುರ್ಜಿತ್ ಪತ್ರ

ನಿಜವಾದ ಪರ್ಯಾಯ ಮೂಡಿ ಬರಬೇಕಾದರೆ ರಾಷ್ಟ್ರೀಯ ರಂಗದಲ್ಲಿ ಧೋರಣೆಗಳು ಕಾರ್ಯಾಚರಣೆಗಳ ಬಗ್ಗೆ ಸುಸಾಂಗತ್ಯ ಅಗತ್ಯ

ಪ್ರಿಯ ಶ್ರೀ. ಎಸ್. ಆರ್. ಬೊಮ್ಮಾಯಿ

ದೇಶ ಎದುರಿಸುತ್ತಿರುವ ವಿವಿಧ ಸಮಸ್ಯೆಗಳ ಬಗ್ಗೆ ಚರ್ಚಿಸಲು ಜನತಾದಳದ ಪದಾಧಿಕಾರಿಗಳ ಶಿಬಿರ ನಡೆಸುತ್ತಿರುವುದಕ್ಕೆ ನನ್ನ ಅಭಿನಂದನೆಗಳು. ಅಲ್ಲದೆ ಭವಿಷ್ಯದ ದೃಶ್ಯಾವಳಿಗಳ ಮೇಲೆ ಭಾರೀ ಪ್ರಭಾವ ಬೀರಲಿರುವ ಸಾರ್ವಜನಿಕ ಚುನಾವಣೆಗಳನ್ನು ದೇಶ ಕಾಣಲು ಇನ್ನೂ 8 ತಿಂಗಳ ಸಮಯ ಮಾತ್ರ ಉಳಿದಿದೆ.

ನಿರುದ್ಯೋಗ, ಬೆಲೆಯೇರಿಕೆ, ದಾರಿದ್ರ್ಯವನ್ನು ಹೆಚ್ಚಿಸಿ ಇಲ್ಲದವರ ಪರಿಸ್ಥಿತಿಯನ್ನು ಇನ್ನಷ್ಟು ಶೋಚನೀಯಗೊಳಿಸುತ್ತಿರುವ, ಬಹುರಾಷ್ಟ್ರೀಯ ಕಂಪೆನಿಗಳು ಭಾರತಕ್ಕೆ ಬೇಕಾದ ಅತ್ಯಾಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನ ಬೆಳವಣಿಗೆಗಳನ್ನು ಕೊಡಲೊಪ್ಪದಿದ್ದರೂ ನಮ್ಮ ಬಳಕೆ ವಸ್ತುಗಳ ಉದ್ದಿಮೆಗಳನ್ನು, ವ್ಯಾಪಾರ ವಲಯವನ್ನು ಅವರಿಗೆ ಅಗಲವಾಗಿ ತೆರೆದಿಡುವ ವಿಶ್ವಬ್ಯಾಂಕ್-ಐ.ಎಂ.ಎಫ್. ನಿರ್ದೇಶಿತ ನೀತಿಗಳಿಂದಾಗಿ ಆಳುವ ಪಕ್ಷ ಜನಸಮೂಹಗಳಿಂದ ತ್ವರಿತವಾಗಿ ದೂರವಾಗುತ್ತಿದೆ.

ದೊಡ್ಡ ಬಂಡವಾಳಶಾಹಿಗಳ ಕೆಲವು ವಿಭಾಗಗಳಿಗೂ ಈ ನೀತಿಗಳು ಚುಚ್ಚಲಾರಂಭಿಸಿವೆ.

ಆದರೆ ಎಡ-ಪ್ರಜಾಪ್ರಭುತ್ವವಾದಿ ಹಾಗೂ ಜಾತ್ಯಾತೀತ ಶಕ್ತಿಗಳ ಬಣದಲ್ಲಿ ಒಂದು ಸುಸಾಂಗತ್ಯದಿಂದಾಗಿ ಹೆಚ್ಚುತ್ತಿರುವ ಅಸಂತೃಪ್ತಿಯನ್ನು ಕೋಮುವಾದದ ಕರಾಳ ಶಕ್ತಿಗಳು ಬಳಸಿಕೊಳ್ಳಲು ಪ್ರಯತ್ನಿಸುತ್ತಿವೆ. ಬಿಜೆಪಿ-ಶಿವಸೇನೆ ನೇತೃತ್ವದ ಈ ಶಕ್ತಿಗಳು ಹಿಂದುತ್ವ ಘೋಷಣೆಯಡಿ ರಾಷ್ಟ್ರೀಯ ಐಕ್ಯತೆಯನ್ನು ನಾಶಮಾಡಲು ದೃಢ ನಿರ್ಧಾರ ಮಾಡಿದಂತಿದೆ.

ಆದ್ದರಿಂದ ನಮ್ಮ ಕೆಲಸ ಕಾಂಗ್ರೆಸ್ ಮತ್ತು ಬಿಜೆಪಿ ಎರಡನ್ನೂ ಚುನಾವಣೆಗಳಲ್ಲಿ ಸೋಲಿಸುವಂತೆ ಮಾಡುವುದು ಎಡ ಪ್ರಜಾಪ್ರಭುತ್ವವಾದಿ, ಜಾತ್ಯಾತೀತ ಪರ್ಯಾಯ ಒಂದು ನಿಜವಾದ ಪರ್ಯಾಯವಾಗಿ ಮೂಡಿಬರುವಂತೆ ಮಾಡುವುದು.

ಈ ಗುರಿ ಸಾಧಿಸಬೇಕಾದರೆ ಪ್ರಧಾನ ಶಕ್ತಿಯಾದ ರಾಷ್ಟ್ರೀಯ ರಂಗದಲ್ಲಿ ಧೋರಣೆಗಳ ಪ್ರಶ್ನೆಗಳಲ್ಲಿ ಹಾಗೂ ಕಾರ್ಯತಂತ್ರಗಳ ವಿಷಯದಲ್ಲಿ ಸುಸಾಂಗತ್ಯತೆ ಸಾಧಿಸಬೇಕಾಗಿದೆ. ಹಿಂದಿನ ಅನುಭವಗಳಿಂದ ಜನತಾದಳ ಮುಖಂಡರು ಸೂಕ್ತ ಪಾಠ ಕಲಿಯಲು ಪ್ರಯತ್ನಿಸಿದಂತಿಲ್ಲ ಬಿಜೆಪಿ ಪ್ರಮುಖ ಪಾತ್ರಧಾರಿಯಾಗಿರುವ ಉತ್ತರ ಪ್ರದೇಶದ ಬೆಳವಣಿಗೆಗಳ ಬಗ್ಗೆ ಅವರು ಭಿನ್ನ-ಭಿನ್ನ ರೀತಿಯಲ್ಲಿ ಪ್ರತಿಕ್ರಿಯಿಸಿದ್ದಾರೆ.

ನಿಮ್ಮ ಶಿಬಿರದ ಅವಧಿಯಲ್ಲಿ ಮಹತ್ವದ ಎಲ್ಲಾ ರಾಜಕೀಯ ಪ್ರಶ್ನೆಗಳ ಬಗ್ಗೆ ಚರ್ಚಿಸಲು ನಿಮಗೆ ಸಾಧ್ಯವಾಗುತ್ತದೆ ಎಂಬ ಖಾತರಿ ನನಗಿದೆ.

ಆರ್ಥಿಕ ಪ್ರಶ್ನೆಗಳಿಗೆ ಸಂಬಂಧಪಟ್ಟಂತೆ ಪ್ರಮುಖ ಆರ್ಥಿಕ ತಜ್ಞರು ತಯಾರಿಸಿದ ದಸ್ತಾವೇಜಿನ ಕಾರ್ಯಕ್ರಮಾತ್ಮಕ ಭಾಗ ಒಂದು ಸ್ಥೂಲ ಆಧಾರ ಕಲ್ಪಿಸಿದೆ. ಆದರೆ ಕೋಮುವಾದಿ ಶಕ್ತಿಗಳ ಬಗ್ಗೆ ಯಾವ ಗೊಂದಲವೂ ಇರಬಾರದು 1989 ರಲ್ಲಿ ನಮ್ಮ ವಿರೋಧವಿದ್ದರೂ ಅವರೊಡನೆ ಒಂದು ತಿಳುವಳಿಕೆಗೆ ಬಂದದ್ದು, ಅದನ್ನು ಅವರು ತಮ್ಮ ಪಕ್ಷವನ್ನು ಹಾಗೂ ರಾಜಕೀಯ ರಂಗವನ್ನು ಕೋಮುಗ್ರಸ್ತಗೊಳಿಸುವವರನ್ನು ಬಲಗೊಳಿಸಲು ಹೇಗೆ ಬಳಸಿದರು ಎಂಬುದರ ಅನುಭವೇ ಸರಿಯಾದ ಪಾಠ ಕಲಿಯಲು ಸಾಕಷ್ಟಾಗುತ್ತದೆ.


ರಾಷ್ಟ್ರೀಯ ರಂಗವನ್ನು ವಿಸ್ತರಿಸುವ ಬಗ್ಗೆ ವಿಭಿನ್ನ ಜನತಾದಳ ಮುಖಂಡರಿಂದ ಹಲವು ಹೇಳಿಕೆಗಳು ಬರುತ್ತಿವೆ. ಈ ವಿಷಯದಲ್ಲಿ ಹಲವು ಪಕ್ಷಗಳ ಹೆಸರುಗಳೂ ಕೇಳಬರುತ್ತಿವೆ. ಇವುಗಳಲ್ಲಿ ಕೋಮುವಾದಿ ಪಕ್ಷಗಳ ಹೆಸರುಗಳೂ ಇವೆ. ರಾಷ್ಟ್ರೀಯ ರಂಗ ಎಡಪಕ್ಷಗಳ ಜತೆ ಸಾಗಬೇಕೆಂದರೆ ಇದು ಸಮಸ್ಯೆಗಳನ್ನು ಸೃಷ್ಟಿಸಬಹುದು.

ಆದ್ದರಿಂದ ಒಂದು ಅಂತಿಮ ತೀರ್ಪಿಗೆ ಬರುವ ಮೊದಲು ನೀವು ಎಡಪಕ್ಷಗಳೊಂದಿಗೆ ಒಂದು ಚರ್ಚೆ ನಡೆಸಬೇಕೆಂದು ನಾನು ಸೂಚಿಸುತ್ತೇನೆ. ನಿಮ್ಮ ಶಿಬಿರಕ್ಕೆ ಸರ್ವ ಯಶಸ್ಸು ಕೋರುತ್ತೇವೆ.

ನಿಮ್ಮ ವಿಶ್ವಾಸಿ

ಹರ್ಕಿಶನ್ ಸಿಂಗ್ ಸುರ್ಜಿತ್

ಲೇನಿನ್‌ರ 125ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಒಂದು ವಿಶೇಷ ಲೇಖನ



ಮಾರ್ಕ್ಸ್‌ವಾದ-ಲೆನಿನ್‌ವಾದ

ಸಮಾಜದ ಕ್ರಾಂತಿಕಾರಕ ಪರಿವರ್ತನೆಯ ವಿಜ್ಞಾನ

ಸಿ.ಆರ್. ಭಟ್

ಮಾರ್ಕ್ಸ್ ಮತ್ತು ಏಂಗೆಲ್ಸ್ ಕೊಡುಗೆ

19ನೇ ಶತಮಾನದಲ್ಲಿ ಕಾರ್ಲ್ ಮಾರ್ಕ್ಸ್ ಮತ್ತು ಏಂಗೆಲ್ಸ್ ಅದುವರೆಗಿನ ಮಾನವ ಇತಿಹಾಸವನ್ನು, ಸಮಕಾಲೀನ ಜರ್ಮನ್ ತತ್ವಜ್ಞಾನವನ್ನು, ಇಂಗ್ಲೆಂಡಿನ ರಾಜಕೀಯ ಅರ್ಥಶಾಸ್ತ್ರವನ್ನು ಮತ್ತು ಫ್ರಾನ್ಸಿನ ಸಮಾಜವಾದಿ ಚಿಂತನೆಗಳನ್ನು, ಭಾರತವೂ ಸೇರಿದಂತೆ ಹಲವಾರು ಪ್ರಾಚೀನ ಸಮಾಜಗಳ ವಾಸ್ತವಿಕ ಪರಿಸ್ಥಿತಿಗಳನ್ನು ಆಳವಾಗಿ ಅಧ್ಯಯನ ಮಾಡಿದರು. ನಿಸರ್ಗದ ಹಾಗೂ ಸಮಾಜದ ಬದಲಾವಣೆಗಳು ಅವುಗಳೊಳಗಿನ ವೈರುಧ್ಯಗಳ ಸಂಘರ್ಷದಿಂದಲೇ ಸಂಭವಿಸುವವು ಎಂದು ಪ್ರತಿಪಾದಿಸಿ, ದ್ವಂದ್ವ ಮಾನ ಭೌತಿಕವಾದ ಮತ್ತು ಚಾರಿತ್ರಿಕ ಭೌತಿಕವಾದ ತತ್ವಜ್ಞಾನದ ಆಧಾರದಲ್ಲಿ 'ಕಾಲ್ಪನಿಕ ಸಮಾಜವಾದ'ದ ಬದಲಿಗೆ 'ವೈಜ್ಞಾನಿಕ ಸಮಾಜವಾದ'ದ ಸಿದ್ಧಾಂತವನ್ನು ಜಗತ್ತಿನ ಶ್ರಮಿಕ ವರ್ಗಕ್ಕೆ ನೀಡಿದರು. ತಮ್ಮ ಕಾಲದ ಸಾಮಾಜಿಕ ಬೆಳವಣಿಗೆಗಳನ್ನು ಅವರು ಈ ನೂತನ ಸಿದ್ಧಾಂತದ ದೃಷ್ಟಿಕೋನದಿಂದ ಅರ್ಥೈಸಿದರು. ಮಾನವನಿಂದ ಮಾನವನ ಶೋಷಣೆ ಆಗುತ್ತಿರುವ, ಅಸಮಾನತೆಯ, ಅನ್ಯಾಯದ, ದೌರ್ಜನ್ಯದ, ಸಂಪತ್ ಸಮೃದ್ಧಿಯ ಮಧ್ಯೆ ಬಡತನ ನಿರುದ್ಯೋಗದ ವಿಷವರ್ತುಲದಲ್ಲಿ ಸುತ್ತುತ್ತಿರುವ ಬಂಡವಾಳಶಾಹಿ ಸಮಾಜವನ್ನು ಕಿತ್ತೊಗೆಯುವ ಸಾಮಾಜಿಕ ಕ್ರಾಂತಿಯನ್ನು ಸಾಧಿಸಬಲ್ಲ ಶಕ್ತಿಯನ್ನು ಆಧುನಿಕ ಕಾರ್ಮಿಕ ವರ್ಗದಲ್ಲಿ ಗುರುತಿಸಿದರು.

ಮಾರ್ಕ್ಸ್, ಏಂಗೆಲ್ಸ್ ತಮ್ಮ ಕಾಲದ ಕಾರ್ಮಿಕರನ್ನು ದೇಶವಿದೇಶಗಳಲ್ಲಿ ಸಂಘಟಿಸಿದರು. ಅವರ ಹೋರಾಟಗಳಿಗೆ ಮಾರ್ಗದರ್ಶನ ನೀಡಿದರು. ಮೇ ದಿನಾಚರಣೆಯ ಮೂಲಕ ಕಾರ್ಮಿಕ ವರ್ಗದ ಅಂತರ್‌ರಾಷ್ಟ್ರೀಯ ಐಕ್ಯತೆಯ ಮಹತ್ವವನ್ನು ಎತ್ತಿ ಹೇಳಿದರು. ಶ್ರಮಿಕ ವರ್ಗ ಸ್ಥಾಪಿಸಿದ ಪ್ರಥಮ ಪ್ರಭುತ್ವ 'ಪ್ಯಾರಿಸ್ ಕೊಮ್ಯೂನ್'ನ ಸೋಲು ಗೆಲುವುಗಳನ್ನು ವಿಶ್ಲೇಷಿಸಿ ಮುಂದೆ ಸಮಾಜವಾದಿ ಕ್ರಾಂತಿಗೆ ಮಾರ್ಗದರ್ಶನ ನೀಡಿದರು. ಜಗತ್ತಿನ ಎಲ್ಲಾ ದೇಶಗಳಲ್ಲಿ ಸಾಮಾಜಿಕ ಕ್ರಾಂತಿ ನಡೆಸಲು 'ಕಮ್ಯುನಿಸ್ಟ್ ಪ್ರಣಾಳಿಕೆ' ಯನ್ನು ಸಿದ್ಧಗೊಳಿಸಿ ಪ್ರೇರಣೆ ನೀಡಿದರು. ತಮ್ಮ ಕಾಲದಲ್ಲಿ ಯುರೋಪಿನ ಅಭಿವೃದ್ಧಿಹೊಂದಿದ ಬಂಡವಾಳಶಾಹಿ ರಾಷ್ಟ್ರಗಳಲ್ಲಿ ಬಂಡವಾಳಶಾಹಿ ವರ್ಗ ಮತ್ತು 'ಕಾರ್ಮಿಕ ವರ್ಗ'ಗಳ ನಡುವಿನ ವೈರುಧ್ಯಗಳು, ಸಂಘರ್ಷಗಳು ಪಕ್ವವಾಗುತ್ತಿದ್ದುದನ್ನು ಗುರುತಿಸಿ ಅನತಿ ಕಾಲದಲ್ಲಿಯೇ ಆ ದೇಶಗಳಲ್ಲಿ ಸಮಾಜವಾದಿ ಕ್ರಾಂತಿ ಸಂಭವಿಸಿ ಶ್ರಮಿಕ ವರ್ಗದ ಸರ್ವಾಧಿಕಾರದ ಮೂಲಕ ಸಮಾಜವಾದಿ ಸಮಾಜ ಸ್ಥಾಪಿಸುವ ಸಾಧ್ಯತೆಯನ್ನು ನಿರೀಕ್ಷಿಸಿದರು.

ಲೆನಿನ್ ಪ್ರವೇಶ

ಆಧುನಿಕ ಯುಗದ ಮಹಾನ್ ಸಮಾಜ ವಿಜ್ಞಾನಿಗಳಾದ ಮಾರ್ಕ್ಸ್ 1883ರಲ್ಲಿ ಮತ್ತು ಅವರ ಆತ್ಮೀಯ ಗೆಳೆಯ ಹಾಗೂ ಒಡನಾಡಿ ಏಂಗೆಲ್ಸ್ 1895 ರಲ್ಲಿ ನಿಧನರಾಗಿ ತಮ್ಮ ಅಮೂಲ್ಯ ಹಾಗೂ ಅಪಾರ ಅನುಭವಗಳನ್ನು ಮುಂದಿನ ಜನಾಂಗಕ್ಕೆ ಬಿಟ್ಟುಕೊಟ್ಟರು. ಅವರು ತೆರವು ಮಾಡಿದ ಸ್ಥಾನದಲ್ಲಿ 1893ರಲ್ಲಿ ವಿ.ಐ. ಲೆನಿನ್ (1870-1924) ಪ್ರವೇಶಿಸಿದರು. ಮುಂದೆ 30 ವರ್ಷಗಳ ಕಾಲ ಮಾರ್ಕ್ಸ್ ವಾದವನ್ನು ಇನ್ನಷ್ಟು ಶ್ರೀಮಂತಗೊಳಿಸಿದರು.

ಲೆನಿನ್ ರಷ್ಯಾದ ಮಾರ್ಕ್ಸ್ ವಾದಿ ಗುಂಪುಗಳನ್ನೆಲ್ಲಾ ಒಗ್ಗೂಡಿಸಿ 'ಸೋಸಿಯಲ್ ಡೆಮಾಕ್ರೆಟಿಕ್ ಲೇಬರ್ ಪಾರ್ಟಿ' ಯನ್ನು ಕಟ್ಟಿ ಬೆಳೆಸಿದರು. ಅದು ಕಮ್ಯುನಿಸ್ಟ್ ಪಕ್ಷವೇ ಆಗಿತ್ತು. ಝಾರ್ ನ ಆಳ್ವಿಕೆಯಲ್ಲಿ ಆ ಪಕ್ಷವನ್ನು ನಿಷೇಧಿಸಿದುದರಿಂದ ಈ ಹೆಸರನಿಡಲಾಗಿತ್ತು. 1902ರಲ್ಲಿ ಅವರು ಬರೆದ 'ಏನು ಮಾಡಬೇಕು? ನಮ್ಮ ಆಂದೋಳನದ ಜ್ವಲಂತ ಪ್ರಶ್ನೆಗಳು' ಎಂಬ ಕೃತಿಯಲ್ಲಿ ರಷ್ಯಾದ ಸೋಸಿಯಲ್ ಡೆಮಾಕ್ರಟಿಕ್ ಪಕ್ಷದಲ್ಲಿ ಹಾಸುಹೊಕ್ಕಿರುವ ಆರ್ಥಿಕವಾದವನ್ನು ಕಟುವಾಗಿ ಟೀಕಿಸಿದ್ದಾರೆ. ಉದಾರವಾದಿ ಬಂಡವಾಳಶಾಹಿಗಳಿಗೆ ಮಾತ್ರ ರಾಜಕೀಯ ಮೀಸಲಾಗಿರುವುದಲ್ಲ ಕಾರ್ಮಿಕರು ತಮ್ಮ ಹೋರಾಟಗಳನ್ನು ಅವರ ಆರ್ಥಿಕ ಬೇಡಿಕೆಗಳಿಗೆ ಮಾತ್ರ ಸೀಮಿತಗೊಳಿಸುವುದಲ್ಲ, ಬದಲು ಅವರು ತಮ್ಮ ಪ್ರಾಥಮಿಕ ವರ್ಗ ಪ್ರಜ್ಞೆಯಿಂದ ಸಮಾಜವಾದಿ ಪ್ರಜ್ಞೆ ಬೆಳೆಸಿಕೊಂಡು ಸಾಮಾಜಿಕ ಕ್ರಾಂತಿಯ ಮುಂಚೂಣಿಯಲ್ಲಿರಬೇಕೆಂದು ಈ ಕೃತಿಯಲ್ಲಿ ಪ್ರಬಲವಾಗಿ ಪ್ರತಿಪಾದಿಸಿದರು.

ಬೊಲ್ಶೆವಿಕ್ ಪಕ್ಷದ ಸ್ಥಾಪನೆ: ಪ್ರಜಾಸತ್ತಾತ್ಮಕ ಕ್ರಾಂತಿಗಾಗಿ ಎರಡು ಕಾರ್ಯತಂತ್ರಗಳು

ಲೆನಿನ್ ತಮ್ಮ ಕಾಲದ ರಷ್ಯಾದ ವಾಸ್ತವಿಕ ಪರಿಸ್ಥಿತಿಗಳನ್ನು ಅಧ್ಯಯನ ಮಾಡಿ, ಅವುಗಳಿಗೆ ಮಾರ್ಕ್ಸ್‌ವಾದವನ್ನು ಅನ್ವಯಿಸಿ ಅರ್ಥೈಸಿದರು. 1905ರಲ್ಲಿ ರಷ್ಯಾದಲ್ಲಿ ನಡೆದ ಕ್ರಾಂತಿಯ ಸೋಲು ಗೆಲುವುಗಳನ್ನು ವಿಶ್ಲೇಷಿಸಿ ಅದರ ಅನುಭವಗಳನ್ನು ಕ್ರೋಢೀಕರಿಸಿದರು. ರಷ್ಯಾದಲ್ಲಿ ಪಾಳೆಗಾರಿ ಮತ್ತು ಬಂಡವಾಳಶಾಹಿ ವ್ಯವಸ್ಥೆಗಳನ್ನು ಕಿತ್ತೊಗೆಯಲು ಪ್ರಜಾಸತ್ತಾತ್ಮಕ ಮತ್ತು ಸಮಾಜವಾದಿ ಕ್ರಾಂತಿಗಳನ್ನು ಸಾಧಿಸಲು ಕಾರ್ಯತಂತ್ರ ರೂಪಿಸಿದರು. ಈ ದಿಶೆಯಲ್ಲಿ ಸೈದ್ಧಾಂತಿಕ ಹಾಗೂ ಕಾರ್ಯತಂತ್ರಗಳಲ್ಲಿ ಆಗಾಗ ಮೂಡಿ ಬರುತ್ತಿದ್ದ ಬಲ ಪರಿಷ್ಕರಣವಾದ, ಎಡಪಂಥವಾದ, ಇತರ ವಿಚ್ಛಿದ್ರಕಾರಿ ವಾದವಿವಾದಗಳನ್ನು ಹಿಮ್ಮೆಟ್ಟಿಸಿ, ಕಾರ್ಮಿಕ ವರ್ಗವೇ ಮುಂಚೂಣಿಯಲ್ಲಿರುವ ಕ್ರಾಂತಿಕಾರಕ ಬೊಲ್ಶೆವಿಕ್ ಪಕ್ಷ ಕಟ್ಟಿದರು.

ಸೋಶಿಯಲ್ -ಡೆಮಾಕ್ರಟಿಕ್ ಪಕ್ಷದಲ್ಲಿ ತುರ್ತಾಗಿ ಪ್ರಜಾಸತ್ತಾತ್ಮಕ ಕ್ರಾಂತಿ ನಡೆಸುವ ಕಾರ್ಯ ತಂತ್ರದಲ್ಲಿ, ಕಾರ್ಮಿಕ ವರ್ಗದ ಪಾತ್ರದಲ್ಲಿ ಭಿನ್ನಾಭಿಪ್ರಾಯ ಹೊಂದಿದ ಮೆನ್ ಶೆವಿಕರು (ಅಲ್ಪಸಂಖ್ಯಾತರು) ಪಕ್ಷದಿಂದ ಪ್ರತ್ಯೇಕಗೊಂಡ ನಂತರ, ಲೆನಿನ್ ನೇತೃತ್ವದ ಬೊಲ್ಶೆವಿಕರು, (ಬಹುಸಂಖ್ಯಾತರು) 1905ರಲ್ಲಿ ತಮ್ಮ ಪಕ್ಷದ ಸಮ್ಮೇಳನದಲ್ಲಿ "ಪ್ರಜಾಸತ್ತಾತ್ಮಕ ಕ್ರಾಂತಿಗಾಗಿ ಸೋಶಿಯಲ್ ಡೆಮಾಕ್ರಸಿಯ ಎರಡು ಕಾರ್ಯತಂತ್ರಗಳು" ಎಂಬ ಮಹತ್ವಪೂರ್ಣ ಠರಾವನ್ನು ಅಂಗೀಕರಿಸಲಾಯಿತು. ಇದರಲ್ಲಿ ಬಂಡವಾಳಶಾಹಿಯ ಸಂಸದೀಯ ವ್ಯವಸ್ಥೆಯಲ್ಲಿ ಮೆಶೆವಿಕರು ಇರಿಸಿದ ಭ್ರಮಾತ್ಮಕ ವಿಶ್ವಾಸಗಳನ್ನು ಕಟುವಾಗಿ ಟೀಕಿಸಲಾಗಿದೆ. ಪ್ರಜಾಸತ್ತಾತ್ಮಕ ಕ್ರಾಂತಿಯ ಗುರಿ ಸಾಧಿಸಲು ಪರಿಪೂರ್ಣ ಅಧಿಕಾರವನ್ನು ಸಂವಿಧಾನದ ಸಂಸತ್ತಿಗೆ ಹಸ್ತಾಂತರಿಸಲು ಕರೆಕೊಡಲಾಗಿದೆ. ಅದಕ್ಕಾಗಿ ಸಾರ್ವತ್ರಿಕ ಮತದಾನದ ಹಕ್ಕನ್ನು ಮತ್ತು ಹೋರಾಟ ನಡೆಸುವ ಹಕ್ಕನ್ನು ಗಳಿಸಲು ಶ್ರಮಿಸುವುದರೊಂದಿಗೇ, ತಕ್ಷಣ ಝಾರ್ ಚಕ್ರವರ್ತಿಯ ಸರ್ಕಾರವನ್ನು ಕಿತ್ತೊಗೆದು ಹಂಗಾಮಿ ಕ್ರಾಂತಿಕಾರಕ ಸರ್ಕಾರ ಸ್ಥಾಪಿಸಲು ಕರೆಕೊಡಲಾಗಿದೆ.

ಸಾಮ್ರಾಜ್ಯಶಾಹಿ ಬಂಡವಾಳಶಾಹಿಯ ಅತ್ಯುನ್ನತ ಘಟ್ಟ

ಲೆನಿನ್ 1908-09ರಲ್ಲಿ ಬರೆದ 'ಭೌತಿಕವಾದ ಮತ್ತು ಪ್ರಾಯೋಗಿಕ ಜ್ಞಾನದ ವಿಮರ್ಶೆ' ಎಂಬ ಕೃತಿಯಲ್ಲಿ ಎಲ್ಲಾ ವಿಧದ ಪರಿಷ್ಕರಣವಾದಿಗಳನ್ನು ಸಾಯಿಸುವಷ್ಟು ಟೀಕಿಸಿದ್ದಾರೆ. ಮಾರ್ಕ್ಸ ವಾದಿ ಸಿದ್ಧಾಂತವನ್ನು ಇತ್ತೀಚಿನ ವೈಜ್ಞಾನಿಕ, ಮುಖ್ಯವಾಗಿ ನಿಸರ್ಗ ವಿಜ್ಞಾನದ ಸಾಧನೆಗಳ ಆಧಾರದಲ್ಲಿ ಎತ್ತಿ ಹಿಡಿದು ಇನ್ನಷ್ಟು ಶ್ರೀಮಂತಗೊಳಿಸಿದ್ದಾರೆ. ದ್ವಂದ್ವಮಾನ ಭೌತಿಕವಾದವನ್ನು ಪುನಃ ದೃಢೀಕರಿಸಿದ್ದಾರೆ.

ಮುಂದೆ 1916-17ರಲ್ಲಿ ಲೆನಿನ್ ಬರೆದ ಸಾಮ್ರಾಜ್ಯಶಾಹಿ ಬಂಡವಾಳಶಾಹಿಯ ಅತ್ಯುನ್ನತ ಘಟ್ಟ ಎಂಬ ಮಹಾನ್ ಗ್ರಂಥದಲ್ಲಿ, ಅಭಿವೃದ್ಧಿ ಹೊಂದಿದ ಬಂಡವಾಳಶಾಹಿ ರಾಷ್ಟ್ರಗಳು ಜಗತ್ತಿನಾದ್ಯಂತ ತಮ್ಮ ವಸಾಹತುಗಳನ್ನು ವಿಸ್ತರಿಸುತ್ತಾ ಜಾಗತಿಕ ವ್ಯಾಪಾರ, ಕೈಗಾರಿಕೆ, ಹಣಕಾಸು ವ್ಯವಹಾರಗಳ ಜಾಲದ ಮೂಲಕ ಸಾಮ್ರಾಜ್ಯಶಾಹಿ ಶಕ್ತಿಗಳಾಗಿ ಬೆಳೆದು ಬಂದಿರುವುದನ್ನು ಗುರುತಿಸಿದ್ದಾರೆ. ಅದರಿಂದಾಗಿ ಸಾಮ್ರಾಜ್ಯಶಾಹಿಗಳೊಳಗೆ ವೈರುಧ್ಯವನ್ನು, ಸಾಮ್ರಾಜ್ಯಶಾಹಿಗಳ ಮತ್ತು ವಸಾಹತು ದೇಶಗಳ ನಡುವಿನ ವೈರುಧ್ಯವನ್ನು ಕಂಡುಕೊಂಡರು. ಮಾರ್ಕ್ಸ್, ಏಂಗೆಲ್ಸ್ ಈ ಬೆಳವಣಿಗೆಯ ಬೀಜಾಂಶವನ್ನು ಮಾತ್ರಕಂಡಿದ್ದರು. ಸಾಮ್ರಾಜ್ಯಶಾಹಿಯ ಅತ್ಯಂತ ದುರ್ಬಲ ಕೊಂಡಿಯಾದ ಹಿಂದುಳಿದ ರಷ್ಯಾದಲ್ಲಿಯೇ ಕ್ರಾಂತಿ ಸಂಭವಿಸಿತು ಎಂದು ನಿರೀಕ್ಷಿಸಿದರು. ಮುಂದೆ ಸಂಭವಿಸಿದ ಒಂದನೇಯ ಜಾಗತಿಕ ಯುದ್ಧ, ಅಕ್ಟೋಬರ್ ಕ್ರಾಂತಿ, ಭಾರತವೂ ಸೇರಿದಂತೆ ನೂರಾರು ವಸಾಹತು ದೇಶಗಳಲ್ಲಿ ಸ್ವಾತಂತ್ರ್ಯ ಹೋರಾಟಗಳು ಈ ವೈರುಧ್ಯಗಳ ಫಲಶೃತಿಗಳೇ ಆಗಿವೆ.

ಅಕ್ಟೋಬರ್ ಕ್ರಾಂತಿಯ ವಿಜಯ

ವಸಾಹತುಗಳ ಮರು ಹಂಚುವಿಕೆಗಾಗಿ ಸಾಮ್ರಾಜ್ಯಶಾಹಿಗಳ ನಡುವಿನ ತೀವ್ರ ಪೈಪೋಟಿ, ವೈರುಧ್ಯದಿಂದ ಮೊದಲನೇ ಜಾಗತಿಕ ಯುದ್ಧ (1914-18) ಸಂಭವಿ

(ಮುಂದುವರೆಯುವುದು)

ಮಹಾಚೈತ್ರ ನಾಟಕ ಪ್ರದರ್ಶನಕ್ಕೆ "ಭಕ್ತ"ರಿಂದ ಅಡ್ಡಿ

ಧಾರವಾಡದ ಕಲಾಭವನದಲ್ಲಿ 14.6.95 ರಂದು ಬೆಂಗಳೂರಿನ ಸಮುದಾಯ ತಂಡದವರಿಂದ "ಮಹಾಚೈತ್ರ" ನಾಟಕದ ಪ್ರದರ್ಶನ ನಡೆಯುವುದಿತ್ತು. ನಾಟಕ ಪ್ರದರ್ಶನ ಏರ್ಪಾಟಾದ ಕೂಡಲೇ ಕೆಲವು ಮತೀಯ ಶಕ್ತಿಗಳು ನಾಟಕದ ವಿರುದ್ಧ ಪ್ರತಿಭಟನೆ ಸೂಚಿಸಲು ತಯಾರಾಗಿದ್ದರು. ಅಂದು ಸಂಜೆ ರಾಷ್ಟ್ರೀಯ ನಾಟಕ ಶಾಲೆಯ ವತಿಯಿಂದ ನಡೆಯುವ ರಂಗ ತರಬೇತಿ ಶಿಬಿರದ ಉದ್ಘಾಟನಾ ಸಮಾರಂಭ ಸಂದರ್ಭದಲ್ಲಿ ಪ್ರದರ್ಶನ ನಡೆಯುವುದಿತ್ತು. ಕಾರ್ಯಕ್ರಮ ನಡೆಯುವ ಮೊದಲು ಪಲವಾರು ಮಾತೆ ಮಹಾದೇವಿಯವರ ಭಕ್ತರು ಮತ್ತು ಗೂಂಡಾಗಳು ಕಲಾಭವನದ ಎದುರು ಘೋಷಣೆ ಕೂಗುತ್ತಿದ್ದರು. ನಂತರ ಸಭಾಭವನದಲ್ಲಿ ಕಾರ್ಯಕ್ರಮ ಪ್ರಾರಂಭವಾದಾಗ ವೇದಿಕೆ ಮೇಲಿದ್ದ ಗಣ್ಯರನ್ನು ಸೇರಿದಂತೆ ಎಲ್ಲರನ್ನೂ ಅವಾಚ್ಯ ಶಬ್ದಗಳಿಂದ ಪ್ರೇಕ್ಷಕರ ಮಧ್ಯದಿಂದ ನಿಂದಿಸಿದರು. ಅಂದು ವೇದಿಕೆಯಲ್ಲಿ ಮಾ. ಏಣಗಿ ಬಾಳಪ್ಪ, ಶ್ರೀ ರಾಮೇಗೌಡ, ಉಪಕುಲಪತಿ ಕರ್ನಾಟಕ ವಿಶ್ವವಿದ್ಯಾಲಯ, ದೇವೇಂದ್ರರಾಜ್ ಅಂಕುರ್, ಚಂದ್ರಶೇಖರ ಪಾಟೀಲ್ ಮುಂತಾದವರು ಉಪಸ್ಥಿತರಿದ್ದರು. ಆದರೂ ಅವರ್‍ಯಾರನ್ನು ಲೆಕ್ಕಿಸದೆ ಪ್ರಸಾಧನ ಕೋಣೆಗೆ ನುಗ್ಗಿ ಗೂಂಡಾಗಳು ಹಲ್ಲೆ ಮಾಡಿದರು(ಅದರಲ್ಲಿ ಮಾಜಿ ಕಾಂಗ್ರೆಸ್ ಶಾಸಕರ ಮೊಮ್ಮಗನು ಮುಂದಾಳತ್ವ ವಹಿಸಿದ್ದನು) ಅಂತಿಮವಾಗಿ ನಾಟಕ ನಡೆಯದಂತೆ ಮಾಡಿದರು.

ಈ ಹಲ್ಲೆಯನ್ನು ಪ್ರತಿಭಟಿಸಿ ಮರುದಿನ ಸಂಜೆ 5 ಗಂಟೆಯಿಂದ ಮೌನ ಪ್ರತಿಭಟನೆ ಕಾರ್ಯಕ್ರಮವನ್ನು ಸಮುದಾಯ ಆಯೋಜಿಸಿದಾಗ ಉತ್ತಮ ಪ್ರತಿಕ್ರಿಯೆ ಬಂತು. ಸಮುದಾಯದ ಕಲಾವಿದರನ್ನು ಒಳಗೊಂಡು ಪ್ರಸನ್ನ, ಚಂದ್ರಶೇಖರ ಪಾಟೀಲ, ಗಿರಡ್ಡಿ ಗೋವಿಂದರಾಜ, ಪಿ.ಎಸ್. ದೇಶಪಾಂಡೆ, ಸಿದ್ದನಗೌಡ ಪಾಟೀಲ್, ಸಿದ್ದಲಿಂಗ ಪಟ್ಟಣಶೆಟ್ಟಿ ಇನ್ನೂ ಹಲವಾರು ಜನ ಭಾಗವಹಿಸಿದ್ದರು. ಮೌನ ಪ್ರತಿಭಟನೆ ಕ್ರಮೇಣ ರಂಗ ಗೀತೆಗಳ(ಮಹಾಚೈತ್ರ ನಾಟಕದ ಗೀತೆಗಳು) ಹಾಡುವಿಕೆ ಮುಖಾಂತರ ಮುಂದುವರೆದು ಅಲ್ಲೇ ದೊಡ್ಡ ಚರ್ಚೆ ಪ್ರಾರಂಭವಾಯಿತು. ಈ ಚರ್ಚೆಯಲ್ಲಿ ಪ್ರಸನ್ನ, ವೆಂಕಟೇಶ್, ಸಿದ್ದನಗೌಡ ಪಾಟೀಲ್ ಭಾಗವಹಿಸಿದ್ದರು. ಅಲ್ಲಿ ಪ್ರತಿಭಟಿಸುತ್ತಿದ್ದವರೆಲ್ಲಾ ಯಾರೂ ನಾಟಕವನ್ನು ಓದಿರಲಿಲ್ಲ, ಕೊನೆಯಲ್ಲಿ ಸಮುದಾಯದ ಪ್ರತಿಭಟನೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ 200-300 ಜನ ಭಿತ್ತಿ ಪತ್ರಗಳನ್ನು ಹಿಡಿದುಕೊಂಡು, ಕಲಾಭವನದಿಂದ ಗಾಂಧಿ ಚೌಕದವರೆಗೆ ಮೆರವಣಿಗೆ ನಡೆಸಿದರು. ಅನಂತರ ಕಲಾಭವನದಲ್ಲಿ ಎಲ್ಲಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಧಾರವಾಡದ ನಾಗರಿಕರಿಗೆ ವೆಂಕಟೇಶ್ ಕೃತಜ್ಞತೆ ಸಲ್ಲಿಸಿದರು. ಒಟ್ಟಾರೆಯಾಗಿ ಭಾಗವಹಿಸಿದ್ದವರಿಗೆಲ್ಲಾ ಉಂಟಾಗಿದ್ದ ಭಾವನೆಯೆಂದರೆ ಜಾತೀವಾದಿ ಮತ್ತು ಮತೀಯವಾದಿ ಶಕ್ತಿಗಳ ಪ್ರಚೋದನೆಗೆ ಜನ ನಿರಂತರವಾಗಿ ಮರುಳಾಗುವುದಿಲ್ಲ ಎಂಬುದು ಮುಖ್ಯ ಬೆಳವಣಿಗೆಯಾಗಿದೆ.

ಪವರ್ ಲೂಮ್ ಕಾರ್ಮಿಕರ ಬೇಡಿಕೆಯ ದಿನಾಚರಣೆ

ಪವರ್ ಲೂಮ್ ಕಾರ್ಮಿಕರು ಮಾರ್ಚ್ ತಿಂಗಳಲ್ಲಿ ಒಂದು ವಾರ ಕಾಲ ಮುಷ್ಕರದಲ್ಲಿ ನಿರತರಾಗಿದ್ದಾಗ 21.3.95ರಂದು ಮುಖ್ಯ ಮಂತ್ರಿಗಳು ಮಾಲಿಕರು, ಕಾರ್ಮಿಕರು, ಕಾರ್ಮಿಕ ಇಲಾಖೆಯ ಅಧಿಕಾರಿಗಳ ಸಭೆಯನ್ನು ಕರೆದು, ಕಾರ್ಮಿಕರ ಬೇಡಿಕೆಗಳನ್ನು ಇತ್ಯರ್ಥ ಮಾಡಲು ಒಪ್ಪಿ ಕಾರ್ಮಿಕರ ಮುಷ್ಕರ ನಿಲ್ಲುವಂತೆ ಕೋರಿದರು. 15 ದಿವಸಗಳೊಳಗಾಗಿ ಬೇಡಿಕೆಗಳನ್ನು ಇತ್ಯರ್ಥ ಮಾಡುವ ಭರವಸೆಯ ಮೇಲೆ ಮುಷ್ಕರವನ್ನು ನಿಲ್ಲಿಸಲಾಯಿತು. ಆದರೆ 3 ತಿಂಗಳು ಕಳೆದರೂ ಕೂಡಾ ಯಾವುದೇ ಬೇಡಿಕೆಯನ್ನು ಈಡೇರಿಸಿಲ್ಲ.

ಆದ್ದರಿಂದ ಸರಕಾರದ ವಿಳಂಬ ನೀತಿಯನ್ನು ಖಂಡಿಸಿ 29.6.95ರಂದು ಬೇಡಿಕೆಯ ದಿನಾಚರಣೆಯನ್ನು ಆಚರಿಸಲಾಯಿತು. ಪವರ್ ಲೂಮ್ ಕಾರ್ಮಿಕರಿಗೆ ತಕ್ಷಣವೇ ಕಾರ್ಖಾನೆ ಕಾಯಿದೆ ಅನ್ವಯವಾಗಬೇಕು, ಕನಿಷ್ಟ ಕೂಲಿ ಕೂಡಲೇ ಪ್ರಕಟಿಸಬೇಕು, ಕೆಲಸದ ಭದ್ರತೆ ಬೇಕು, ಹಬ್ಬದ ರಜೆ, ಇಎಸ್ಐ ಮತ್ತಿತರ ಕಾನೂನುಬದ್ಧ ಸೌಲಭ್ಯಗಳು ಸಿಗಬೇಕು ಎಂಬ ಬೇಡಿಕೆಗಳನ್ನು ಒತ್ತಾಯಿಸಿ ಸರಕಾರ ಸ್ವಲ್ಪವೂ ವಿಳಂಬವಿಲ್ಲದೆ ಕೂಡಲೇ ಈ ಬೇಡಿಕೆಗಳನ್ನು ಈಡೇರಿಸಬೇಕೆಂದು ಈ ಬೇಡಿಕೆಯ ದಿನಾಚರಣೆಯಲ್ಲಿ ಒತ್ತಾಯಿಸಲಾಯಿತು.

ಕಬ್ಬನ್ ಪೇಟೆ, ಸಂಪಂಗಿರಾಮನಗರ, ವಿನಾಯಕ ನಗರ, ಸುಬ್ರಮಣ್ಯನಗರ, ಶ್ರೀರಾಂಪುರ ಪ್ರದೇಶಗಳಲ್ಲಿ ಕಾರ್ಮಿಕರು ನಿರ್ದಿಷ್ಟ ಸ್ಥಳಗಳಲ್ಲಿ ಸೇರಿ ಘೋಷಣೆಗಳನ್ನು ಕೂಗಿ, ಜುಲೈ 10ರಂದು ಒಂದು ದಿನದ ಸಾಂಕೇತಿಕ ಮುಷ್ಕರವನ್ನು ನಡೆಸಲು ತೀರ್ಮಾನಿಸಿ ಬೇಡಿಕೆಯ ದಿನಾಚರಣೆಯನ್ನು ಯಶಸ್ವಿಯಾಗಿ ನಡೆಸಿದರು.

ರೈತರಿಗೆ ವಂಚನೆ: ಧರಣಿ ಸತ್ಯಾಗ್ರಹ

ಗುಲ್ಬರ್ಗ: ಸ್ಥಳೀಯ ರೈತರ ಕೋಟ್ಯಾಂತರ ರೂ ಬೆಲೆಯ ಕಬ್ಬನ್ನು ಅರೆಯಲು ನಿರಾಕರಿಸಿ ಕೆಲವೇ ಪ್ರಭಾವಶಾಲಿಗಳ ಕಬ್ಬನ್ನು ಮಾತ್ರ ಅರೆಯಲು ಕಾರ್ಖಾನೆಯನ್ನು ಮುಚ್ಚುವ ಹುನ್ನಾರವನ್ನು ನಡೆಸಿದಾಗ ಮಾಲಿಕರ ವರ್ತನೆಯನ್ನು ಪ್ರತಿಭಟಿಸಿ ಸ್ಥಳೀಯ ರೈತರು ಉಳಿದ ಹತ್ತು ಸಾವಿರ ಟನ್ ಕಬ್ಬನ್ನು ಅರೆಯುವವರೆಗೆ ಕಾರ್ಖಾನೆ ನಡೆಸಬೇಕು, ಬಾಕಿ ಪಾವತಿ ಮಾಡಲು ಸರಕಾರ ಹಣವನ್ನು ಬಿಡುಗಡೆ ಮಾಡಬೇಕೆಂದು ಒತ್ತಾಯಿಸಿ ಕರ್ನಾಟಕ ಪ್ರಾಂತ ರೈತ ಸಂಘ ಜಿಲ್ಲಾಧಿಕಾರಿಗಳ ಕಛೇರಿ ಎದುರು ಜೂನ್ 12ರಿಂದ ಸಾಮೂಹಿಕ ಧರಣಿ ಸತ್ಯಾಗ್ರಹ ನಡೆಸುತ್ತಿವೆ.

ಜಿಲ್ಲಾ ರೈತ ಸಂಘದ ನಿಯೋಗ 7 ಬೇಡಿಕೆಗಳನ್ನೊಳಗೊಂಡ ಮನವಿ ಪತ್ರವನ್ನು ಜಿಲ್ಲಾಧಿಕಾರಿಗಳಿಗೆ ಅರ್ಪಿಸಿತು. ಕಲ್ಲಪ್ಪ ಕಿರಣಗಿ, ಚೆನ್ನಪ್ಪ ಆನೆಗುಂದಿ, ಕಲ್ಯಾಣ ರಾವ್ ಪಾಟೀಲ್, ಸುದಾಮ ದಿನ್ನ, ಜಾಬು ಹರಮಶೆಟ್ಟಿ ಮತ್ತಿತರರು ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದರು.

ನಾಗರಿಕ ಸಮಿತಿಗೆ ಜಯ

ಕೋಟೆಕಾರು: ಮಂಗಳೂರು ತಾಲೂಕಿನ ಕೋಟೆಕಾರು ವ್ಯವಸಾಯ ಸೇವಾ ಸಹಕಾರಿ ಸಂಘದ ಚುನಾವಣೆಯಲ್ಲಿ ಕೋಟೆಕಾರು ವ್ಯವಸಾಯ ಸೇವಾ ಸಹಕಾರಿ ಸಂಘದಲ್ಲಿ 1983ರಿಂದ ಆಡಳಿತ ನಡೆಸುತ್ತಿದ್ದ ನಾಗರಿಕ ಸಮಿತಿಯು ಚುನಾವಣೆಯಲ್ಲಿ ಪುನಃ ಅದ್ದೂರಿಯ ಜಯ ಭೇರಿಗಳಿಸಿತ್ತು. ನಾಗರಿಕ ಸಮಿತಿಯ ವಿರುದ್ಧ ಸ್ಪರ್ಧಿಸಿದ್ದ ಬಿಜೆಪಿಯ ಎಲ್ಲಾ 9 ಜನ ಅಭ್ಯರ್ಥಿಗಳು ಅಂದಿನಿಂದಲೂ ಅಲ್ಪ ಮತವನ್ನು ಪಡೆದು ಅವಮಾನಕಾರಿ ಸೋಲನ್ನು ಅನುಭವಿಸುತ್ತಾ ಬಂದಿರುತ್ತಾರೆ.

1983ರಿಂದ ಆಡಳಿತ ನಡೆಸುತ್ತಿದ್ದ ನಾಗರಿಕ ಸಮಿತಿಯ ಎಲ್ಲಾ 9 ಅಭ್ಯರ್ಥಿಗಳು 600ಕ್ಕೂ ಮಿಕ್ಕಿದ ಮತಗಳ ಅಂತರದಿಂದ ಜಯಗಳಿಸಿದ್ದಾರೆ.

ಸಿಐಟಿಯು ಬೆಳ್ಳಿ ಹಬ್ಬ

ದಾಂಡೇಲಿ: ಸಿಐಟಿಯು ಬೆಳ್ಳಿ ಹಬ್ಬದ ಅಂಗವಾಗಿ ಮೇ 30ರಂದು ಬೆಳಿಗ್ಗೆ ವೆಸ್ಟ್ ಕೋಸ್ಟ್ ಪೇಪರ್ ಮಿಲ್ಲಿನ ಗೇಟ್ ಎದುರು ಹಾಜರಿದ್ದ ನೂರಾರು ಕಾರ್ಮಿಕರನ್ನು ಉದ್ದೇಶಿಸಿ ಕಾರ್ಮಿಕ ಧುರೀಣರಾದ ಕಾಂ. ಭೀಮರಾವ್, ಕಾಂ. ಮಾಧವ, ಕಾಂ. ಸಾವಂತರವರು ಮಾತನಾಡಿದರು. ಸಂಘದ ಕಛೇರಿ ಹಾಗೂ ಪೇಪರ್ ಮಿಲ್ ಗೇಟಿನ ಎದುರು ಕೆಂಪು ಪೇಪರಿನಿಂದ ಶೃಂಗರಿಸಲಾಯಿತು.

ಸಿಪಿಐ(ಎಂ) ನೂತನ ಶಾಖೆ

ಗೌರಿಬಿದನೂರು: ಸಿಪಿಐ(ಎಂ)ನ ನೂತನ ಶಾಖೆಯ ಉದ್ಘಾಟನೆಯನ್ನು ಸಿಪಿಐ(ಎಂ)ನ ಜಿಲ್ಲಾ ಸಮಿತಿ ಸದಸ್ಯರಾದ ಕಾಂ.ಜಿ. ಸಿದ್ದಗಂಗಪ್ಪ ಮಾಡಿದರು. ಈ ಶಾಖೆಯ ಕಾರ್ಯದರ್ಶಿಯಾಗಿ ಕಾಂ.ಸಲ್ಲಪ್ಪ ಅವರನ್ನು ಆಯ್ಕೆ ಮಾಡಲಾಯಿತು.

ಕೊಳ್ಳೆಗಾಲದಲ್ಲಿ ಪಕ್ಷದ ಕಛೇರಿ

ಕೊಳ್ಳೆಗಾಲ: ಮೈಸೂರು ಜಿಲ್ಲೆ ಕೊಳ್ಳೆಗಾಲ ತಾಲ್ಲೂಕಿನಲ್ಲಿ ಸಿಪಿಐ(ಎಂ) ಪಕ್ಷದ ಒಂದು ಚಿಕ್ಕ ಕಟ್ಟಡವನ್ನು ಕಟ್ಟುವ ಪ್ರಾರಂಭದ ಸಮಾರಂಭವೊಂದನ್ನು 25.6.95ರಂದು ಏರ್ಪಡಿಸಲಾಗಿತ್ತು. ಈ ಸಮಾರಂಭದ ಅಧ್ಯಕ್ಷತೆಯನ್ನು ಕಾಂ.ಜಿ.ಗುರುಸ್ವಾಮಿಯವರು ವಹಿಸಿದ್ದರು. ಉದ್ಘಾಟನಾ ಸಮಾರಂಭವನ್ನು ಕಾಂ.ಬಾಲಕೃಷ್ಣ ಶೆಟ್ಟಿಯವರು ನೆರವೇರಿಸಿದರು. ಶಂಕುಸ್ಥಾಪನೆ ಕಾರ್ಯವನ್ನು ಪಕ್ಷದ ಹಿರಿಯ ಹಿತೈಷಿಗಳಾದ ಕೆ.ಎನ್.ಅಚ್ಯುತನ್‌ರವರು ನೆರವೇರಿಸಿದರು.ಮುಖ್ಯಅತಿಥಿಯಾಗಿ ಆಗಮಿಸಿದ್ದ ಹೆಚ್.ಡಿ.ಕೋಟೆ ತಾಲ್ಲೂಕು ಪಂಚಾಯಿತಿ ಸದಸ್ಯರಾದ ಪಕ್ಷದ ಕಾಂ.ಸಿ. ಮಾರುತಿಮತ್ತು ಕಾಂ.ಅಕ್ಬರ್ ಪಾಷಾ, ಸಿ.ಕೆ. ಮೋನ್ ಸಮಾರಂಭದ ಸಭಿಕರನ್ನುದ್ದೇಶಿಸಿ ಮಾತನಾಡಿದರು. ಆರಂಭದಲ್ಲಿ ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯರಾದ ಕಾಂ.ಎಂ.ಎಸ್. ಉಗ್ರಪ್ಪ ಸ್ವಾಗತಿಸಿದರು. ಕೊನೆಯಲ್ಲಿ ಡಿವೈಎಫ್‌ಐ ತಾಲ್ಲೂಕು ಕಾರ್ಯದರ್ಶಿಯಾದ ಸಂಗಾತಿ ಶಿವಾಜಿನಾಯಕ್ ವಂದನಾರ್ಪಣೆ ಸಲ್ಲಿಸಿದರು.

ಡಿವೈಎಫ್‌ಐನಿಂದ ಉಚಿತ ಪುಸ್ತಕ ವಿತರಣೆ

ಹರೇಕಳ: ಬಡ ಕೃಷಿಕೂಲಿಕಾರರು ತುಂಬಿರುವ ಗ್ರಾಮೀಣ ಪ್ರದೇಶದಲ್ಲಿ ದುಡಿದು ಹೊಟ್ಟೆ ತುಂಬಿಸುವುದೇ ದುಸ್ತರವಾಗಿರುವಾಗ ತಮ್ಮ ಮಕ್ಕಳಿಗೆ ಮಣಗಟ್ಟಲೆ ಪುಸ್ತಕ ಖರೀದಿಸಿ ಶಾಲೆಗೆ ಕಳುಹಿಸಲು ಅಸಾಧ್ಯವಾಗಿರುವ ಇಂದಿನ ಪರಿಸ್ಥಿತಿಯಲ್ಲಿ ತಮ್ಮ ಮಕ್ಕಳನ್ನು ಕೂಲಿ ಕೆಲಸಕ್ಕೂ ಇಟ್ಟಿಗೆ ಕೆಲಸಕ್ಕೂ ಕಳುಹಿಸಿ ನಕ್ಕುನಲಿದು ಅರಳಬೇಕಾದ ಮಕ್ಕಳು ಬಾಲ ಕಾರ್ಮಿಕರಾಗಿ ಮುದುಡಿ ಬಾಡಿ ಹೋಗುತ್ತಿದ್ದಾರೆ. ಇದನ್ನು ಮನಗಂಡ ಡಿವೈಎಫ್‌ಐಯು ತೀರಾಆರ್ಥಿಕವಾಗಿ ಹಿಂದುಳಿದ ಮಕ್ಕಳು ಪುಸ್ತಕದ ಕೊರತೆಯಿಂದಾಗಿ ವಿದ್ಯೆಯಿಂದ ವಂಚಿತರಾಗಬಾರದೆಂದು ಕಳೆದ ಮೂರು ವರ್ಷಗಳಿಂದಲೂ ಉಚಿತ ಪಠ್ಯೇತರ ಪುಸ್ತಕಗಳನ್ನು ಬಡಶಾಲಾ ಮಕ್ಕಳಿಗೆ ಒದಗಿಸುತ್ತಾ ಬಂದಿದೆ. ನಾಲ್ಕನೇ ವರ್ಷದ ಕೊಡುಗೆಯಾಗಿ 215 ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಪುಸ್ತಕ ವಿತರಣೆ ಮಾಡಲಾಯಿತು.

ಸಾರ್ವಜನಿಕ ಸಹಕಾರದಿಂದ ವಿತರಣೆಗೈದ ಈ ಪುಸ್ತಕಗಳ ಸದುಪಯೋಗ ಪಡೆದು ವಿದ್ಯಾರ್ಥಿಗಳು ಚೆನ್ನಾಗಿ ಕಲಿತು ಜೀವನದಲ್ಲಿ ಶಿಸ್ತನ್ನು ರೂಢಿಸಿಕೊಂಡು ಕಲಿತ ಶಾಲೆಗೂ ದೇಶಕ್ಕೂ ಕೀರ್ತಿಯನ್ನು ತರಬೇಕೆಂದು ಸಮಾರಂಭದ ಅಧ್ಯಕ್ಷ ಸ್ಥಾನವನ್ನು ವಹಿಸಿದ್ದ ಹುಸೈನ್ ಪಾವೂರು ಮಕ್ಕಳಿಗೆ ಹಿತವಚನವನ್ನು ನೀಡಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಕೋಣಾಜೆ ಜಿಲ್ಲಾ - ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ಸದಸ್ಯರಾದ ಅಬ್ದುಲ್ ಅಜೀಜ್ ಮತ್ತು ಪ್ರಕಾಶ್ ಶೆಟ್ಟಿಯವರು ಪುಸ್ತಕ ವಿತರಣೆ ಮಾಡಿದರು. ಪಾವೂರು ಗ್ರಾಮ ಪಂಚಾಯತ್ ಅಧ್ಯಕ್ಷರಾದ ಬಿ.ಬಾಬು ಪೂಜಾರಿಯವರು ಸಮಾರಂಭದಲ್ಲಿ ಹಾಜರಿದ್ದು ಮಾತನಾಡಿದರು. ವೇದಿಕೆಯಲ್ಲಿ ಹರೇಕಳ ಗ್ರಾಮ ಪಂಚಾಯತ್ ಅಧ್ಯಕ್ಷೆ, ಉಪಾಧ್ಯಕ್ಷರಾದ ಶ್ರೀಮತಿ ದೇವಕಿ ಜಗನ್ನಾಥ, ನೇಮು ಮುಖಾರಿ, ಸದಸ್ಯೆ ಶ್ರೀಮತಿ ಈರಮ್ಮ ಹಾಗೂ ಮಂಜಯ್ಯ ಭಂಡಾರಿ ಉಪಸ್ಥಿತರಿದ್ದರು, ಕೊನೆಯಲ್ಲಿ ಮಹಮ್ಮದ್ ಅಶ್ರಾಫ್ ಧನ್ಯವಾದ ಅರ್ಪಿಸಿದರು.

ಹೊಸ ಸ್ಫೂರ್ತಿ ತುಂಬಿದ ಕೋಲಾರ ಎಸ್‌ಎಫ್‌ಐ ಅಧ್ಯಯನ ಶಿಬಿರ

ಹೊಸ ಶೈಕ್ಷಣಿಕ ವರ್ಷದ ಹೊಸ್ತಿಲಿನಲ್ಲಿ ನಿಂತಿರುವ ಎಸ್‌ಎಫ್‌ಐ ಕಾರ್ಯಕರ್ತರಿಗೆ ಸೈದ್ಧಾಂತಿಕ ದೃಷ್ಟಿ, ಸಂಘಟನಾತ್ಮಕ ದೃಷ್ಟಿಕೋನ ಹಾಗೂ ಹೊಸ ಸ್ಫೂರ್ತಿಯನ್ನು ನೀಡುವ ಹಿನ್ನೆಲೆಯಲ್ಲಿ ಜೂನ್ 12ರಿಂದ 15ರವರೆಗಿನ ಎಸ್‌ಎಫ್‌ಐನ ರಾಜ್ಯ ಮಟ್ಟದ ತರಬೇತಿ ಶಿಬಿರ ಕೋಲಾರದಲ್ಲಿ ಅತ್ಯಂತ ಯಶಸ್ವಿಯಾಗಿ ನಡೆಯಿತು.

ಗಣನೀಯ ಸಂಖ್ಯೆಯ ವಿದ್ಯಾರ್ಥಿನಿಯರು ಸೇರಿದಂತೆ 14 ಜಿಲ್ಲೆಗಳಿಂದ ಬಂದ ಆಯ್ದ 95 ಪ್ರತಿನಿಧಿಗಳು ಈ ಶಿಬಿರದಲ್ಲಿ ಭಾಗವಹಿಸಿದ್ದರು. ವಿವಿಧ ವಿಷಯಗಳ ಬಗ್ಗೆ ವಿವಿಧ ಸಂಗಾತಿಗಳು ಪಾಠ ಮಾಡಿದರು. ಸಮಾಜದ ಚಾರಿತ್ರಿಕ ಬೆಳವಣಿಗೆಗಳ ಹಿಂದಿನ ನಿರ್ಣಾಯಕ ಶಕ್ತಿ, ಆರ್ಥಿಕ ಅಂಶ, ಅದರಲ್ಲೂ ಸಮಾಜ ಉತ್ಪಾದನಾ ಸಂಬಂಧ ವರ್ಗ ಸಂಘರ್ಷ ಎಂಬ ವೈಜ್ಞಾನಿಕ ಸತ್ಯವನ್ನು ವಿವರಿಸಿದ ಸಮಾಜದ ಬೆಳವಣಿಗೆಯನ್ನು ಅರ್ಥೈಸುವ ವಿಧಾನ ಎಂಬ ಪಾಠವನ್ನು ಕಾಂ. ಸಿ.ನಂಜುಂಡಪ್ಪ ಅವರು ಮಾಡಿದರು.

ಕೋಮುವಾದದ ಮೂಲ ಅದು ಬೆಳೆದು ಬಂದ ಚಾರಿತ್ರಿಕ ಹಂತಗಳು ನಮ್ಮ ದೇಶ ಹಾಗೂ ಕರ್ನಾಟಕ ರಾಜ್ಯದಲ್ಲಿ ಅದರ ನಿರ್ದಿಷ್ಟ ಸ್ವರೂಪಗಳ ಬಗ್ಗೆ ಸ್ಪಷ್ಟ ಚಿತ್ರಣ ನೀಡಿದ್ದು ಕಾಂ. ಜಿ.ಎನ್.ನಾಗರಾಜ್ ಅವರ ಕೋಮುವಾದದ ಬಗೆಗಿನ ಪಾಠ.

ರಾಜಕೀಯ ಪರಿಸ್ಥಿತಿಯ ಬಗೆಗಿನ ಪಾಠದಲ್ಲಿ ಕಾಂ.ಶ್ರೀರಾಮರೆಡ್ಡಿಯವರು ಅಂತರಾಷ್ಟ್ರೀಯ ರಾಜಕೀಯದ ಹಲವಾರು ವೈರುಧ್ಯಗಳು, ತಿಕ್ಕಾಟ, ಬೆಳವಣಿಗೆಗಳ ಬಗೆಗೆ ಹಾಗೂ ರಾಷ್ಟ್ರ ರಾಜ್ಯಗಳ ರಾಜಕೀಯ ಪರಿಸ್ಥಿತಿಯ ಬಗೆಗೆ ವಿವರಿಸಿದರು.

ನೂತನ ಶಿಕ್ಷಣ ನೀತಿಯ ಬಗ್ಗೆ ಕಾಂ.ಜಿ.ಸಿ.ಬಯ್ಯಾರೆಡ್ಡಿಯವರು ಮಾತನಾಡಿದರು. ಎಸ್‌ಎಫ್‌ಐನ ಅಖಿಲ ಭಾರತ ಅಧ್ಯಕ್ಷರಾದ ಕಾಂ. ವೈ.ವೆಂಕಟೇಶ್ವರರಾವ್ ಸಂಘಟನೆಯನ್ನು ಕುರಿತು ಮಾತನಾಡಿದರು.

ಈ ಎಲ್ಲಾ ವಿಷಯಗಳ ಬಗ್ಗೆ ಗುಂಪು, ಚರ್ಚೆ, ಪ್ರಶ್ನೋತ್ತರಗಳಿಗೆ ಅವಕಾಶ ಮಾಡಲಾಗಿತ್ತು. ಈ ಮೂಲಕ ವಿದ್ಯಾರ್ಥಿಗಳು ತಮ್ಮ ಅನುಮಾನಗಳನ್ನು ಪರಿಹರಿಸಿಕೊಂಡರು.

ಎಸ್.ಎಫ್.ಐನ ರಾಜ್ಯ ಕಾರ್ಯದರ್ಶಿ ಕೆ.ಪ್ರಕಾಶ್ ರವರು ಮಂಡಿಸಿದ ಸಂಘಟನಾ ವರದಿಯ ಮೇಲೆ ಪ್ರತಿನಿಧಿಗಳು ಚರ್ಚೆ ನಡೆಸಿದರು.ಚರ್ಚೆಯಲ್ಲಿ ಒಟ್ಟು 20 ಪ್ರತಿನಿಧಿಗಳು ಸುಮಾರು 120 ನಿಮಿಷಗಳ ಕಾಲ ಮಾತನಾಡಿದರು.

1995-96ರ ಶೈಕ್ಷಣಿಕ ವರ್ಷದ ಕಾರ್ಯಕ್ರಮಗಳು ಹಾಗೂ ಪ್ರಸ್ತುತ ಶೈಕ್ಷಣಿಕ ಸಮಸ್ಯೆಗಳ ಆಧಾರದಲ್ಲಿ ತರಬೇತಿ ಶಿಬಿರ ನಿರ್ಣಯಗಳನ್ನು ಸರ್ವಾನುಮತದಿಂದ ಕೈಗೊಂಡಿದೆ.

25 ವರ್ಷಕ್ಕೆ ಕಾಲಿಟ್ಟು ಬೆಳ್ಳಿ ಹಬ್ಬ ಆಚರಿಸುತ್ತಿರುವ ಈ ವರ್ಷದಲ್ಲಿ ಒಂದು ಲಕ್ಷ ಸದಸ್ಯತ್ವ ಮಾಡಿಸಲು ಶಿಬಿರ ನಿರ್ಣಯಿಸಿದೆ. ಹಾಗೆ ರಾಜ್ಯದಲ್ಲಿ 500 ಪ್ರಾಥಮಿಕ ಘಟಕ ರಚಿಸಲು ಶಿಬಿರ ತೀರ್ಮಾನಿಸಿತು.

ಹಾಸ್ಟೆಲ್ ವಿದ್ಯಾರ್ಥಿಗಳ ಜ್ವಲಂತ ಸಮಸ್ಯೆಗಳ ಆಧಾರದಲ್ಲಿ ಹಾಸ್ಟೆಲ್ ವಿದ್ಯಾರ್ಥಿಗಳ ಜಿಲ್ಲಾ-ರಾಜ್ಯ ಮಟ್ಟದ ಸಮಾವೇಶ ಸಂಘಟಿಸುವುದು, ಸೆಪ್ಟೆಂಬರ್ 15ರಂದು ವಿದ್ಯಾರ್ಥಿಗಳ ಹಲವು ಸಮಸ್ಯೆಗಳ ಆಧಾರದಲ್ಲಿ ರಾಜ್ಯ ಮಟ್ಟದ ರ್‍ಯಾಲಿಯನ್ನು ಸಂಘಟಿಸುವುದು, ಹೈದರಾಬಾದ್ ಕರ್ನಾಟಕ ವಿದ್ಯಾರ್ಥಿಗಳ ಸಮಾವೇಶ ಇದನ್ನು ನಡೆಸಲು ಶಿಬಿರ ನಿರ್ಣಯಿಸಿತು.

ಬೆಳ್ಳಿ ಹಬ್ಬ ಆಚರಣೆ: ಶಿಕ್ಷಣ ತಜ್ಞರು, ಸಾಹಿತಿ, ಬುದ್ಧಿಜೀವಿಗಳನ್ನೊಳಗೊಂಡ ಆಚರಣಾ ಸಮಿತಿಯನ್ನು ರಚಿಸಿ ಎಸ್‌ಎಫ್‌ಐ ಬೆಳ್ಳಿ ಹಬ್ಬವನ್ನು ವೈವಿಧ್ಯಮಯ ಕಾರ್ಯಕ್ರಮಗಳ ಮೂಲಕ ಆಚರಿಸಲು ಶಿಬಿರ ತೀರ್ಮಾನಿಸಿದೆ. ಬೆಳ್ಳಿ ಹಬ್ಬದ ಅಂಗವಾಗಿ ಕಾಲೇಜಿಗೊಂದು ಕಾರ್ಯಕ್ರಮ, ಪ್ರತಿ ಜಿಲ್ಲೆಯಲ್ಲಿ ರಾಜ್ಯ ಮಟ್ಟದ ವಿಚಾರ ಸಂಕಿರಣಗಳು, ವಿದ್ಯಾರ್ಥಿ ಜಾಥಾಗಳು, ಶೈಕ್ಷಣಿಕ-ಸಾಮಾಜಿಕ ವಿಚಾರಗಳ ಒಂದು ಕಿರು ಹೊತ್ತಿಗೆ ಪ್ರಕಟಣೆ, ಕ್ರೀಡೋಸಾಂಸ್ಕೃತಿಕ ಸ್ಪರ್ಧೆಗಳನ್ನ ನಡೆಸುವುದು ಈ ಮೇಲಿನ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

"ದೇಶ ಉಳಿಸಿ" ಎಂದು ಇವರನ್ನಂತೂ ಕೇಳುವಂತಿಲ್ಲ!

"ಬಾಬರಿ ಮಸೀದಿ ನಾಶವಾದಾಗ ಇಡೀ ದೇಶದ ಬುದ್ಧಿ ಜೀವಿಗಳು, ಎಲ್ಲಾ ರಾಜಕಾರಣಿಗಳು ಆ ಕೃತ್ಯ ಮತ್ತು ಅದಕ್ಕೆ ಕಾರಣರಾದವರನ್ನು ಒಂದೇ ಉಸಿರಿನಿಂದ ಟೀಕಿಸಿದರು; ಖಂಡನೆಯ ಸುರಿಮಳೆಗರೆದರು. ಆದರೆ ಹಜರತ್ ಬಾಲ್ ಮಸೀದಿ, ಚರಾರ್-ಎ-ಷರೀಫ್ ದರ್ಗಾ ಧ್ವಂಸದ ಪ್ರಕರಣದ ಸಂದರ್ಭದಲ್ಲಿ ಇದೇ ಜನ ಬಾಯಿಗೆ ಬಟ್ಟೆ ಬಿಗಿದುಕೊಂಡು ಕುಳಿತರು."

ಇಂತಹ ತರ್ಕವನ್ನು ನೀವು ಬಹಳಸಲ ಕೇಳಿರಬಹುದು. ಅಯೋಧ್ಯೆ v/s ಕಾಶ್ಮೀರ -ಸಾಮಾನ್ಯವಾಗಿ ಹಿಂದೂ ಕೋಮುವಾದಿ ಸಂಸ್ಥೆಗಳ ಕಟ್ಟಾ ಕಾರ್ಯಕರ್ತರ ದಾಸ್ತಾನಿನಲ್ಲಿರುವ ಸಿದ್ಧತರ್ಕ.

ಆದರೆ ಈ ಬಾರಿ ಇದನ್ನು ಹೇಳಿದವರು ಹಿರಿಯ ಚಿಂತಕನೆನಿಸಿಕೊಂಡ, ಕಟು-ನೇರ ನುಡಿಗಳಿಗೆ ಹೆಸರಾದವರೆನಿಸಿಕೊಂಡ ಖ್ಯಾತ ಸಾಹಿತಿ ಡಾ. ಶಿವರಾಮ ಕಾರಂತರು ಜೂನ್ 26 ರಂದು ತುರ್ತು ಪರಿಸ್ಥಿತಿಯ 20ನೇ ವಾರ್ಷಿಕದ ಸಂದರ್ಭದಲ್ಲಿ ಸಮಾರಂಭವೊಂದರ ಅಧ್ಯಕ್ಷತೆ ವಹಿಸುತ್ತಾ ಅವರು ಭವಿಷ್ಯ ನುಡಿದರಂತೆ-"ಬುದ್ಧಿಜೀವಿಗಳು ಇರುವ ರೀತಿಯೇ ಇದು ಎನ್ನುವುದಾದರೆ ಈ ದೇಶವನ್ನು ಯಾರಿಂದಲೂ ಪಾರು ಮಾಡಲು ಸಾಧ್ಯವಿಲ್ಲ"!

ಹಜರತ್ ಬಾಲ್ ಮಸೀದಿಯಲ್ಲಿ, ಚರಾರ್-ಎ-ಷರೀಫ್.ದರ್ಗಾದಲ್ಲಿ ಪಾಕಿಸ್ತಾನದ ಸರಕಾರ ಬೆಂಬಲದಿಂದ ಧ್ವಂಸ ಕಾರ್ಯ ನಡೆಸಲು ಪ್ರಯತ್ನಿಸಿದ ರಾಷ್ಟ್ರವಿರೋಧಿಗಳೊಂದಿಗೆ ಉತ್ತರ ಪ್ರದೇಶದಲ್ಲಿ ಬಿಜೆಪಿ ಸರಕಾರ ಬೆಂಬಲದಿಂದ ಬಾಬರಿ ಮಸೀದಿ ಧ್ವಂಸ ಮಾಡಿದವರನ್ನು ಹೋಲಿಸಬೇಕೆಂಬುದು ಅವರ ಆಶಯವೇ? ಹಾಗಿದ್ದರೆ ನಮಗಂತೂ ಈ ಬಗ್ಗೆ ಆಕ್ಷೇಪವೇನಿಲ್ಲ. ಏಕೆಂದರೆ ಎರಡೂ ರಾಷ್ಟ್ರ-ವಿರೋಧಿ ಕೃತ್ಯಗಳು. ಆದರೆ ಈ ತರ್ಕ ಹೂಡುವವರು ಹೇಳುವುದು ಅದನ್ನಲ್ಲ. ಒಂದು ಸಾವಿರಕ್ಕೂ ಹೆಚ್ಚು ಅಮಾಯಕರ ಸಾವಿಗೆ ಕಾರಣವಾದ, ತಾವೇ ಮುಂದಿನ ಆಳರಸರು ಎನ್ನುವವರ ನೇತೃತ್ವದಲ್ಲಿ ನಡೆದ ಘಟನೆಯ ಬಗ್ಗೆ ಎದ್ದಷ್ಟು 'ಬೊಬ್ಬೆ' ಕಾಶ್ಮೀರವನ್ನು ತಾವೇ ಆಳುತ್ತೇವೆ ಎಂದು ಹೇಳುವವರ ನೇತೃತ್ವದಲ್ಲಿ ನಡೆದ ಘಟನೆಯ ಬಗ್ಗೆ ಏಕೆ ಎದ್ದಿಲ್ಲ ಎಂದು. ವಸ್ತುನಿಷ್ಠವಾಗಿ ಚಿಂತನೆ ಮಾಡಬಲ್ಲವರಿಗೆ ಇದು ಸ್ವಯಂವೇದ್ಯವಲ್ಲವೇ!

****

"ಪ್ರಜಾವಾಣಿ" ದೈನಿಕದ ಜೂನ್ 28ರ ಸಂಚಿಕೆಯ 'ವಾಚಕರ ವಾಣಿ' ಕಾಲಂನಲ್ಲಿ ದ.ಕ.ದ ಒಬ್ಬ ಓದುಗರು ದ.ಕ., ಉ.ಕ.ದ ಮಕ್ಕಳಿಗೆ ಇದೇ ಕಾರಂತರು ಬರೆದ ಪಠ್ಯಪುಸ್ತಕಗಳ ಬಗ್ಗೆ ಬರೆದಿದ್ದಾರೆ. ಆರನೇ ತರಗತಿಯ ಪಠ್ಯ ಪುಸ್ತಕವನ್ನು ಉಲ್ಲೇಖಿಸಿ ಅವರು ಹೀಗೆ ಬರೆದಿದ್ದಾರೆ.

"ಇದರಲ್ಲಿ 'ಕ್ಷೌರಿಕ ರಂಗ' ಎಂಬ ಒಂದು ಪಾಠವಿದೆ. ಈ ಪಾಠದಲ್ಲಿ ಲೇಖಕ ಕಾರಂತರು ಪೋಣಿಸಿರುವ ಮುತ್ತಿನಂಥ ಈ ಮಾತು ಬರುತ್ತದೆ. 'ಯಾರು ಯಾರು ಏನೇನನ್ನು ಮಾಡಿದರೆ ಚಂದವೋ, ಅವರವರು ಅವನ್ನು ಮಾಡಬೇಕು, ಆಡುವವರ ಮಕ್ಕಳು ಆಡಬೇಕು, ಬೇಡುವವರ ಮಕ್ಕಳು ಬೇಡಬೇಕು, ಅಲ್ಲವೆ?'

ಇದನ್ನು ಓದಿದಾಗ ಕ್ಷೌರಿಕ ಜಾತಿಯಲ್ಲಿ ಹುಟ್ಟಿರುವ ನನ್ನ ಮನಸ್ಸಿಗೆ ತೀವ್ರ ವೇದನೆಯಾಯಿತು. ಇಂಥ ನುಡಿ ಮುತ್ತುಗಳನ್ನು ಭಾರತದಲ್ಲಿ ಜನಿಸಿದ ಮೇಲುಜಾತಿಯವರು ಸೃಷ್ಟಿಸಬಹುದಲ್ಲದೆ ಬೇರೆ ಯಾರಿಗೆ ಸಾಧ್ಯ? ಪ್ರಾಯಶಃ ನನ್ನ ತಂದೆಗೆ ಇದು ಪಠ್ಯ ಪುಸ್ತಕವಾಗಿದ್ದ ಪಕ್ಷದಲ್ಲಿ ಅಂದಿನ ಪರಿಸ್ಥಿತಿಯಲ್ಲಿ ಅದನ್ನು ಹೇಗೋ ಸಹಿಸಿಕೊಂಡು ತೆಪ್ಪಗಿರಬಹುದಿತ್ತು. ನನ್ನ ಮಗ ಇದನ್ನು ಹೇಗೆ ಸಹಿಸಿಕೊಳ್ಳಬಹುದು?

ಯಾರು ಯಾರು ಏನೇನು ವೃತ್ತಿ ಮಾಡಬೇಕೋ ಅವರು ಅದನ್ನು ಮಾಡಿದರೇನೆ ... ಕಾರಂತರಂಥ ಮಹನೀಯರು ... ಮಾಡಿಕೊಳ್ಳದ ... ಉಪದೇಶ ನೀಡಬಹುದು

ಪುಟ 6 ನೋಡಿ

ವಿದ್ಯುತ್ ನೀತಿ ಹೇಗಿರಬಾರದು?

ಥಬೋಲ್‌ನಲ್ಲಿ ಎನ್ರೋನ್ -ಮಂಗಳೂರಿನಲ್ಲಿ ಕೊಜೆಂಟ್ರಿಕ್ಸ್
ಜನತೆಯ ಕೊರಳಿಗೆ ಹಾಕಿರುವ ಒರಳುಗಲ್ಲುಗಳು

ಸೆಪ್ಟೆಂಬರ್ 30, 1994 ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಮತ್ತು ಮಂಗಳೂರು ಪವರ್ ಕಂಪೆನಿ (ಎಂ.ಪಿ.ಸಿ.) ಎಂಬ ಕಂಪೆನಿಯ ನಡುವೆ "ವಿದ್ಯುತ್ ಖರೀದಿ ಒಪ್ಪಂದ" (PPA) ಎಂಬ ಒಪ್ಪಂದಕ್ಕೆ ಸಹಿ ಹಾಕಲಾಯಿತು. -ಇದನ್ನು ಕರ್ನಾಟಕದ ಜನತೆಗೆ ಆಗಲೇ ತಿಳಿಸಬೇಕಾಗಿತ್ತು. ಏಕೆಂದರೆ ಈ ಖರೀದಿಯ ಬೆಲೆ ತೆರಬೇಕಾದವರು ಅವರು. ಆಗ ಇದ್ದ ಮೊಯಿಲಿ ಸರ್ಕಾರ ನರಸಿಂಹರಾವ್ ನೇತೃತ್ವದ ಕಾಂಗ್ರೆಸ ಹೊಸ ಆರ್ಥಿಕ ನೀತಿಗಳಿಗೆ ಅನುಗುಣವಾಗಿ ತಿಳಿಸಲಿಲ್ಲ. ಆದರೆ ಇಂತಹ ನೀತಿಯನ್ನು ವಿರೋಧಿಸಿದ್ದ ಜನತಾದಳ ಸರಕಾರ ಕೂಡಾ ಈ ಒಪ್ಪಂದವನ್ನು ಬಹಿರಂಗಪಡಿಸುತ್ತಿಲ್ಲ. ಅದನ್ನು ಮರುಪರೀಶೀಲಿಸುವ ಬದಲು ಜುಲೈ 3 ಒಳಗೆ ಇದಕ್ಕೆ ಕೇಂದ್ರ ಸರ್ಕಾರ ಅನುಮತಿ ನೀಡಬೇಕೆಂದು ಒತ್ತಾಯ ಹಾಕುತ್ತಿದೆ!

ಮಂಗಳೂರು ಪವರ್ ಕಂಪೆನಿ ಅಮೇರಿಕಾದ ಕೊಜೆಂಟ್ರಿಕ್ಸ್ ಎನರ್ಜಿ ಇಂಕಾರ್ಪೊರೇಟೆಡ್ ಎಂಬ ಕಂಪೆನಿಯ ಒಡೆತನದಲ್ಲಿ ಮಂಗಳೂರಿನಿಂದ 31 ಕಿ.ಮೀ. ದೂರದಲ್ಲಿರುವ ನಂದಿಕೂರಿನಲ್ಲಿ ವಿದ್ಯುತ್ ಉತ್ಪಾದಿಸಲೆಂದು ರಚಿಸಿರುವ ಕಂಪೆನಿ. ಅಲ್ಲಿ ಈ ಕಂಪೆನಿ 250 ಮೆಗಾವಾಟ್ ವಿದ್ಯುತ್ ಉತ್ಪಾದಿಸುವ ಎರಡೆರಡು ಘಟಕಗಳನ್ನು ಎರಡು ಹಂತಗಳಲ್ಲಿ ಸ್ಥಾಪಿಸುತ್ತದೆ. ಇವು ಆಮದು ಮಾಡಿದ ಕಲ್ಲಿದ್ದಲನ್ನು ಉರುವಲಾಗಿ ಉಪಯೋಗಿಸಿ ವಿದ್ಯುತ್ ಉತ್ಪಾದಿಸುವ ಘಟಕಗಳಾಗಿರುತ್ತವೆ. ಈ ಘಟಕಗಳು ತಯಾರಿಸಿದ ವಿದ್ಯುತ್ತನ್ನು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ (ಕೆ.ಇ.ಬಿ.) ಖರೀದಿಸಿ ಬಳಕೆದಾರರಿಗೆ ಒದಗಿಸಬೇಕು. ಮೇಲೆ ಹೇಳಿದ ಒಪ್ಪಂದ ಯಾವ ದರದಲ್ಲಿ, ಯಾವ ಶರತ್ತುಗಳ ಮೇಲೆ ವಿದ್ಯುತ್ ಖರೀದಿಸಬೇಕು ಎಂಬ ಬಗ್ಗೆ ಆದ ಒಪ್ಪಂದ.

ಈ ಒಪ್ಪಂದವಾದ ಕೂಡಲೇ ಕೊಜೆಂಟ್ರಿಕ್ಸ್ ಕಂಪೆನಿಯ ಪ್ರತಿನಿಧಿ ಫ್ರಾಂಕ್ ಜೆ. ಬೆನ್ನರ್ ಆನಂದಾತಿರೇಕದಿಂದ ಇದೊಂದು "ವಿನ್ ವಿನ್ ಡೀಲ್" (ಯಾವುದೇ ರೀತಿಯಲ್ಲಿ ನಷ್ಟವಾಗದ, ಲಾಭವೇ ಲಾಭವಿರುವ ವ್ಯವಹಾರ) ಎಂದು ಉದ್ಗರಿಸಿದರಂತೆ.

ಜನವರಿ 1, 1997 ರಂದು ಈ ಯೋಜನೆಯ ಅಂದಾಜು ವೆಚ್ಚ ರೂ. 4387.48 ಕೋಟಿ ರೂ. ಸೆಪ್ಟೆಂಬರ್ 1994ರಲ್ಲಿ ಕೆ.ಇ.ಬಿ.ಯೊಂದಿಗೆ ಸಹಿ ಹಾಕಿದ ಒಪ್ಪಂದದ ಪ್ರಕಾರ ಕೊಜೆಂಟ್ರಿಕ್ಸ್ ನ ಮಂಗಳೂರು ಪವರ್ ಕಂಪೆನಿ (ಎಂ.ಪಿ.ಸಿ.)ಯಿಂದ ಜನವರಿ 1, 1997ರಂದು ಕಿಲೋ ವಾಟ್ ಗೆ ರೂ. 2.59 ದರದಲ್ಲಿ ವಿದ್ಯುತ್ತನ್ನು ಕೆ.ಇ.ಬಿ. ಪಡೆಯಬೇಕು.

ಕೊಜೆಂಟ್ರಿಕ್ಸ್‌ನ ಮಂಗಳೂರು ಯೋಜನೆಗೂ, ಈಗ ಕುಖ್ಯಾತ ಎನ್ರೋನ್‌ನ ಥಬೋಲ್ ಯೋಜನೆಗೂ ಬಹಳಷ್ಟು ಸಾಮ್ಯತೆಗಳಿವೆ. ಅದು ಸಹಜವೇ. ಏಕೆಂದರೆ ಇದು ಕೇಂದ್ರ ಸರ್ಕಾರ ಖಾಸಗಿ -ವಿದೇಶೀ ವಿದ್ಯುತ್ ಕಂಪೆನಿಗಳ ಬಂಡವಾಳಕ್ಕೆ 16ಶೇ. ಲಾಭಾಂಶ ನೀಡುವ ಗ್ಯಾರಂಟಿ ಒದಗಿಸಿರುವ ಏಳು ಅತಿವೇಗದ ಮಂಜೂರಾತಿಗೆ ಅರ್ಹವೆನಿಸಿಕೊಂಡ ಯೋಜನೆಗಳಲ್ಲಿ ಒಂದು. (ಇತರ ಯೋಜನೆಗಳೆಂದರೆ ಥಬೋಲ್, ಚಿನ್ನಪಾಡು, ಗೋದಾವರಿ ಹಾಗೂ ಪುಗುತನ್ ಅನಿಲ ಆಧಾರಿತ ಯೋಜನೆಗಳು ಹಾಗೂ ವಿಶಾಖಪಟ್ಟಣ ಮತ್ತು ಇಬ್ ವ್ಯಾಲಿ ಕಲ್ಲಿದ್ದಲು -ಆಧಾರಿತ ಯೋಜನೆಗಳು. ಕೊಜೆಂಟ್ರಿಕ್ಸ್ ನ ಮಂಗಳೂರು ಯೋಜನೆ ಕೂಡಾ ಕಲ್ಲಿದ್ದಲು ಆಧಾರಿತ ಯೋಜನೆ)

ಎನ್ರೋನ್ ಮತ್ತು ಕೊಂಜೆಂಟ್ರಿಕ್ಸ್ ಯೋಜನೆಗಳಲ್ಲಿ ಕೆಲವು ಭಿನ್ನತೆಗಳೂ ಇವೆ. ಮುಖ್ಯವಾಗಿ ಎನ್ರೋನ್ ನಂತೆ ಇನ್ನೂ ಕೊಜೆಂಟ್ರಿಕ್ಸ್ ಯೋಜನೆಗೆ ಕೇಂದ್ರ ವಿದ್ಯುತ್ ಪ್ರಾಧಿಕಾರದ ಮಂಜೂರಾತಿ ಇನ್ನೂ ಸಿಕ್ಕಿಲ್ಲ.

ಮೊದಲು ಸಾಮ್ಯತೆಗಳನ್ನು ನೋಡೋಣ.

⊙ **ವಿದ್ಯುತ್‌ದರ ಹೆಚ್ಚುತ್ತಾ ಹೋಗುತ್ತದೆ** - ಮೇಲೆ ಹೇಳುವ ಒಪ್ಪಂದದಲ್ಲಿನ ದರಕ್ಕೆ (ಕಿಲೋವಾಟ್‌ಗೆ ರೂ. 2.59 ಎನ್ರೋನ್‌ನಲ್ಲಿ ಇದು 2.40) ಯಾವ ಅರ್ಥವೂ ಇಲ್ಲ. ಏಕೆಂದರೆ ಇದು ಹಲವಾರು ಅಂಶಗಳನ್ನು ಅವಲಂಬಿಸಿದೆ. ಮುಖ್ಯವಾಗಿ ವಿದೇಶೀ ವಿನಿಮಯ ದರ ಹಾಗೂ ಅಮೇರಿಕಾ ಮತ್ತು ಭಾರತದಲ್ಲಿನ ಹಣದುಬ್ಬರ ದರವನ್ನು ಅವಲಂಬಿಸಿದೆ. ಈ ಲೆಕ್ಕಾಚಾರದಲ್ಲಿ ಭಾರತದ ರೂಪಾಯಿಗೆ ಶೇ. 10 ಹಾಗೂ ಡಾಲರಿಗೆ ಶೇ. 4ಹಣದುಬ್ಬರದರ ಎಂದು ಪರಿಗಣಿಸಲಾಗಿದೆ. ಆದರೆ ಕೆ.ಇ.ಬಿ. ತಾನು ಪಡೆಯುವ ವಿದ್ಯುತ್ತಿಗೆ ಆಯಾಯ ಸಮಯದಲ್ಲಿರುವ ನಿಜವಾದ ಹಣದುಬ್ಬರದ ದರದಲ್ಲಿ ಬೆಲೆ ತೆರಬೇಕು. ಅಂದರೆ ಕೆ.ಇ.ಬಿ. ತೆರಬೇಕಾದ ಹಣ (ಅಂದರೆ ಬಳಕೆದಾರರ ಮೇಲೆ ಹಾಕುವ ದರ) ಹೆಚ್ಚುತ್ತಲೇ ಹೋಗಬೇಕು. ಭಾರತದಲ್ಲಿ ಈಗ ಇರುವ ಯಾವ ವಿದ್ಯುತ್ ಯೋಜನೆಯಲ್ಲೂ ಈ ರೀತಿ ತಂತಾನೇ ದರ ಹೆಚ್ಚುವ ಅವಕಾಶವಿಲ್ಲ.

⊙ **ಆಮದು ಮಾಡಿದ ಉರುವಲು:** ಎನ್ರೋನ್ ಯೋಜನೆಯಲ್ಲಿ ಆಮದು ಮಾಡಿದ ಅನಿಲವನ್ನು ಉರುವಲಾಗಿ ಉಪಯೋಗಿಸಿದರೆ ಕೊಜೆಂಟ್ರಿಕ್ಸ್ ಯೋಜನೆಯಲ್ಲಿ ಆಮದು ಮಾಡಿದ ಕಲ್ಲಿದ್ದಲನ್ನು ಉರುವಲಾಗಿ ಉಪಯೋಗಿಸಲಾಗುತ್ತದೆ. ಸಹಜವಾಗಿಯೇ ಈ ವಿದ್ಯುತ್ ಸ್ಥಾವರ ನಿರ್ವಹಣಾ ವೆಚ್ಚ ಹೆಚ್ಚಾಗುತ್ತದೆ.

⊙ **ವಿದೇಶೀ ಕಂಪೆನಿಗೆ ಲಾಭದ ಗ್ಯಾರಂಟಿ** ಮೊದಲೇ ಹೇಳಿದಂತೆ ಈ ಯೋಜನೆಯಲ್ಲಿ ಖಾಸಗೀ ವಿದೇಶೀ ಕಂಪೆನಿಗೆ ಕನಿಷ್ಠ ಶೇ. 16 ಲಾಭದ ದರದ ಭರವಸೆ ನೀಡಲಾಗಿದೆ. ಕೆ.ಇ.ಬಿಗೆ ಹಣ ತೆರುವಲ್ಲಿ ತಪ್ಪಿದ್ದರೆ ಅದನ್ನು ತುಂಬಿಸಿಕೊಡುವುದು. ಕರ್ನಾಟಕ ರಾಜ್ಯ ಸರಕಾರದ ಹೊಣೆ. ರಾಜ್ಯ ಸರಕಾರ ಈ ಹೊಣೆಯಿಂದ ನುಣುಚಿಕೊಳ್ಳದಂತೆ ಕೇಂದ್ರ ಸರಕಾರ ಪ್ರತಿ ಗ್ಯಾರಂಟಿ ನೀಡುತ್ತದೆ.

⊙ **ವಿದೇಶೀ ಕಂಪೆನಿಗೆ ಮಾರಾಟದ ಗ್ಯಾರಂಟಿ** ವಿದ್ಯುತ್‌ನ ಅವಶ್ಯಕತೆ ಕಮ್ಮಿಯಿದ್ದಾಗ ಕೆ.ಇ.ಬಿ. ಈ ಹೆಚ್ಚುದರದ ವಿದ್ಯುತ್ತಿನ ಬದಲು ಅಗ್ಗದರದ ಮೂಲಗಳಿಂದ ವಿದ್ಯುತ್ ಪಡೆಯುವಂತಿಲ್ಲ. ಕೊಜೆಂಟ್ರಿಕ್ಸ್ ಕಂಪೆನಿ ಉತ್ಪಾದಿಸುವ ವಿದ್ಯುತ್ ನಲ್ಲಿ ಕನಿಷ್ಠ ಶೇ. 85ಶೇ. ವನ್ನು ಕೆ.ಇ.ಬಿ. ಖರೀದಿಸಲೇ ಬೇಕು. ಅದಕ್ಕೆ ಅಗತ್ಯವಿಲ್ಲದಿದ್ದರೂ.

ಇಂತಹ ವಿದ್ಯುತ್ ಸ್ಥಾವರಗಳಿಗೆ ಬೇಸ್ ಲೋಡ್ ಸ್ಟೇಷನ್ ಅನ್ನುತ್ತಾರೆ. ಅಂದರೆ ವಿದ್ಯುತ್ ಬಳಕೆ ದಿನವಿಡೀ ಒಂದೇ ಪ್ರಮಾಣದಲ್ಲಿ ಇರುವುದಿಲ್ಲ, ಕೆಲವು ಅವಧಿಯಲ್ಲಿ ಮಾತ್ರ ವಿದ್ಯುತ್‌ಗೆ ಗರಿಷ್ಠ ಬೇಡಿಕೆಯಿದ್ದು ಉಳಿದ ಅವಧಿಯಲ್ಲಿ ಆ ಬೇಡಿಕೆ ಕಮ್ಮಿಯಾಗುತ್ತದೆ. ಆದ್ದರಿಂದ ಸಾಮಾನ್ಯ ಬೇಡಿಕೆ ಯಿರುವ ಅವಧಿಯಲ್ಲಿ ಅಗ್ಗ ದರದ ವಿದ್ಯುತ್ ಮೂಲದಿಂದ ಅದನ್ನು ಪಡೆದು, ಬೇಡಿಕೆ ಹೆಚ್ಚಿರುವ ಅವಧಿಯಲ್ಲಿ ಮಾತ್ರ ಹೆಚ್ಚು ವೆಚ್ಚದ ಮೂಲದಿಂದ ವಿದ್ಯುತ್ ಪಡೆಯುವುದು ಸಾಮಾನ್ಯವಾಡಿಕೆ. ಆದರೆ ಈ ಒಪ್ಪಂದ ಆ ವಾಡಿಕೆಯನ್ನು ತಿರುಗು ಮುರುಗುಗೊಳಿಸಿದೆ. ಅಂದರೆ ವಿದ್ಯುತ್ ಬೇಡಿಕೆ ಕಮ್ಮಿಯಿದ್ದಾಗ ಕೆ.ಇ.ಬಿ. ಅಗ್ಗದರದಲ್ಲಿ ಸಿಗುವ ಜಲವಿದ್ಯುತ್ತನ್ನು ಕೊಳ್ಳುವಂತಿಲ್ಲ, ಕೊಜೆಂಟ್ರಿಕ್ಸ್‌ನ ವಿದ್ಯುತ್ತಿನ ಶೇ. 85ವನ್ನಾದರೂ ಬಳಸಿದ ಮೇಲೆಯೇ ಜಲವಿದ್ಯುತ್ ಅಥವಾ ಇತರ ಮೂಲದಿಂದ ಅದು ವಿದ್ಯುತ್ತನ್ನು ಪಡೆಯಬೇಕು. ಸಹಜವಾಗಿಯೇ ಇದರಿಂದ ಒಟ್ಟಾರೆಯಾಗಿ ವಿದ್ಯುತ್ ಬಳಕೆಯ ಖರ್ಚು ಹೆಚ್ಚುತ್ತದೆ.

⊙ **ಜನರ ಬೆನ್ನ ಹಿಂದೆ ಗುಟ್ಟಿನ ವ್ಯವಹಾರ** ಎನ್ರೋನ್ ಕಂಪೆನಿಯೊಂದಿಗೆ ಮಹಾರಾಷ್ಟ್ರ ಸರಕಾರ, ಮಹಾರಾಷ್ಟ್ರ ವಿದ್ಯುಚ್ಛಕ್ತಿ ಮಂಡಳಿ ನಡೆಸಿದ ಮಾತುಕತೆಗಳು, ಆದ ಒಪ್ಪಂದ, ಕೇಂದ್ರ ಸರಕಾರ ಗ್ಯಾರಂಟಿ ಈ ಎಲ್ಲಾ ವ್ಯವಹಾರಗಳೂ ಗುಟ್ಟಾಗಿಯೇ ನಡೆದವು. ಈ ವ್ಯವಹಾರದಲ್ಲಿ ಏನೋ ಜನ-ವಿರೋಧಿ ಅಂಶ ಇದೆ ಎಂಬ ವಾಸನೆ ಬಂದು ವಿರೋಧ ಆಂದೋಲನ ಆರಂಭವಾದ ಮೇಲೆಯೇ ಒಂದೊಂದಾಗಿ ಈ ವ್ಯವಹಾರದ ಅಂಶಗಳು ಬೆಳಕಿಗೆ ಬಂದವು. ಕೊಜೆಂಟ್ರಿಕ್ಸ್ ಬಗ್ಗೆ ಕೂಡಾ ಇದೇ ಗುಟ್ಟನ್ನು 'ಕಾಪಾಡಿ'ಕೊಳ್ಳಲಾಗುತ್ತಿದೆ. ಸೆಪ್ಟೆಂಬರ್ ನಲ್ಲೇ ಒಪ್ಪಂದವಾಗಿದ್ದರೂ, ಮಾತುಕತೆ ನಡೆಯುವ ವೇಳೆಗೆ ಇದ್ದ ಮುಖ್ಯಮಂತ್ರಿಗಳು ಅದಾಗಲೇ ಅಧಿಕಾರ ಕಳಕೊಂಡಿದ್ದರೂ ನಂತರ ಮತ್ತೊಬ್ಬ ಮುಖ್ಯಮಂತ್ರಿಗಳು ಅಧಿಕಾರ ಕಳಕೊಂಡು ಮೂರನೇ ಮುಖ್ಯಮಂತ್ರಿ ಬಂದರೂ ಇದುವರೆಗೂ ಒಪ್ಪಂದದ ವಿವರಗಳನ್ನು ಕರ್ನಾಟಕದ ಜನತೆಗೆ ತಿಳಿಸಿಲ್ಲ ಏಕೆ?

ಈ ಎನ್ರೋನ್‌ಗಳು, ಕೊಜೆಂಟ್ರಿಕ್ಸ್‌ಗಳ ದೇಶಗಳಲ್ಲಿ ಅಂದರೆ ಖಾಸಗೀ ವಿದ್ಯುತ್ ಉತ್ಪಾದಕರಿಗೆ ಅವಕಾಶವಿರುವ ದೇಶಗಳಲ್ಲಿ ಇಂತಹ ವಿದ್ಯುತ್ ಸ್ಥಾವರಗಳ ವಿವರಗಳ ಬಗ್ಗೆ ಸಾರ್ವಜನಿಕ ಚರ್ಚೆ, ಪರಿಶೀಲನೆ ನಡೆದ ಮೇಲೆಯೇ ಅವು ಅಸ್ತಿತ್ವಕ್ಕೆ ಬರಲು ಸಾಧ್ಯ. ಆದರೆ ಅಲ್ಲಿಯಂತೆ ಖಾಸಗಿಯವರಿಗೆ ಅವಕಾಶ ಕೊಡಬೇಕೆನ್ನುವ ಸರಕಾರಗಳಾಗಲೀ, ಆ ಕಂಪೆನಿಗಳೇ ಆಗಲಿ ಇಲ್ಲಿ ಮಾತ್ರ ಆ ಬಗ್ಗೆ ಜನಗಳಿಗೆ ಏನೂ ತಿಳಿಯಬಾರದು ಎಂದೇಕೆ ಬಯಸುತ್ತಾರೆ? ಮಹಾರಾಷ್ಟ್ರದ, ಕರ್ನಾಟಕದ ಜನತೆ ಇದಕ್ಕೆ ಅನರ್ಹರೆಂದೇ ಅಥವಾ ಈ ವ್ಯವಹಾರಗಳಲ್ಲಿರ ಬಹುದಾದ ಅವ್ಯವಹಾರಗಳು ಅವರ ಗಮನಕ್ಕೆ ಬರದಿರಲಿ ಎಂದೇ?

ಮೊದಲೇ ಹೇಳಿದಂತೆ ಕುಪ್ರಸಿದ್ಧ ಎನ್ರೋನ್ ಹಾಗೂ ಕೊಜೆಂಟ್ರಿಕ್ಸ್ ಯೋಜನೆಗಳಲ್ಲಿ ಭಿನ್ನತೆಗಳು ಇವೆ.

⊙ ಮೊದಲನೆಯದಾಗಿ ಕೊಜೆಂಟ್ರಿಕ್ಸ್ ನ ಯೋಜನೆಗೆ ಇನ್ನೂ ಕೇಂದ್ರ ವಿದ್ಯುಚ್ಛಕ್ತಿ ಪ್ರಾಧಿಕಾರದ ಮಂಜೂರಾತಿ ಸಿಕ್ಕಿಲ್ಲ. ಹಿಂದಿನ ಕಾಂಗ್ರೆ ಮುಖ್ಯಮಂತ್ರಿ ಹಾಗೂ ಮಹಾರಾಷ್ಟ್ರದವರೇ ಆದ ಕೇಂದ್ರ ವಿದ್ಯುತ್ ಮಂತ್ರಿಯವರ ಪ್ರಭಾವದಿಂದ ಮಂಜೂರಾತಿ ಪಡೆದ ಎನ್ರೋನ್ ಯೋಜನೆ ಈಗ ತೀವ್ರ ವಿರೋಧ ಎದುರಿಸುತ್ತಿದ್ದರೆ, ಎನ್ರೋನ್ ಯೋಜನೆ ವಿರೋಧಿಸುವ ಜನತಾದಳದ ಕರ್ನಾಟಕ ರಾಜ್ಯ ಸರಕಾರ ಬೇಗನೇ ಅನುಮತಿ ಕೊಡಿ ಎಂದು ಕೇಂದ್ರವನ್ನು ಒತ್ತಾಯಿಸುತ್ತಿದೆ. ಮಹಾರಾಷ್ಟ್ರದಲ್ಲಿ ವ್ಯಾಪಕ ವಿರೋಧವನ್ನು ಕಂಡು ತಾನೂ ಸೇರಿಕೊಂಡ ಬಿಜೆಪಿ ಅಲ್ಲಿ ಅಧಿಕಾರಕ್ಕೆ ಒಂದು ತಿಂಗಳುಗಳೇ ಆದರೂ ಸ್ಪಷ್ಟ ನಿರ್ಧಾರ ತಿಳಿಸಲು ಹಿಂದೇಟು ಹಾಕುತ್ತಿದ್ದರೆ ಕರ್ನಾಟಕದಲ್ಲಿ ಬಹುಶಃ ವಿರೋಧ ಪಕ್ಷವಾಗಿರುವುದರಿಂದ ವಿರೋಧಿಸುತ್ತಿದೆ.

⊙ ಕೊಜೆಂಟ್ರಿಕ್ಸ್ ಯೋಜನೆ ಕಲ್ಲಿದ್ದಲು ಆಧಾರಿತವಾದದ್ದು -ಎನ್ರೋನ್ ನಂತೆ ಅನಿಲ ಆಧಾರಿತವಲ್ಲ. ಆದರೆ ಎನ್ರೋನ್ ನಂತೆ ಆಮದು ಉರುವಲಿನ ಮೇಲೆ ಆಧರಿಸಿದ್ದು, ಆಮದು ಕಲ್ಲಿದ್ದಲನ್ನು ಬಳಸಿದರೂ ಸ್ಥಾವರದ ವಿನ್ಯಾಸ ಸ್ಥಳೀಯ ಕಲ್ಲಿದ್ದಲನ್ನು ಬಳಸಲು ಸಾಧ್ಯವಾಗುವಂತೆ ಮಾಡಬಹುದಿತ್ತು ಎಂದು ತಜ್ಞರು ಹೇಳುತ್ತಾರೆ. ಆದರೆ ಕೊಜೆಂಟ್ರಿಕ್ಸ್ ಯೋಜನೆ ಕೇವಲ ಆಮದು ಕಲ್ಲಿದ್ದಲನ್ನು ಮಾತ್ರ ಬಳಸುವಂತೆ ವಿನ್ಯಾಸ ಮಾಡಲಾಗಿದೆ. ಇನ್ನೊಂದು

ಎನ್ರೋನ್ ಮಹಾರಾಷ್ಟ್ರದ ಜನತೆಯ ವಿರೋಧ ಮುಂಬೈಯ ಒಂದು ಪ್ರತಿಭಟನೆಯ ಚಿತ್ರ



ಮೂರುವರೆ ವರ್ಷ ಕಳೆದರೂ ಖಾಸಗೀ ವಲಯದಲ್ಲಿ ಒಂದೇ ಒಂದು ಮೆಗಾವಾಟ್ ಹೆಚ್ಚು ವಿದ್ಯುತ್ ಕೂಡಾ ಉತ್ಪಾದನೆಯಾಗಿಲ್ಲ ಏಕೆ?

ನರಸಿಂಹರಾವ್ ಸರಕಾರದ ಎನ್ರೋನ್ ನೀತಿಬಗ್ಗೆ ಸಂಸದೀಯ ಟೀಕೆ ಟಿಪ್ಪಣಿಗಳು

ವಿದ್ಯುತ್ ವಲಯದಲ್ಲಿ 1991ರಲ್ಲಿ ಆರಂಭಿಸಿದ ನೀತಿಯಿಂದಾಗಿ ಖಾಸಗೀ ವಲಯಕ್ಕೆ ಅನಗತ್ಯ ವಿಶೇಷ ಪ್ರೋತ್ಸಾಹಕ ರಿಯಾಯ್ತಿಗಳನ್ನು ಕೊಡಲಾಗುತ್ತಿದೆ. ಹಾಗೂ ಸಾರ್ವಜನಿಕ ವಲಯದ ವಿದ್ಯುತ್ ಘಟಕಗಳನ್ನು ಖಾಸಗೀ ವಲಯಕ್ಕೆ ವರ್ಗಾಯಿಸುವ ತರಾತುರಿ ನಡೆದಿದೆ. ಆದರೆ ಈ ಹೊಸ ವಿದ್ಯುತ್ ಸಾಮರ್ಥ್ಯ ಕೂಡಾ ಸ್ವಾತಂತ್ರ್ಯ ವಿದ್ಯುತ್ ಉತ್ಪಾದಕದಲ್ಲಿ ಹೆಚ್ಚಿಲ್ಲ.

ಇದು ಸಂಸತ್ತಿನ ವಿದ್ಯುತ್ ಕುರಿತಾದ ಸ್ಥಾಯೀ ಸಮಿತಿಯ 21ನೇ ವರದಿಯ ಒಂದು ಟಿಪ್ಪಣಿ ಈ ವಿದ್ಯುತ್ ನೀತಿ ಹಾಗೂ ಅದು ಅನುಷ್ಠಾನದ ಆಮೂಲಾಗ್ರ ಪರಾಮರ್ಶೆ ಅಗತ್ಯ ಎಂದು ಅದು ಹೇಳಿದೆ. ಈ ವರದಿ ಖಾಸಗಿಯವರಿಗೆ ನೀಡುತ್ತಿರುವ ಅನಗತ್ಯ ಪ್ರೋತ್ಸಾಹಗಳನ್ನು ಕುರಿತಂತೆ ನೀಡಿರುವ ಮುಖ್ಯ ಶಿಫಾರಸುಗಳು, ಮಾಡಿರುವ ಪ್ರಮುಖ ಟೀಕೆಗಳು ಹೀಗಿವೆ.

ಸ್ಪರ್ಧಾತ್ಮಕ ಸವಾಲು ಕೂಗುವ (ಬಿಡ್) ಮೂಲಕ ವಿದ್ಯುತ್ ಕಂಪೆನಿಗಳನ್ನು ಆರಿಸುವ ಬದಲು ಸರಕಾರ ದ್ವಿಪಕ್ಷೀಯ ಮಾತುಕತೆಗಳ ಮೂಲಕ ವ್ಯವಹಾರ ಕುದುರಿಸುವ ಮಾರ್ಗ ಹಿಡಿದೆ. ಸಮಿತಿ ಈ ಪ್ರಶ್ನೆಯನ್ನು ಎತ್ತಿದ ಮೇಲಷ್ಟೇ ಜನವರಿ 18, 1995ರಂದು ಕೇಂದ್ರ ಸರಕಾರ ರಾಜ್ಯ ಸರಕಾರಗಳಿಗೆ ಸ್ಪರ್ಧಾತ್ಮಕ ಕೂಗುವುದನ್ನು ಕಡ್ಡಾಯ ಮಾಡಿ ಮಾರ್ಗದರ್ಶಕ ನಿಯಮಾವಳಿ ನೀಡಿದೆ. ಸರಿಯಾದ ಆಯ್ಕೆ ಸಾಧ್ಯವಾಗಬೇಕಾದರೆ ಹರಾಜು ಕೂಗುವ ವಿಧಾನ ಕಣ್ಣಿಗೆ ಕಾಣುವಂತಿರಬೇಕು. ಮುಚ್ಚುಮರೆಯಿರಬಾರದು. ಒಂದು ನಿರ್ದಿಷ್ಟ ಅಳತೆಗೋಲುಗಳ ಆಧಾರದ ಮೇಲೆ ಇವನ್ನು ನಿರ್ಧರಿಸಬೇಕಾಗುತ್ತದೆ.

⊙ ಕೆಲವು ರಾಜ್ಯ ಸರಕಾರಗಳು ಸಹಿ ಹಾಕಿರುವ ತಿಳುವಳಿಕೆ ಪತ್ರ (MOU)ಗಳ ಅವಧಿ 5 ವರ್ಷಗಳಷ್ಟು ದೀರ್ಘವಾಗಿದೆ. ಹಲವು ಗಂಭೀರವಲ್ಲದ ಪ್ರಸ್ತಾವಗಳು ಇಂತಹ ಹಾಗೂ ಹೆಚ್ಚು ಖರ್ಚಿನ ಪ್ರಸ್ತಾವಗಳನ್ನು ಕೈ ಬಿಡಲು ಈ ಬಗ್ಗೆ ಮರುಪರಿಶೀಲನೆ ಮಾಡಬೇಕು.

⊙ ಸ್ಥಾವರದ ಉತ್ಪಾದನೆಯ ಶೇ. 68.5 ವಿದ್ಯುತ್ ಖರೀದಿಯ ಗ್ಯಾರಂಟಿ ನೀಡಿ ಖಾಸಗಿ ವಿದೇಶೀ ಶೇರು ಬಂಡವಾಳದ ಮೇಲೆ ಶೇ. 16. ಲಾಭಾಂಶವನ್ನು ಕೊಡಿಸುವ, ಶೇ. 568.6 ಕ್ಕಿಂತ ಹೆಚ್ಚಿನ ವಿದ್ಯುತ್ ಪ್ರತಿಯೊಂದು ಶೇಕಡಾ ಪಾಯಿಂಟ್‌ಗೆ 0.7ಶೇ. ಹೆಚ್ಚಿನ ಲಾಭಾಂಶ ನೀಡುವ ಗ್ಯಾರಂಟಿ ನೀಡಿರುವುದು ವಿಪರೀತ ಹೆಚ್ಚು. ಕಾರಣ ಇದುವರೆಗೆ ಮಂಜೂರಾತಿ ನೀಡಿದ ಇಂತಹ ಖಾಸಗಿ ವಿದ್ಯುತ್ ಘಟಕಗಳು ಶೇ. 80 ಕ್ಕಿಂತ ಹೆಚ್ಚಿನ ಖರೀದಿಸಲು ಗ್ಯಾರಂಟಿ ನೀಡಲಾಗಿದೆ. ಅಥವಾ ಬೇರೆಯವರಿಗೆ ಮಾರಲು ಅವಕಾಶ ನೀಡಲಾಗಿದೆ. ಇದರ ಪುನರ್ವಿಮರ್ಶೆ ಮಾಡಿ ರಾಷ್ಟ್ರೀಯ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಅದನ್ನು ತರ್ಕಬದ್ಧ ಮಟ್ಟಕ್ಕಿಳಿಸಲು ಕ್ರಮ ಕೈಗೊಳ್ಳಬೇಕು.

⊙ ವಿದ್ಯುತ್ ಖರೀದಿ ದರ ಗೊತ್ತುಪಡಿಸಲು "ಖರ್ಚು +" ನಿಲುವು ತಳೆದಿರುವುದು ಸೂಕ್ತವಲ್ಲ. ಏಕೆಂದರೆ ಇದರಿಂದ ಖಾಸಗೀ ಬಂಡವಾಳ ಹೂಡಿಕೆದಾರರು ಬೇಕೆಂದೇ ಖರ್ಚನ್ನು ಬಡಾಯಿಸಿ ಹೇಳಿ ಇದರಿಂದ ದರ ಹೆಚ್ಚುವಂತೆ ಮಾಡುತ್ತಾರೆ. ಇದರ ಬದಲು ಸರಕಾರ ಏಕೈಕ ದರವೊಂದನ್ನು ನಿಗದಿಪಡಿಸಿ ಈ ದರದಲ್ಲಿ ವಿದ್ಯುತ್ತನ್ನು ಮಾರುವಂತೆ ಖಾಸಗೀ ಬಂಡವಾಳ ಹೂಡಿಕೆದಾರರಿಗೆ ಹೇಳುವ ವಾಡಿಕೆಯನ್ನು ಪರಿಶೀಲಿಸಬೇಕು.

⊙ ಥಬೋಲ್ ಯೋಜನೆಗೆ ಪ್ರತಿ ಗ್ಯಾರಂಟಿ ನೀಡುವ ಕೇಂದ್ರ ಸರಕಾರದ ನಿರ್ಣಯವನ್ನು ಪರೀಕ್ಷಿಸಿದ ಸಮಿತಿ "ಯಾವುದೇ ಯೋಜನೆಗೆ ಇಂತಹ ಪ್ರತಿ-ಗ್ಯಾರಂಟಿ ಅನಾವಶ್ಯಕ. ಏಕೆಂದರೆ ಇಂತಹ ಗ್ಯಾರಂಟಿಗಳಿಲ್ಲದೆ ಬಂಡವಾಳ ಹೂಡಲು ಹಲವು ಅಂತರ್ರಾಷ್ಟ್ರೀಯ ವಿದ್ಯುತ್ ಕಂಪನಿಗಳು ಸಿದ್ಧವಾಗಿವೆ" ಎಂದಿದೆ. ಅಲ್ಲದೆ ಕೆಲವೇ ಆಯ್ದ ಯೋಜನೆಗಳಿಗೆ ಮಾತ್ರ ಪ್ರತಿ ಗ್ಯಾರಂಟಿ ಕೊಡುವುದನ್ನು ಸಮರ್ಥಿಸಿಕೊಳ್ಳಲು ಸಾಧ್ಯವಿಲ್ಲ ಎಂದು ಸಂಸದೀಯ ಸ್ಥಾಯೀ ಸಮಿತಿ ಅಭಿಪ್ರಾಯಪಟ್ಟಿದೆ.

⊙ ವಿದ್ಯುತ್ ಉತ್ಪಾದನೆಯ ಪರಿಣಾಮಕಾರಿ ಬಳಕೆಯಾಗಬೇಕಾದರೆ ರಾಜ್ಯ ವಿದ್ಯುತ್ ಮಂಡಳಿಗಳ ಹಣಕಾಸು ಆರೋಗ್ಯ ಸುಧಾರಿಸಲೇಬೇಕು. ಹೀಗೆ ಮಾಡಬೇಕಾದರೆ ದರಗಳನ್ನು ತರ್ಕಬದ್ಧಗೊಳಿಸಬೇಕು, ಕಾರ್ಯನಿರ್ವಹಣೆಯ ದಕ್ಷತೆ ಹೆಚ್ಚಿಸಲು, ಬಿಲ್ ತಯಾರಿಕೆ ಮತ್ತು ವಸೂಲಿಯ ಸರ್ವತೋಮುಖ ಸುಧಾರಣೆ ತರಲು, ಖರ್ಚು ಹತೋಟಿ ಪ್ರಯತ್ನ ನಡೆಸಲು, ಮಾನವ ಮತ್ತು ಇತರ ಸಂಪನ್ಮೂಲಗಳ ಗರಿಷ್ಠ ಪ್ರಯೋಜನ ಪಡೆಯಲು ತುರ್ತು ಕ್ರಮಗಳನ್ನು ಕೈಗೊಳ್ಳಬೇಕು. ಅಂದರೆ ಒರಿಸ್ಸಾದ

ಯೆಂದವರರೆ ಆಮದು ಮಾಡಿದ ಕಲ್ಲಿದ್ದಲು ದಕ್ಷ ಎಂಬ ಕಾರರಣಕ್ಕೆ ಅದನ್ನು ಆರಿಸಿದ್ದರೂ ದಲು ಖರ್ಚನ್ನು ಲೆಕ್ಕ ಹಾಕುವಾಗ ಸ್ಥಳೀಯ ು ಬಳಕೆಯ ಪ್ರಮಾಣವನ್ನೇ ಆಧಾರವವಾಗಿ ಕ್ಕಾಗಿವೆ. ಅಂದರೆ ಮಂಗಳೂರು ಯೋಜನೆ ುಮದಾದ ಉರುವಲಿನ ನಿಜವಾದ ಖರ್ಚ ಹೆಚ್ಚು ಹಣವನ್ನು ಕೆ.ಇ.ಬಿ. ತೆರಬೇಕು. ಇದು ಟ್ರಿಕ್ಸ್ ಜೇಬಿಗೆ ಹೋಗುತ್ತದೆ.

ಂದ್ರ ಸರಕಾರ ಉದಾರವಾಗಿ ಕೊಡಮಾಡುವ 6 ಗ್ಯಾರಂಟಿ ಲಾಭಾಂಶದಿಂದ ಸಾಧ್ಯವಾದಷ್ಟು ಪ್ರಯೋಜನ ಪಡೆಯಲು ಎನ್ರೋನ್ ಯೋಜ ಯೋಜನೆಯ ಅಂದಾಜು ವೆಚ್ಚವನ್ನೇ ಬಹಳ ುಸಿ ಹೇಳಲಾಗಿದೆ. ಸಾಮಾನ್ಯವಾಗಿ ಒಂದು ಸ್ಥಾವರದ ಪ್ರಮುಖ ಯಂತ್ರೋಪಕರಣಗಳ ಒಟ್ಟು ಯೋಜನೆಯ ಶೇ. 60 ರಷ್ಟಿರುತ್ತದೆ. ಇತರ ಖರ್ಚು ಶೇ. 40 ಆದರೆ ಎನ್ರೋನ್ ನೆಯಲ್ಲಿ ಇದು ಶೇ, 80 ಅಂದರೆ ಇತರ ಗಳನ್ನು ಬೇಕೆಂದೇ ಹೆಚ್ಚಿಸಿ ಹೇಳಲಾಗಿದೆ. ಟ್ರಿಕ್ಸ್ ಯೋಜನೆಯಲ್ಲಿ ಇಷ್ಟೊಂದು ಬಡಾ ಹಾಕಿಲ್ಲ (ಇದರಲ್ಲಿ ಇತರ ಖರ್ಚುಗಳು ಶೇ. ದಲು ಶೇ. 50 ಇದೆ) ಆದರೆ ಖರ್ಚಿನ ಅತಿ ು ಮಾಡುವಲ್ಲಿ ಕೊಜೆಂಟ್ರಿಕ್ಸ್ ಯೋಜನೆ ಹಿಂದೆಯೇನೂ ಬಿದ್ದಿಲ್ಲ. ಈ ಯೋಜನೆಯಲ್ಲಿ ಲು ಖರ್ಚನ್ನು ಬಹಳಷ್ಟು ಬಡಾಯಿಸಿ ಗಿದೆ ಎಂದು ತಜ್ಞರ ಅಂದಾಜು. ಆರಂಭದ ಲ್ಲಿ ಉರುವಲು ಖರ್ಚು ಒಟ್ಟು ನಿರ್ವಹಣಾ ಶೇ. 29.81 ಇದ್ದರೆ, ಹತ್ತು ವರ್ಷಗಳ ಅದು ಶೇ. 58.27 ಆಗುತ್ತದೆ. ಮತ್ತೆ ಹತ್ತು ಳಲ್ಲಿ ಅಂತು ಇನ್ನೂ ಹೆಚ್ಚಿ ಶೇ. 64.11 . ನಿಜವಾಗಿ ಇಷ್ಟು ಖರ್ಚಾಗುವುದಿಲ್ಲ ತಜ್ಞರ ಅಭಿಮತ.

ಮುಕ್ತ ಮಾರುಕಟ್ಟೆಯ ಪ್ರಧಾನ ಅಂಶ ಂಡವಾಳಶಾಹಿಗಳು ಬೊಬ್ಬಿಟ್ಟರೂ ಎನ್ರೋನ್ ನೆಯಲ್ಲಿ ಯಂತ್ರೋಪಕರಣಗಳು ಇತ್ಯಾದಿಗಳ ಯಲ್ಲಿ ಯಾವುದೇ ಸ್ಪರ್ಧಾತ್ಮಕ ಬಿಡ್ಡಿಂಗ್‌ಗೆ ವಿರಲಿಲ್ಲ. ಎನ್ರೋನ್ ಕಂಪೆನಿ ದುಡ್ಡು ಹೆಚ್ಚು ದರು. ಅಮೇರಿಕಾದ ಜನರಲ್ ಇಲೆಕ್ಟ್ರಿಕ್ ೀ ವಿದ್ಯುತ್ ಉಪಕರಣಗಳ ಕಾಂಟ್ರಾಕ್ಟ್ ಯಾವುದೇ ಅಡ್ಡಿಯಿರಲಾರದು ಎಂಬುದನ್ನು ಷ್ಟ ಸರಕಾರ ಒಪ್ಪಿಕೊಂಡಿತ್ತು. ಕೊಜೆಂಟ್ರಿಕ್ ನೆಯಲ್ಲಿ ಬಿಡ್ಡಿಂಗ್‌ಗೆ ಅವಕಾಶವಿದೆ. ಹೀಗೆ ಕಾಂಟ್ರಾಕ್ಟ್ ರುಗಳನ್ನು ಕೆ.ಇ.ಬಿ. ಪರೀಕ್ಷಿಸಿ ಡಿಸಬಹುದು. ಅಂದರೆ ಕೆ.ಇ.ಬಿ. ಯೊಂದಿಗೆ ೂಂಡ ಒಪ್ಪಂದದಲ್ಲಿ ತಾಂತ್ರಿಕವಾಗಿ ಇದೊಂದು ್ಯ ಇಲ್ಲ. ಆದರೆ ವಾಸ್ತವಿಕವಾಗಿ ಇಲ್ಲೂಅದೇ ್ಯವಿದೆ. ಏಕೆಂದರೆ ಕೊಜೆಂಟ್ರಿಕ್ಸ್‌ನ ಯಂತ್ರೋ ಗಳ ವಿನ್ಯಾಸ, ಅವಶ್ಯಕತೆಗಳು ಹೀಗಿವೆಯೆಂ ವಲ ಜನರಲ್ ಇಲೆಕ್ಟ್ರಿಕ್ ಕಂಪೆನಿ ಮಾತ್ರ ಪೂರೈಸಲು ಸಾಧ್ಯವಾಗುವಂತೆ ನೋಡಿಕೊ . ಈ ಕಂಪೆನಿ ಈ ಯೋಜನೆಯಲ್ಲಿ ಟ್ರಿಕ್ಸ್‌ನ ಪಾಲುದಾರ ತನ್ನ ಪಾಲನ್ನು ಬಂಡವಾ ೂಪದಲ್ಲಿ ಕೊಡದೆ ಯಂತ್ರೋಪಕರಣಗಳ ಮೂಲಕ ಕೊಡಲು ಅದಕ್ಕೆ ಅವಕಾಶ ನೀಡಲಾಗಿದೆ ಅಂದರೆ ಬಿಡ್ಡಿಂಗ್ ಪ್ರಕ್ರಿಯೆ ಹಾಗೂ ಕೆ.ಇ.ಬಿ. ಅದನ್ನು ಪರೀಕ್ಷಿಸುವುದು ಇತ್ಯಾದಿಗಳೆಲ್ಲಾ ಕೇವಲ ಅಪಹಾಸ್ಯಕ್ಕೀಡಾಗಿವೆ. ಅಂತರ್‌ರಾಷ್ಟ್ರೀಯ ವಿದ್ಯುತ್ ಉಪಕರಣಗಳು ಕೇವಲ ಅಪಹಾಸ್ಯಕ್ಕೀಡಾಗಿವೆ. ಅಂತರ್‌ರಾಷ್ಟ್ರೀಯ ವಿದ್ಯುತ್ ಉಪಕರಣಗಳ ಮಾರುಕಟ್ಟೆ ಈಗ ತೇಜಿಯಿಲ್ಲ, ಆದ್ದರಿಂದಲೇ ಜನರಲ್ ಇಲೆಕ್ಟ್ರಿಕ್ ಕಂಪೆನಿಯ ಸರಕುಗಳಿಗೆ ಮಾರುಕಟ್ಟೆ ಒದಗಿಸಲೆಂದೇ ಅದನ್ನು ಪಾಲುದಾರನಾಗಿ ಪಡೆಯಲಾಗಿದೆ ಎಂದು ಹೇಳಲಾಗುತ್ತದೆ.

ಅಂದರೆ ಒಟ್ಟಾರೆಯಾಗಿ ಕೆಲವು ಭಿನ್ನತೆಗಳು ಮೇಲ್ನೋಟಕ್ಕೆ ಕಂಡು ಬಂದರೂ ಕೊಜೆಂಟ್ರಿಕ್ಸ್‌ನ ಮಂಗಳೂರು ವಿದ್ಯುತ್ ಯೋಜನೆ ಮಹಾರಾಷ್ಟ್ರದ ಜನತೆ ಹಾಗೂ ಹಲವಾರು ತಜ್ಞರು ಒಕ್ಕೊರಲಿನಿಂದ ವಿರೋಧಿಸುತ್ತಿರುವ ಎನ್ರೋನ್‌ನ ದಭೋಲ್ ವಿದ್ಯುತ್ ಯೋಜನೆಯ ಹಾದಿಯಲ್ಲೇ ಇರುವ ವಿದೇಶೀ ಬಹುರಾಷ್ಟ್ರೀಯ ಬಂಡವಾಳದೆದುರು ಸಾಷ್ಟಾಂಗ ಬಿದ್ದು ಅದಕ್ಕಾಗಿ ಜನಸಾಮಾನ್ಯರ ಕೊರಳಿಗೆ ನೇತುಹಾಕಿದ ಉರುಳುಗಲ್ಲು ಎಂಬ ತಜ್ಞರೊಬ್ಬರ ವರ್ಣನೆ ಅತ್ಯಂತ ಸೂಕ್ತವೆಂದೇ ಹೇಳಬೇಕಾಗುತ್ತದೆ. ಇದರಿಂದ ಜನಗಳ ಸಮಸ್ಯೆಗೆ ಸ್ವಲ್ಪ ಮಟ್ಟಿನ ಪರಿಹಾರ ಸಿಗುವುದಿಲ್ಲ ಮಾತ್ರವಲ್ಲ, ಅವರ ಸಮಸ್ಯೆಗಳು ಇನ್ನಷ್ಟು ಹೆಚ್ಚುತ್ತವೆ.

ಅಮೇರಿಕದ ಕೊಜೆಂಟ್ರಿಕ್ಸ್ ಒಡೆತನದ ಮಂಗಳೂರು ಪವರ್ ಕಂಪೆನಿ ಇದುವರೆಗೆ ತಿಳಿದು ಬಂದ ಕೆಲವು ಮುಖ್ಯ ಅಂಶಗಳು

⊙ ಈ ಕಂಪೆನಿ 250 ಮೆಗಾವಾಟ್ ಸಾಮರ್ಥ್ಯದ ತಲಾ ಎರಡೆರಡು ವಿದ್ಯುತ್ ಉತ್ಪಾದಕ ಘಟಕಗಳನ್ನು ಎರಡು ಹಂತಗಳಲ್ಲಿ ನಿರ್ಮಿಸಲಿದೆ. ಈ ಯೋಜನೆಯ ಒಟ್ಟು ಖರ್ಚು 4387.98 ಕೋಟಿ ರೂ. ಎಂದು ಅಂದಾಜು ಮಾಡಲಾಗಿದೆ. ಇದರಲ್ಲಿ ಯಂತ್ರೋಪಕರಣಗಳು ಹಾಗೂ ನಿರ್ಮಾಣದ ಖರ್ಚು 2024.5 ಕೋಟಿ ರೂ. (ಅಂದರೆ ಒಟ್ಟು ವೆಚ್ಚ ಶೇ. 46.14 ಮಾತ್ರ)

⊙ ಈ ಘಟಕಗಳು ಆಮದಾದ ಕಲ್ಲಿದ್ದಲನ್ನು ಉರುವಲಾಗಿ ಬಳಸುತ್ತವೆ. ಸಾರ್ವಜನಿಕ ವಲಯದ ರಾಷ್ಟ್ರೀಯ ರೂಪ ವಿದ್ಯುತ್ ನಿಗಮ (WTPC)ದ ಇಷ್ಟೇ ಸಾಮರ್ಥ್ಯದ ಕಲ್ಲಿದ್ದಲು ಆಧಾರಿತ ವಿದ್ಯುತ್ ಉತ್ಪಾದನಾ ಘಟಕ "ವಿಂಧ್ಯಾಚಲ -ಎರಡನೇ ಘಟ್ಟ"ದ ವೆಚ್ಚ 1994ರಲ್ಲಿ 2753 ಕೋಟಿ ರೂ.ಗಳು ಆಗಿನ ಬೆಲೆಗಳಲ್ಲಿ ಮಂಗಳೂರು ಕೊಜೆಂಟ್ರಿಕ್ಸ್ ಯೋಜನೆಯ ಖರ್ಚು 4039.66 ಕೋಟಿ ರೂ. WTPCಯ ಯೋಜನೆಗಳಲ್ಲಿ ನಿರ್ವಹಣೆ ವೆಚ್ಚ ಪ್ರಸ್ತುತ ಬಂಡವಾಳ ಖರ್ಚಿನ ಶೇ. 2 ಇದ್ದರೆ, ಕೊಜೆಂಟ್ರಿಕ್ಸ್ ಯೋಜನೆಯಲ್ಲಿ ಇದು ಶೇ. 3. ಈ ಶೇ. 3 ಕೂಡಾ 4 ವರ್ಷಕ್ಕೊಮ್ಮೆ ಹಣದುಬ್ಬರವನ್ನು ಲೆಕ್ಕಕ್ಕೆ ತಗೊಂಡು ಹೆಚ್ಚುವ ಬಂಡವಾಳ ಖರ್ಚಿನ ಆಧಾರದ ಮೇಲೆ ಆಮದಾದ ಕಲ್ಲಿದ್ದಲು ಹೆಚ್ಚು ದಕ್ಷ ಎಂದು ಹೇಳಿದರೂ ಖರ್ಚನ್ನು ಅಂದಾಜು ಮಾಡುವಾಗ ಸ್ಥಳೀಯ ಕಲ್ಲಿದ್ದಲಿನ ದಕ್ಷತೆ

ಪುಟ 7 ನೋಡಿ

ಷ್ಯಗಳಲ್ಲಿ ಮಾಡಿರುವಂತೆ ರಾಜ್ಯ ವಿದ್ಯುತ್ ು ಪುನರ್‌ರಚನೆಯಾಗಬೇಕು.

ಲ್ ವಿದ್ಯುತ್ ಯೋಜನೆ ಸಂಬಂಧಪಟ್ಟಂತೆ ಹಿನ್ನೆಲೆಯಲ್ಲಿ ಎಲ್ಲಾ ರಾಜ್ಯ ವಿದ್ಯುತ್ ಳು ಅಥವಾ ರಾಜ್ಯ ಸರಕಾರಗಳು ಖಾಸಗಿ ೊಂದಿಗೆ ಮಾಡುವ ವಿದ್ಯುತ್ ಖರೀದಿ ಥವಾ ಉರುವಲು ಖರೀದಿ "ಒಪ್ಪಂದಗಳ್ನು ಕ ದಸ್ತಾವೇಜುಗಳಾಗಿ ಪ್ರಕಟಿಸಬೇಕು. ಬೇಕಾದರೆ ್ಲಿನ ಯಾವುದೇ ಗುಪ್ತ ಮಾಹಿತಿಯನ್ನು ರಬಹುದು. ಇಂತಹ ಒಪ್ಪಂದಗಳ ಪರೀಕ್ಷೆ ್ಯುತ್ ಪ್ರಾಧಿಕಾರ ನಡೆಸುವ ತಾಂತ್ರಿಕ-ಆರ್ಥಿಕ ು ಭಾಗವಾಗಬೇಕು.

ವಲಯಕ್ಕೆ ಒಂದು ಸ್ವತಂತ್ರ ಹತೋಟಿ ಬೇಕು; ವಿವಿಧ ವಿದ್ಯುತ್ ಯೋಜನೆಗಳ ಹೈಡ್ರೋ ಕಾರ್ಬನ್ ಅಥವಾ ಡಿಸೇಲ್) ು ಒಂದು ಸಮಗ್ರ ಉರುವಲು ನೀತಿಯಿರ


ಯೋಜನೆಗಳಲ್ಲಿ ವಿದ್ಯುತ್ ಉಪಕರಣಗಳ ್ಲಿ ಅಂತರ್‌ರಾಷ್ಟ್ರೀಯ ಸ್ಪರ್ಧಾತ್ಮಕ ಟೆಂಡರ್ ನಿಯಮವನ್ನು ಅಳವಡಿಸಬೇಕು. ಬಿ.ಹೆಚ್.ಇ.ಎಲ್. ಕೂಡಾ ಇಂತಹ ್ಲಿ ಭಾಗವಹಿಸಲು ಸಾಧ್ಯವಾಗುತ್ತದೆ. ಬಿ.ಹೆಚ್.ಇ.ಎಲ್., ಎನ್.ಟಿ.ಪಿ.ಸಿ.ಗಳಂ ೀಯ ಸಾರ್ವಜನಿಕ ವಲಯದ ಸಂಸ್ಥೆಗಳು ಪರಸ್ಪರ ಸೇರಿಕೊಂಡು ರಾಜ್ಯ ವಿದ್ಯುತ್ ಮಂಡಳಿಗಳ ಜೊತೆಗೆ ಜಂಟಿ ಯೋಜನೆಗಳನ್ನು ಕೈಗೆತ್ತಿಕೊಳ್ಳುವ ಸಾಧ್ಯತೆಗಳನ್ನು ಪರಿಶೀಲಿಸಬೇಕು.

ಇದುವರೆಗೆ ವಿದ್ಯುತ್ ರವಾನೆ ಹಾಗೂ ವಿತರಣೆ ಒಂದು ನಿರ್ಲಕ್ಷಿತ ವಲಯ. ಇದಕ್ಕೆ ವಿದ್ಯುತ್ ವಲಯಕ್ಕೆ ನೀಡುವ ಒಟ್ಟು ಮೊತ್ತದಲ್ಲಿ ಶೇ. 30 ಮಾತ್ರ ನೀಡಲಾಗುತ್ತದೆ. ಇದನ್ನು ಶೇ. 50ಕ್ಕೇರಿಸಬೇಕು.

⊙ ಭಾರತದ ಪವರ್ ಗ್ರಿಡ್ ಕಾರ್ಪೋರೇಷನ್ ಅಂದಾಜಿನ ಪ್ರಕಾರ ಸುಮಾರು 10 ಸಾವಿರದಿಂದ 15 ಸಾವಿರ ಕೋಟಿ ರೂ. ಖರ್ಚಿನಲ್ಲಿ ಪ್ರಾದೇಶಿಕ ಸಂಪರ್ಕಗಳನ್ನು ಏರ್ಪಡಿಸಿ, ಒಟ್ಟು ಪ್ರದೇಶಗಳಲ್ಲಿ ಜಲ-ತಾಪ ಇವುಗಳ ಎಷ್ಟೆಷ್ಟು ಸೂಕ್ತ ಪ್ರಮಾಣದಲ್ಲಿರಲು ಸಾಧ್ಯ ಎಂದು ಪರಿಶೀಲಿಸುವ ಮೂಲಕ 10ಸಾವಿರ ಮೆಗಾವಾಟ್ನಷ್ಟು ವಿದ್ಯುತ್ ಉಳಿಸಲು ಸಾಧ್ಯ. ಈ ಸಂಸ್ಥೆ ಇಂಗ್ಲೆಂಡಿನ ನ್ಯಾಶನಲ್ ಗ್ರಿಡ್ ಕಾರ್ಪೋರೇಷನ್ ರೊಂದಿಗೆ ಈ ಬಗ್ಗೆ ಒಂದು ತಿಳುವಳಿಕೆ ಪತ್ರಕ್ಕೆ ಸಹಿ ಹಾಕಿದೆ ಇದರ ವಿವರಗಳ ಆಮೂಲಾಗ್ರ ಪರಿಶೀಲನೆ ಮಾಡಬೇಕು.

⊙ ಜಲವಿದ್ಯುತ್ ಯೋಜನೆಗಳನ್ನು ಸ್ಥಾಪಿಸುವ ಬಗ್ಗೆ ಖಾಸಗಿಯವರ ಒಲವು ಬಹಳ ಕಮ್ಮಿ ವಿದ್ಯುತ್ ಸಚಿವಾಲಯದಿಂದ ದರಗಳ ಕುರಿತು ತನ್ನ ನೀತಿಯನ್ನು ಬೇಗನೇ ಪ್ರಕಟಿಸಿ ಈ ವಲಯದಲ್ಲಿ ಬಂಡವಾಳ ಹೂಡಿಕೆಗೆ ಪ್ರೋತ್ಸಾಹ ನೀಡಬೇಕು.

18 ವರ್ಷಗಳನ್ನು ಪೂರೈಸಿದ ಪ. ಬಂಗಾಳ ಎಡರಂಗದ ಅಮೋಘ ಸಾಧನೆ



ಜೂನ್ 21, 1977 ಪಶ್ಚಿಮ ಬಂಗಾಳದಲ್ಲಿ ಮೊದಲ ಎಡರಂಗ ಸರಕಾರ ರಚನೆಗೊಂಡ ದಿನ. ಅಂದಿನಿಂದ ಸತತವಾಗಿ ಅಧಿಕಾರ ನಡೆಸುತ್ತಿರುವ ಎಡರಂಗ ಸರಕಾರ ಇದೇವಾರ 18 ವರ್ಷಗಳನ್ನು ಪೂರ್ಣಗೊಳಿಸಿದೆ. ಹತ್ತು ಪಕ್ಷಗಳ ಎಡರಂಗ ಇಷ್ಟೊಂದು ಸಮಯ ಯಶಸ್ವಿಯಾಗಿ ಸರಕಾರ ನಡೆಸುವುದು ಹೇಗೆ ಸಾಧ್ಯವಾಯಿತು ಎಂಬುದು ರಾಷ್ಟ್ರೀಯ ಮಟ್ಟದ ಜಾತ್ಯಾತೀತ, ಪ್ರಜಾಪ್ರಭುತ್ವವಾದೀ ಪಕ್ಷಗಳು ಪರೀಕ್ಷಿಸಬೇಕಾದ ಸಂಗತಿ -ಇದು

ಮುಖ್ಯಮಂತ್ರಿ ಜ್ಯೋತಿಬಸು ಎಡರಂಗ 18 ವರ್ಷ ಪೂರ್ಣಗೊಳಿಸುವ ವೇಳೆಗೆ ಹೇಳಿದ ಮಾತು. ಬಂಗಾಳೀ ದೈನಿಕ 'ಗಣಶಕ್ತಿ' ಈ ಸಂದರ್ಭದಲ್ಲಿ ನಡೆಸಿದ ಸಂದರ್ಶನದಲ್ಲಿ ಜ್ಯೋತಿ ಬಸುರವರು ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ ಎಡ,ಜಾತ್ಯಾತೀತ, ಪ್ರಜಾಪ್ರಭುತ್ವವಾದಿ ಪಕ್ಷಗಳು ಪಶ್ಚಿಮ ಬಂಗಾಳದ ಎಡರಂಗದ ಉದಾಹರಣೆಯನ್ನು ಅನುಕರಿಸಿ ಐಕ್ಯತೆಯಿಂದ ಕೆಲಸ ಮಾಡಬೇಕು ಎಂದಿದ್ದಾರೆ. ಸಂದರ್ಶನದ ವೇಳೆಗೆ ಜ್ಯೋತಿಬಸುರವರು ಹೇಳಿದ ಇತರ ಅಂಶಗಳು ಹೀಗಿವೆ-

❑ ವಿಕೇಂದ್ರೀಕರಣದಿಂದಲೇ ಆರಂಭ -ಸರಿಯಾದ ನಿರ್ಣಯ

ಆರಂಭದಿಂದಲೇ ಎಡರಂಗ ಸರ್ಕಾರ ಅಧಿಕಾರದ ವಿಕೇಂದ್ರೀಕರಣದ ನೀತಿಯನ್ನು ಜ್ಯಾರಿಗೆ ತರಲಾರಂಭಿಸಿತು. ರಾಜ್ಯದಲ್ಲಿ ಪಂಚಾಯತು ವ್ಯವಸ್ಥೆಯ ಯಶಸ್ಸು ಇದು ಸಂಪೂರ್ಣ ಸರಿಯಾದ ನಿರ್ಣಯವಾಗಿತ್ತು ಎಂಬುದನ್ನು ತೋರಿಸಿಕೊಟ್ಟಿದೆ ಎನ್ನುತ್ತಾರೆ ಕಾಂ. ಜ್ಯೋತಿ ಬಸು. ಜನಗಳು ಪಂಚಾಯತು ಸಂಸ್ಥೆಗಳ ಕಾರ್ಯಗಳಲ್ಲಿ ಭಾಗವಹಿಸುವ ಮೂಲಕ ರಾಜ್ಯದ ಗ್ರಾಮೀಣ ಅಭಿವೃದ್ಧಿಯಲ್ಲಿ ಹೊಸ ದಿಗಂತ ತೆರೆದಂತಾಗಿದೆ. ಪ್ರವಾಹ, ಬರ ಮತ್ತು ಇತರ ಪ್ರಾಕೃತಿಕ ವಿಕೋಪಗಳ ಸಮಯದಲ್ಲಿ ರಾಜ್ಯ ಆಡಳಿತ ಹಾಗೂ ಪಂಚಾಯತು ಸಂಸ್ಥೆಗಳು ಜೊತೆಗೂಡಿ ಜನಗಳಿಗೆ ಪರಿಹಾರ ಸಾಧ್ಯವಾದಷ್ಟು ಬೇಗನೇ ತಲುಪಿಸಲು ಸಾಧ್ಯವಾಗಿದೆ. ಎಡರಂಗದ ಅತ್ಯಂತ ಕಡು ವಿರೋಧಿಗಳೂ ಪಶ್ಚಿಮ ಬಂಗಾಳದ ಪಂಚಾಯತು ವ್ಯವಸ್ಥೆಯನ್ನು ಹೊಗಳಲೇ ಬೇಕಾಗಿ ಬಂದಿದೆ.

❑ ಬದಲಾದ ಗ್ರಾಮೀಣ ಜನಜೀವನ

ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಕೂಡಲೇ ಎಡರಂಗ ಭೂ ಸುಧಾರಣೆಗಳಿಗೆ ಆದ್ಯತೆ ನೀಡಿತು. ಭೂ ಹೀನರಿಗೆ ಭೂಮಿ ಹಂಚಿಕೆ, ಭಾಗ ಬೆಳೆಗಾರರಿಗೆ ನೋಂದಣಿ ಗ್ರಾಮೀಣ ಜನರ ಜೀವನವನ್ನೇ ಬದಲಿಸಿದೆ. ಹೆಚ್ಚು ಉದ್ಯೋಗಾವಕಾಶಗಳು ಸೃಷ್ಟಿಯಾಗಿವೆ, ಕೃಷಿ ಉತ್ಪಾದನೆ ಹೆಚ್ಚಿದೆ. ಗ್ರಾಮೀಣ ಜನರ ಕೊಳ್ಳುವ ಶಕ್ತಿ ಹೆಚ್ಚುವಂತೆಯೂ ಮಾಡಲು ಸಾಧ್ಯವಾಗಿದೆ ಎಂದು ಜ್ಯೋತಿ ಬಸು ಇನ್ನೊಂದು ಪ್ರಶ್ನೆಗೆ ಉತ್ತರಿಸುತ್ತಾ ಹೇಳಿದರು.

ಇದರ ಜೊತೆಗೆ ನೀರಾವರಿ ಸಾಮರ್ಥ್ಯ ಹೆಚ್ಚಿಸಲು ಅರಣ್ಯೀಕರಣ, ಪಶುಪಾಲನೆ, ಒಳನಾಡು ಮೀನು ಉತ್ಪಾದನೆ ಹೆಚ್ಚಿಸಲು ಕೂಡಾ ಒತ್ತು ನೀಡಲಾಯಿತು. ಅರಣ್ಯೀಕರಣದ ವಲಯದಲ್ಲಿ ಪಶ್ಚಿಮ ಬಂಗಾಳ ರಾಷ್ಟ್ರೀಯ, ಅಂತರ್‌ರಾಷ್ಟ್ರೀಯ ಬಹುಮಾನಗಳನ್ನು ಪಡೆದಿದೆ. ಸಾಕ್ಷರತೆಯ ಕ್ಷೇತ್ರದಲ್ಲಿ ಯಶಸ್ಸು ಕೂಡಾ ಗಣನೀಯ. ಹನ್ನೆರಡನೇ ತರಗತಿಯವರೆಗೆ ಶಿಕ್ಷಣ ಪುಕ್ಕಟೆಗೊಳಿಸಲಾಗಿದೆ. ನಗರಸಭಾ ಶಾಲೆಗಳಲ್ಲಿ ಸೌಲಭ್ಯಗಳನ್ನು ಹೆಚ್ಚಿಸಲಾಗಿದೆ. ಸಂವಿಧಾನದ ಮಿತಿಯಿದ್ದರೂ ಈ ಎಲ್ಲಾ ಸಾಧನೆಗಳು ಸಾಧ್ಯವಾಗಿದೆ ಎಂಬುದು ಗಮನಾರ್ಹ.

❑ ವಿದ್ಯುತ್ ಪೂರೈಕೆ -ಸಂಪೂರ್ಣ ಬದಲಾದ ಸ್ಥಿತಿ

ಹಿಂದೆ ಕೃಷಿಗೆ ಹಾಗೂ ಕೈಗಾರಿಕೆಗಳಿಗೆ ವಿದ್ಯುತ್ ಒದಗಿಸುವಲ್ಲಿ ಬಹಳ ಸಮಸ್ಯೆಗಳಿರುತ್ತಿದ್ದವು. ಈಗ ಪರಿಸ್ಥಿತಿ ಸಂಪೂರ್ಣ ಬದಲಾಗಿದೆ ಎಂದು ಜ್ಯೋತಿ ಬಸು ಹೇಳಿದರು. ಹೊಸ ಉದ್ದಿಮೆಗಳು ರಾಜ್ಯದಲ್ಲಿ ಬರುತ್ತಿರುವುದರಿಂದ ಇನ್ನು ಹೆಚ್ಚು ವಿದ್ಯುತ್ ಪೂರೈಕೆ ಬೇಕು ಎಂಬುದರ ಅರಿವು ಕೂಡಾ ಎಡರಂಗ ಸರ್ಕಾರಕ್ಕಿದೆ ಎಂದ ಜ್ಯೋತಿ ಬಸುರವರು ಪಶ್ಚಿಮ ಬಂಗಾಳ ಹೊಸ ವಿದ್ಯುತ್ ಸ್ಥಾವರಗಳನ್ನು ನಿರ್ಮಿಸಲು ಪ್ರಯತ್ನ ನಡೆದಿದೆ ಎಂದರು.

❑ ಕೇಂದ್ರದ ಅಡ್ಡಿ ಪಕ್ಷಪಾತ

3600 ಕೋಟಿ ರೂ.ಗಳ ಹಲ್ದಿಯಾ ಪೆಟ್ರೋ-ರಾಸಾಯನಿಕ ಯೋಜನೆಯ ಹಾಗೂ ಬಕ್ರೇಶ್ವರ್ ತಾಪ ವಿದ್ಯುತ್ ಯೋಜನೆಯ ಪ್ರಗತಿಯ ಬಗ್ಗೆ ಚರ್ಚೆ ನಡೆಯುತ್ತಿದೆ. ಹಲ್ದಿಯಾ ಯೋಜನೆಯನ್ನು ಅಳವಡಿಸಬೇಕಾದ ತಂತ್ರಜ್ಞಾನದ ಬಗ್ಗೆ ವಿದೇಶೀ ಸಂಸ್ಥೆಗಳೊಂದಿಗೆ ಮಾತುಕತೆ ನಡೆದಿದೆ. ಈ ಯೋಜನೆಗೆ ಮಂಜೂರಾತಿಯನ್ನು ಬಹಳ ದಿನ ತಡೆಹಿಡಿದಿದ್ದ ಕೇಂದ್ರ ಸರಕಾರದೊಂದಿಗೆ ಬಹಳ ಹೋರಾಟ ನಡೆಸಬೇಕಾಯಿತು ಎಂದೂ ಜ್ಯೋತಿ ಬಸು ನೆನಪಿಸಿದರು.

ಪಶ್ಚಿಮ ಬಂಗಾಳದ ವಿರುದ್ಧ ಕೇಂದ್ರ ಸರಕಾರದ ಪಕ್ಷಪಾತದ ನೀತಿಯ ಉದಾಹರಣೆ ನೀಡಿದ ಅವರು ಕೇಂದ್ರ ಸರಕಾರದ ಲೈಸೆನ್ಸಿಂಗ್ ನೀತಿ ಹಾಗೂ ಸಾಗಾಣಿಕೆ ಸಮಾನೀಕರಣ ನೀತಿಯಿಂದಾಗಿ ಸ್ವಾತಂತ್ರ್ಯದ ವೇಳೆಗೆ ಭಾರತದ ಕೈಗಾರಿಕಾ ನಕಾಶೆಯಲ್ಲಿ ಪ್ರಧಾನ ಸ್ಥಾನ ಪಡೆದಿದ್ದ ಪಶ್ಚಿಮ ಬಂಗಾಳದಲ್ಲಿ ಕೈಗಾರಿಕಾ ಬೆಳವಣಿಗೆ ಕುಂಠಿತವಾಯಿತು ಎಂದೂ ಜ್ಯೋತಿ ಬಸು ನೆನಪಿಸಿದರು. ಈಗ ಈ ಎರಡು ನೀತಿಗಳನ್ನು ಹಿಂತೆಗೆದುಕೊಳ್ಳಲಾಗಿದೆ. ಇದರ ಪೂರ್ಣ ಪ್ರಯೋಜನ ಪಡೆದು ಎಡರಂಗ ಸರಕಾರ ರಾಜ್ಯದಲ್ಲಿ ಕೈಗಾರಿಕೆಗಳ ಅಭಿವೃದ್ಧಿಯನ್ನು ಕೈಗೆತ್ತಿಕೊಳ್ಳಲು ನಿರ್ಧರಿಸಿದೆ ಎಂದರು.

ಆದರೆ ದುರದೃಷ್ಟವಶಾತ್ ಕೇಂದ್ರದ ಕಾಂಗ್ರೆಸ್(ಐ) ಸರಕಾರ ರಾಜ್ಯ ಸರಕಾರದೆದುರು ಹಣಕಾಸು ಅಡ್ಡಿ-ಆತಂಕ ವೊಡ್ಡುತ್ತಿದೆ ಎಂದು ಜ್ಯೋತಿ ಬಸು ಖೇದ ವ್ಯಕ್ತಪಡಿಸಿದರು. ಪಶ್ಚಿಮ ಬಂಗಾಳದಲ್ಲಿ ಕೇಂದ್ರದ ಹಲವಾರು ದೊಡ್ಡ ಸಾರ್ವಜನಿಕ ಉದ್ದಿಮೆಗಳಿವೆ. ಈ ಉದ್ದಿಮೆಗಳನ್ನು ಪುನರುಜ್ಜೀವನಗೊಳಿಸಬೇಕೆಂಬ ರಾಜ್ಯ ಸರಕಾರದ ಸೂಚನೆಗೆ ಕೇಂದ್ರ ಸರಕಾರ ಕಿವಿಗೊಡುತ್ತಿಲ್ಲ. ಈ ರೋಗಗ್ರಸ್ತ ಘಟಕಗಳ ಪುನರುಜ್ಜೀವನಕ್ಕೆ ಕಾರ್ಮಿಕರು ಚಳುವಳಿ ಮುಂದುವರಿಸಬೇಕಾಗುತ್ತದೆ ಎಂದರು.

❑ ಈಗ ಕೈಗಾರೀಕರಣಕ್ಕೆ ಆದ್ಯತೆ

ಕೃಷಿ ರಂಗದಲ್ಲಿ ಬೆಳವಣಿಗೆ ಸಾಧಿಸಿದ ಮೇಲೆ ಈಗ ಕೈಗಾರಿಕೀಕರಣಕ್ಕೆ ಆದ್ಯತೆ ನೀಡಬೇಕಾದ ಸಮಯ ಬಂದಿದೆ. ಇದಕ್ಕಾಗಿ ಒಂದು ಕೈಗಾರಿಕಾ ನೀತಿಯನ್ನು ಈಗಾಗಲೇ ತಿಳಿಯಪಡಿಸಿದ್ದು ಪಾರಂಪರಿಕ ಉದ್ದಿಮೆಗಳೊಂದಿಗೆ ಆಧುನಿಕ ಉದ್ದಿಮೆಗಳನ್ನು ಬೆಳಸಲಾಗುವುದು ಎಂದು ಜ್ಯೋತಿ ಬಸು ಹೇಳಿದರು.

ರಾಜ್ಯದ ಕೈಗಾರಿಕೀಕರಣದ ಕಾರ್ಯಕ್ರಮಕ್ಕೆ ದೇಶೀ ಉದ್ಯಮಿಗಳಿಂದಲೂ ವಿದೇಶೀ ಉದ್ಯಮಿಗಳಿಂದಲೂ ಪ್ರೋತ್ಸಾಹ ದೊರೆತಿದೆ ಎಂದು ಅಂತರಾಷ್ಟ್ರೀಯ ಖ್ಯಾತಿಯ ಸಂಸ್ಥೆಗಳು ರಾಜ್ಯದಲ್ಲಿ ಕೈಗಾರಿಕಾ ಅಭಿವೃದ್ಧಿಯ ಸಾಧ್ಯತೆಗಳ ಬಗ್ಗೆ ಒಂದು ಸರ್ವೆ ನಡೆದಿವೆ. ಇದರ ಪ್ರಕಾರ ರಾಜ್ಯದಲ್ಲಿ ಹೊಸ ಉದ್ದಿಮೆಗಳನ್ನು ಸ್ಥಾಪಿಸಲು ವಿಶಾಲ ಅವಕಾಶಗಳಿವೆ. ಆದರೆ ವಿದೇಶೀ ಬಂಡವಾಳ ಹೂಡಿಕೆ ರಾಜ್ಯದ ಮತ್ತು ಹೂಡಿಕೆದಾರರ ಹಿತಾಸಕ್ತಿಗಳನ್ನು ನಿರ್ದಿಷ್ಟ ಕೈಗಾರಿಕಾ ಚಟುವಟಿಕೆಗಳಲ್ಲಿ, ಈಡೇರಿಸುವಂತಿದ್ದರೆ ಮಾತ್ರ ಅದಕ್ಕೆ ಪ್ರೋತ್ಸಾಹ ನೀಡಲಾಗುವುದು ಎಂದು ಅವರು ಸ್ಪಷ್ಟಪಡಿಸಿದರು. ಕಲ್ಕತ್ತ ನಗರದ ಮೇಲೆ ಜನಸಂಖ್ಯೆಯ ಒತ್ತಡವನ್ನು ಕಡಿಮೆ ಮಾಡಲು ಹೊಸ ಪಟ್ಟಣಗಳನ್ನು ನಾಗರಿಕ ಸೌಲಭ್ಯಗಳಲ್ಲಿ ಸುಧಾರಣೆಯನ್ನು ತರಲು ಯೋಜನೆ ಹಾಕಿ ಕೊಳ್ಳಲಾಗಿದೆ ಎಂದು ಜ್ಯೋತಿಬಸು ಹೇಳಿದರು.

(ಐ.ಎನ್.ಎಸ್.)

9/7/1995



ಬಿಹಾರದಲ್ಲಿ ಭೂಮಾಲಿಕರ ದೌರ್ಜನ್ಯ

ಭೂಮಾಲಿಕರು ಅಧಿಕಾರಿಗಳೊಂದಿಗೆ ಶಾಮೀಲಾಗಿ ಬಡರೈತರ ಮೇಲೆ ಭೀಕರ ದೌರ್ಜನ್ಯಗಳನ್ನು ನಡೆಸುತ್ತಿರುವ ಕಳವಳ ಕಾರಿ ವರದಿಗಳು ಬಿಹಾರದಿಂದ ಬಂದಿವೆ.

ದರ್ಭಾಂಗ್ ಜಿಲ್ಲೆಯ ಸಮಲ್ಪುರ ಗ್ರಾಮದಲ್ಲಿ ಜೂನ್ 12 ರಂದು ಭೂ ರಹಿತ ಹಾಗೂ ಬಡರೈತರ 95 ಗುಡಿಸಲುಗಳನ್ನು ಸುಟ್ಟು ಹಾಕಲಾಯಿತು. ಕುಖ್ಯಾತ ಭೂಮಾಲಕ ಅನ್ವರ್ ಖಾನ್ ತನ್ನ ಗೂಂಡಾಗಳ ಸಹಾಯದಿಂದ ಈ ಕುಕೃತ್ಯ ಎಸಗಿದ. ಜನರಲ್ಲಿ ಭಯ ಹುಟ್ಟಿಸಲು ಈ ಪುಂಡರು ಶಸ್ತ್ರಾಸ್ತ್ರಗಳನ್ನು ಬಳಸಿದರು.

ಅದೇ ದಿನ, ಸೀತಾಮರಿ ಜಿಲ್ಲೆಯ ತುಫಾರಿ ಪ್ರದೇಶದ ಐದು ಎಕರೆ ಸರಕಾರಿ ಜಮೀನಿನಲ್ಲಿದ್ದ ಎಂಟು ಗುಡಿಸಲುಗಳನ್ನು ಸ್ಥಳೀಯ ಪೋಲೀಸ್ ಅಧಿಕಾರಿಯೊಬ್ಬರ ಸಹಕಾರದಿಂದ ದುರುಳರು ನಾಶ ಮಾಡಿದರು. ಭೂಮಾಲಿಕರಾದ ಓಂ ಪ್ರಕಾಶ್ ಮತ್ತು ಜಯಪ್ರಕಾಶ್ ಈ ಜಮೀನನ್ನು ಹೊಂದಿದ್ದರು.

ಈ ಎರಡೂ ಪ್ರಕರಣಗಳಲ್ಲಿ ಒಳಗೊಂಡ ಜಮೀನು ಸರಕಾರ ವಿಧಿಸಿದ ಮಿತಿಗಿಂತ ಹೆಚ್ಚುವರಿಯಾದ ಅಥವಾ ಸರಕಾರಿ ಜಮೀನು ಆಗಿದ್ದು ಇತ್ತೀಚಿನ ವರ್ಷಗಳಲ್ಲಿ ನಡೆದ ಭೂ ಚಳುವಳಿಗಳಲ್ಲಿ ಅದನ್ನು ಭೂ ರಹಿತರು ವಶಪಡಿಸಿಕೊಂಡಿದ್ದರು.

ದರ್ಭಾಂಗ್ ಒಂದರಲ್ಲೇ 8000 ಎಕರೆಗಿಂತಲೂ ಹೆಚ್ಚಿನ ಸರಕಾರಿ ಭೂಮಿಯಿದ್ದು ಅದನ್ನು 4000 ಜನರಿಗೆ ಹಂಚಬಹುದಾಗಿದೆ.

ಅಖಿಲ ಭಾರತ ಕಿಸಾನ್ ಸಭಾ ಈ ಭೂಹೋರಾಟಗಳಿಗೆ ನೇತೃತ್ವ ನೀಡಿತ್ತು. ಜೂ. 12 ರಂದು ಪುಪಾರಿ ಪ್ರದೇಶದಲ್ಲಿ ದಬ್ಬಾಳಿಕೆ ನಡೆಸಿದ ಪೋಲೀಸ್ ಅಧಿಕಾರಿ ಸ್ಥಳೀಯ ರೈತ ನಾಯಕ ಮನು ಪ್ರಸಾದ್‌ರನ್ನು ಬಂಧಿಸಿ ಜೈಲಿಗೆ ಹಾಕಿದ್ದಾನೆ.

ಭೂಮಾಲಿಕರು ಮತ್ತು ಅಧಿಕಾರಿಗಳ ಪುಂಡಾಟಿಕೆಯನ್ನು ಪ್ರತಿಭಟಿಸಿ ಕಿಸಾನ್ ಸಭಾದ ಸ್ಥಳೀಯ ಘಟಕಗಳು ಹಲವಾರು ಚಳುವಳಿಗಳನ್ನು ನಡೆಸಿವೆ.

ಮನವಿ

ಈ ಪ್ರಕರಣಗಳ ಸಂಬಂಧ ತಕ್ಷಣ ಮಧ್ಯಪ್ರವೇಶಿಸುವಂತೆ ಅಖಿಲ ಭಾರತ ಕಿಸಾನ್ ಸಭಾ (ಎ.ಐ.ಕೆ.ಎಸ್.) ಬಿಹಾರ ಮುಖ್ಯಮಂತ್ರಿ ಲಲ್ಲೂ ಪ್ರಸಾದ್ ಯಾದವ್‌ರನ್ನು ವಿನಂತಿಸಿದೆ. ಭೂ ರಹಿತ ಹಾಗೂ ಬಡ ರೈತರನ್ನು ಯಾಕೆ ಅವರ ಜಮೀನಿನಿಂದ ಹೊರಹಾಕಿ ಅವರ ಗುಡಿಸಲುಗಳನ್ನು ಸುಟ್ಟುಹಾಕಲಾಗುತ್ತಿದೆ ಎಂದು ಪರಿಶೀಲಿಸುವಂತೆ ಎ.ಐ.ಕೆ.ಎಸ್. ಮುಖ್ಯಮಂತ್ರಿಯನ್ನು ಒತ್ತಾಯಿಸಿದೆ.

ಭೂ ಸುಧಾರಣೆ ಮತ್ತು ಭೂ ಪರಿಮಿತಿಯನ್ನು ಇನ್ನಷ್ಟು ಇಳಿಸುವ ಬಗ್ಗೆ ಮಾತನಾಡುತ್ತಿರುವ ಮುಖ್ಯಮಂತ್ರಿ ಇದಕ್ಕಿಲ್ಲ ಸೂಕ್ತ ವಿವರಣೆ ಕೊಟ್ಟು ಶೋಷಿತರಿಗೆ ರಕ್ಷಣೆ ನೀಡುವುದು ಅಗತ್ಯ.

ದುಷ್ಕರ್ಮಿಗಳನ್ನು ಬಂಧಿಸಬೇಕು, ನಾಶವಾದ ಗುಡಿಸಲುಗಳನ್ನು ಕಟ್ಟಿಸಿಕೊಟ್ಟು ಪರಿಹಾರ ನೀಡಬೇಕು ಮತ್ತು ತಪ್ಪಿತಸ್ಥ ಸರಕಾರಿ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಎಐಕೆಎಸ್ ಆಗ್ರಹಿಸಿದೆ.

ಬಿಹಾರದಲ್ಲಿ ಜನತಾದಳ ಸರಕಾರ ಅಧಿಕಾರದಲ್ಲಿದೆ. ಬಡಜನರ ಹಿತ ಕಾಪಾಡಲು ಅದು ಮುಂದಾಗದಿದ್ದರೆ ಒರಿಸ್ಸಾದಲ್ಲಿ ತನ್ನ ಪಕ್ಷದ ಸರಕಾರ ಆದ ಗತಿ ತನಗೂ ಒದಗೀತು ಎಂಬುದನ್ನು ಅದು ತಿಳಿದುಕೊಂಡಿದ್ದರೆ ಒಳ್ಳೆಯದು.

ಶಿವಸೇನೆ ಪತ್ರಿಕೆಗಳಿಗೆ ಛೀಮಾರಿ

ಶಿವಸೇನೆಯಂಥ ಕೋಮುವಾದಿ ಪಕ್ಷ ಕೋಮು ಸಾಮರಸ್ಯಕ್ಕೆ ಹಾನಿಯೆಸಗುವಂಥ ಅಪಾಯಕಾರಿ ಸಂಘಟನೆಎಂಬ ಜಾತ್ಯಾತೀತರ ನಿಲುವಿಗೆ ಪತ್ರಿಕಾ ಮಂಡಳಿಯ ಇತ್ತೀಚಿನ ಒಂದು ತೀರ್ಪಿನಿಂದ ಪುಷ್ಟಿ ಸಿಕ್ಕಿದೆ.

ಶಿವಸೇನೆಯ ಮುಖ್ಯಸ್ಥ ಬಾಳಠಾಕ್ರೆಯ ಪ್ರಚೋದನಕಾರಿ ಭಾಷಣಗಳನ್ನು ಪ್ರಕಟಿಸಿದ ಆ ಪಕ್ಷದ ಎರಡು ಪತ್ರಿಕೆಗಳಾದ 'ಸಾಮ್ನಾ' ಮತ್ತು 'ಮಾರ್ಮಿಕ್'ಗೆ ಪತ್ರಿಕಾ ಮಂಡಳಿ ಛೀಮಾರಿ ಹಾಕಿದೆ.

'ಸಾಮ್ನಾ' ಶಿವಸೇನೆಯ ದೈನಿಕವಾಗಿದೆ. 'ಮಾರ್ಮಿಕ್' ಅದರ ವಾರಪತ್ರಿಕೆಯಾಗಿದೆ.

1993ರ ಜೂನ್ -ಜುಲೈನಲ್ಲಿ ಪ್ರಕಟವಾದ ವರದಿಗಳಿಗೆ ಸಂಬಂಧಿಸಿ ಮಂಡಳಿ ಇದೀಗ ತೀರ್ಪು ಕೊಟ್ಟಿದೆ. ಪತ್ರಿಕೋದ್ಯಮದ ನೀತಿ ಸಂಹಿತೆಗೆ ಸಂಬಂಧಿಸಿದ 12ನೇ ನಿಯಮಗಳನ್ನು ಈ ವರದಿಗಳು ಉಲ್ಲಂಘಿಸಿವೆ ಎಂದು ಮಂಡಳಿ ಅಭಿಪ್ರಾಯಪಟ್ಟಿದೆ.

'ಹಿಂದೂ ದೇವತೆಗಳನ್ನು ಮೆಟಲ್ ಡಿಟೆಕ್ಟರ್ ಗಳ ತಪಾಸಣೆಗೆ ಒಳಪಡಿಸಿದರೆ ದೇಶ ಈದ್ ಹಬ್ಬವನ್ನು ಆಚರಿಸಲು ನಾನು ಬಿಡುವುದಿಲ್ಲ' ಎಂದು ಠಾಕ್ರೆ ಶಿವಸೇನೆಯ 27ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಹೇಳಿದ್ದರು. ಇದನ್ನು 'ಸಾಮ್ನಾ' ಮತ್ತು 'ಮಾರ್ಮಿಕ್' ಯಥಾವತ್ತಾಗಿ ಪ್ರಕಟಿಸಿದವು.

ಮುಂಬಯಿಯ ಪೋಲೀಸ್ ಅಧಿಕಾರಿಯೊಬ್ಬರು ಇದರ ವಿರುದ್ಧ ಪತ್ರಿಕಾ ಮಂಡಳಿಗೆ ದೂರು ಸಲ್ಲಿಸಿದರು.

ಇತರ ಧರ್ಮಗಳ ಜನರ ಭಾವನೆಗಳಿಗೆ ನೋವುಂಟು ಮಾಡುವಂಥ ಮತ್ತು ಕೋಮು ಭಾವನೆಗಳನ್ನು ಪ್ರಚೋದಿಸುವಂಥ ಲೇಖನವಾಗಲೀ ವರದಿಯನ್ನಾಗಲೀ ಪ್ರಕಟಿಸಬಾರದೆಂದು ಇನ್ನಾದರೂ ಶಿವಸೇನೆಯ ಮಾತ್ರವಲ್ಲ ಇತರ ಪತ್ರಿಕೆಯೂ ಅರಿಯುತ್ತವೆಂದು ಆಶಿಸೋಣವೇ?

ಪತ್ರಕರ್ತರ ಮೇಲೆ ಹಲ್ಲೆ

ಶಿವಸೇನೆ ನಾಯಕನ ಬಂಧನ

ಪತ್ರಿಕೆಯ ಕಚೇರಿಯೊಂದರ ಮೇಲೆ ಆಕ್ರಮಣ ಮಾಡಿ ದಾಂಧಲೆ ನಡೆಸಿದ ಸಂಬಂಧದಲ್ಲಿ ಶಿವಸೇನೆಯ ಒಬ್ಬ ನಾಯಕ ಹಾಗೂ ಇತರ ನಾಲ್ಕು ಜನರನ್ನು ಮುಂಬಯಿ ಪೋಲೀಸರು ಬಂಧಿಸಿದ್ದಾರೆ.

ಔರಂಗಾಬಾದಿನ 'ಲೋಕಮತ' ಕಚೇರಿ ಮೇಲೆ ಜೂನ್ ಒಂಭತ್ತರಂದು ಶಿವಸೇನೆಯ ಜಿಲ್ಲಾ ಮುಖಂಡ ಮಾಧವ ಬದಕ್ ನೇತೃತ್ವದಲ್ಲಿ ಆಕ್ರಮಣ ನಡೆದಿತ್ತು ಪತ್ರಿಕೆಯ ಸಂಪಾದಕ ಮತ್ತು ಇತರ ಪತ್ರಕರ್ತರ ಮೇಲೆ ಶಿವಸೇನೆಯ ಗೂಂಡಾಗಳು ಹಲ್ಲೆ ಮಾಡಿದ್ದರು.

ಎಸ್.ಎಫ್.ಐ. ನ ರಾಜ್ಯ ಸಮಾವೇಶದ ಉದ್ಘಾಟನೆ ಅಧಿವೇಶನದಲ್ಲಿ ಸ್ವಾಗತ ಭಾಷಣ ಮಾಡಿ ಬಂದ ಬೆನ್ನಲ್ಲೇ ಸಂಪಾದಕರ ಮೇಲೆ ಹಲ್ಲೆ ನಡೆದ ಪ್ರಕರಣದ ಬಗ್ಗೆ 'ಐಕ್ಯರಂಗ'ದ ಕಳೆದ ಸಂಚಿಕೆಯಲ್ಲಿ ವಿವರವಾಗಿ ಪ್ರಕಟವಾಗಿದೆ.

ಹಲ್ಲೆಯ ಪ್ರಮುಖ ಆರೋಪಿ ಮಾಧವ ಬದಕ್ ಶಿವಸೇನೆಯ ಔರಂಗಾಬಾದ್ ಜಿಲ್ಲಾ ಘಟಕದ ಸಂಘಟಕನಾಗಿದ್ದಾನೆ. ಆತನನ್ನು ಹಾಗೂ ಶಿವಸೇನೆಯ ಇತರರನ್ನು ಮುಂಬಯಿಯಲ್ಲಿ ಶಾಸಕರ ವಿಶ್ರಾಂತಿ ಗೃಹದಲ್ಲಿ ಬಂಧಿಸಲಾಯಿತು. ಇವರೆಲ್ಲರೂ ಆಕ್ರಮಣ ನಡೆಸಿದ ನಂತರ ಪರಾರಿಯಾಗಿದ್ದರು.

ಆಕ್ರಮಣದ ಸಂಬಂಧ ಪೋಲೀಸರು ಇದುವರೆಗೆ ಶಿವಸೇನೆಯ 14 ಕಾರ್ಯಕರ್ತರನ್ನು ಬಂಧಿಸಿದ್ದಾರೆ.

ಮುಂಬಯಿಯಲ್ಲಿ ಬಂಧಿತರಾದವರನ್ನು ಔರಂಗಾಬಾದಿಗೆ ಕರೆದೊಯ್ಯಲಾಗಿದೆ.

ಭೂಕಂಪ ಪರಿಹಾರ ಯೋಜನೆಗಳಿಗೆ ಶಿಲಾನ್ಯಾಸ

ಒಂದೆರಡು ವರ್ಷಗಳ ಹಿಂದೆ ಮಹಾರಾಷ್ಟ್ರದ ಲಾತೂರನ್ನು ನಡುಗಿಸಿದ ಭೂಕಂಪದಲ್ಲಿ ಸಾವಿರಾರು ಜನರು ಬಲಿಯಾಗಿದ್ದರು. ಸಂತ್ರಸ್ತರಿಗೆ ನೆರವಾಗುವಂತೆ ಸಿಪಿಐ(ಎಂ) ಪೊಲಿಟ್ ಬ್ಯೂರೋ ನೀಡಿದ್ದ ಕರೆಗೆ ದೇಶಾದ್ಯಂತದ ಘಟಕಗಳು ಸ್ಪಂದಿಸಿದ್ದವು.

ವಿಶೇಷವಾಗಿ ಕೇರಳ, ಪಶ್ಚಿಮ ಬಂಗಾಳ, ತಮಿಳುನಾಡು ಮತ್ತು ಆಂಧ್ರಪ್ರದೇಶದ ಪಕ್ಷ ಘಟಕಗಳು ಭಾರಿ ದೊಡ್ಡ ಪ್ರಮಾಣದಲ್ಲಿ ಪರಿಹಾರ ಕಾರ್ಯಕ್ಕೆ ಮುಂದಾಗಿ ಅಪಾರ ನಿಧಿಯನ್ನು ಸಂಗ್ರಹಿಸಿದ್ದವು.

ಕೇರಳವೊಂದರಲ್ಲೇ ಪಕ್ಷದ ಕಾರ್ಯಕರ್ತರು ಕೇವಲ 12 ಗಂಟೆ ಅವಧಿಯಲ್ಲಿ 23.3 ಲಕ್ಷ ರೂ.ಗಳನ್ನು ಸಂಗ್ರಹಿಸಿದ್ದರು.

ಈ ವಿಲ್ಲಾ ಹಣ ಹಾಗೂ ಸಾಮಗ್ರಿಗಳನ್ನು ಬಳಸಿಕೊಂಡು ಭೂಕಂಪ ಪೀಡಿತ ಪ್ರದೇಶಗಳಲ್ಲಿ ಕೆಲವು ಪರಿಹಾರ ರೂಪದ ಕಾಯಂ ಕಾರ್ಯಕ್ರಮಗಳನ್ನು ಸಿಪಿಐ(ಎಂ) ಹಮ್ಮಿಕೊಂಡಿದೆ. ಇವಕ್ಕಾಗಿ ಪಕ್ಷದ ನೇತೃತ್ವದಲ್ಲಿ ಕೆಲವು ಸಂಸ್ಥೆಗಳನ್ನು ರೂಪಿಸಲಾಗಿದೆ.

ಶಾಲೆ, ಹಾಸ್ಟೇಲ್, ಕೈಗಾರಿಕಾ ಕೇಂದ್ರ ಸ್ಥಾಪನೆ ಮೊದಲಾದ ಯೋಜನೆಗಳನ್ನು ರೂಪಿಸಲಾಗಿದ್ದು ಸಿಪಿಐ(ಎಂ) ಪಾಲಿಟ್ ಬ್ಯೂರೋ ಸದಸ್ಯ ಕಾಂ.ಇ.ಕೆ.ನಯನಾರ್ ಇತ್ತೀಚೆಗೆ ಅವುಗಳಿಗೆ ಶಿಲಾನ್ಯಾಸವನ್ನು ನೆರವೇರಿಸಿದರು.

ಸಿಐಟಿಯುಗೆ ಜಯ

ವಿಶಾಖಪಟ್ಟಣಂನಲ್ಲಿರುವ ಉಕ್ಕು ಕಾರ್ಖಾನೆಯ ಕಾರ್ಮಿಕ ಸಂಘ ಮಾನ್ಯತೆಗಾಗಿ ಜೂನ್ 16ರಂದು ನಡೆದ ಚುನಾವಣೆಯಲ್ಲಿ ಸಿ.ಐ.ಟಿ.ಯು. ಸಂಯೋಜಿತ ಉಕ್ಕು ಸ್ಥಾವರ ನೌಕರರ ಸಂಘ ಭಾರೀ ಜಯಗಳಿಸಿದೆ. ಅದು ಸಮೀಪ ಪ್ರತಿಸ್ಪರ್ಧಿ ಎ.ಐ.ಟಿ.ಯು.ಸಿ.ಯನ್ನು 1410 ಮತಗಳ ಅಂತರದಿಂದ ಸೋಲಿಸಿತು.

ಸಿಐಟಿಯು, ಎಐಟಿಯುಸಿ, ಇಂಟಕ್, ಎಚ್‌ಎಂಎಸ್, ಬಿಎಂಎಸ್ ಮೊದಲಾದ ಸುಮಾರು 10 ನೊಂದಾಯಿತ ಕಾರ್ಮಿಕ ಸಂಘಗಳ ಸಂಯೋಜಿತ ಯೂನಿಯನ್‌ಗಳು ಸ್ಪರ್ಧೆಗಿಳಿದಿದ್ದವು. ಆದರೆ ಸಿಐಟಿಯು ಕಾರ್ಮಿಕರ ವಿಶ್ವಾಸವನ್ನು ಪಡೆದು ದೇಶದ ಈ ಪ್ರಮುಖ ಉಕ್ಕು ಸ್ಥಾವರದ ಅಧಿಕೃತ ಕಾರ್ಮಿಕ ಸಂಘವಾಗಿ ಹೊರಹೊಮ್ಮಿತು.



ಹೊಸ ಬಸ್ ಪಾಸ್ ಪದ್ಧತಿ ಪ್ರತಿಭಟಿಸಿ ರಾಜ್ಯಾದ್ಯಂತ ರಸ್ತೆ ತಡೆ

ನಗರದಲ್ಲಿ ವಿವಿಧ ಶಾಲಾ ಕಾಲೇಜುಗಳಿಂದ ಬಂದಿದ್ದ ನೂರಾರು ವಿದ್ಯಾರ್ಥಿ-ವಿದ್ಯಾರ್ಥಿನಿಯರು ಜೂನ್ 23ರಂದು ಜಿಲ್ಲಾಧಿಕಾರಿಗಳ ಕಚೇರಿಯ ಮುಂದೆ ರಸ್ತೆತಡೆ ನಡೆಸಿದಾಗ ಪೋಲೀಸರು ಅವರು ಬಂಧಿಸಿದರು. ಎಸ್‌ಎಫ್‌ಐ ರಾಜ್ಯ ಅಧ್ಯಕ್ಷರಾದ ಶಾಂತರಾಮ್ ನಾಯಕ್, ರಾಜ್ಯ ಕಾರ್ಯದರ್ಶಿ ಕೆ. ಪ್ರಕಾಶ್, ಜಿಲ್ಲಾ ಕಾರ್ಯದರ್ಶಿ ಆರ್. ರಾಮಕೃಷ್ಣ, ವಿದ್ಯಾರ್ಥಿ ನಾಯಕ ಎನ್. ಪ್ರಭಾ ಮುಂತಾದವರು ಈ ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಬೆಂಗಳೂರಿನ ಹೊಸೂರು ರಸ್ತೆ ಚಿಕ್ಕಬೇಗೂರು ಗೇಟ್ ಬಳಿಯಲ್ಲಿ ನೂರಾರು ವಿದ್ಯಾರ್ಥಿಗಳು ರಸ್ತೆ ತಡೆ ನಡೆಸಿದರು. ಹೊಸಕೋಟೆ ಹಲವು ಕಾಲೇಜುಗಳಿಂದ ವಿದ್ಯಾರ್ಥಿ ತರಗತಿಯನ್ನು ಬಹಿಷ್ಕರಿಸಿ, ಸುಮಾರು 15 ನಿಮಿಷಗಳಕಾಲ ಹೆದ್ದಾರಿಯನ್ನು ತಡೆದು ಬಂಧನಕ್ಕೊಳಗಾದರು.

ನಗರದ ಜಿಲ್ಲಾಧಿಕಾರಿಗಳು ಕಛೇರಿಯ ಮುಂದೆ ನಡೆದ ಸಭೆಯಲ್ಲಿ ವಿದ್ಯಾರ್ಥಿ ಮುಖಂಡರು ಮಾತನಾಡಿ, ಹೊಸ ಬಸ್‌ಪಾಸ್ ಪದ್ಧತಿಯನ್ನು ವಾಪಸ್ ಪಡೆಯಬೇಕೆಂದು ಹಾಗೂ ವಿದ್ಯಾರ್ಥಿ ಬಸ್‌ಪಾಸ್ ನೀಡುವ ರಿಯಾಯಿತಿ ಹಣವನ್ನು ಸರಕಾರವೇ ಭರಿಸಬೇಕೆಂದು ಆಗ್ರಹಿಸಿದ್ದಾರೆ. ಹಾಗೂ ಸಮಸ್ಯೆ ತತ್ಕ್ಷಣ ಬಗೆಹರಿಯದಿದ್ದಲ್ಲಿ ಮುಂದೆ ಇನ್ನೂ ತೀವ್ರ ರೀತಿಯ ಹೋರಾಟವನ್ನು ಹಮ್ಮಿಕೊಳ್ಳಲಾಗುವುದೆಂದು ಎಚ್ಚರಿಸಿದ್ದಾರೆ.

ದಾವಣಗೆರೆ: ರಾಜ್ಯ ಸರಕಾರದ ನೂತನ ಬಸ್‌ಪಾಸ್ ನೀತಿಯ ವಿರೋಧಿಸಿ ಪರಿಹರ-ದಾವಣಗೆರೆಯಲ್ಲಿ ಸಹಸ್ರಾರು ವಿದ್ಯಾರ್ಥಿಗಳು ತರಗತಿಗಳನ್ನು ಬಹಿಷ್ಕರಿಸಿ ಪ್ರತಿಭಟನಾ ಮೆರವಣಿಗೆ ನಡೆಸಿದ್ದಲ್ಲದೆ ಹರಿಹರದಲ್ಲಿ ಅರ್ಧ ಗಂಟೆಗೂ ಹೆಚ್ಚಿನ ಕಾಲ ರಸ್ತೆ ತಡೆ ಚಳುವಳಿ ನಡೆಸಿದರು.

ದಾವಣಗೆರೆಯಲ್ಲಿ ಹಲವಾರು ಶಾಲೆಗಳ ಸಹಸ್ರಾರು ವಿದ್ಯಾರ್ಥಿಗಳು ತರಗತಿಗಳೂ ಬಹಿಷ್ಕರಿಸಿ, ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಬಡವಿಭಾಗಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಹರಿಹರದಲ್ಲಿ ರಸ್ತೆ ತಡೆ: ಎಸ್‌ಎಫ್‌ಐ ಜಿಲ್ಲಾ ಅಧ್ಯಕ್ಷ ಎಸ್.ಬಿ.ಮಹಬೂಬ್ ಭಾಷಾ ಮತ್ತು ಎಸ್‌ಎಫ್‌ಐ ಮುಖಂಡರುಗಳಾದ ಸುರೇಶ್ ತರದಾಳ್, ಎಂ.ಎನ್. ರಾಮಚಂದ್ರ, ಶಿವನಾಗರಾಜ್ ಮಂಜುನಾಥ್ ನೇತೃತ್ವದಲ್ಲಿ ತರಗತಿಗಳನ್ನು ಬಹಿಷ್ಕರಿಸಿದ ಸಹಸ್ರಾರು ವಿದ್ಯಾರ್ಥಿಗಳು ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ವೃತ್ತದಲ್ಲಿ ಅರ್ಧ ಗಂಟೆಗೂ ಹೆಚ್ಚು ರಸ್ತೆ ತಡೆ ನಡೆಸಿ ಪ್ರತಿಭಟಿಸಿದರು. ನಂತರದಲ್ಲಿ ತಹಸೀಲ್ದಾರರ ಮೂಲಕ ಮನವಿ ನಿಲ್ಲಿಸಿ ಮಾತನಾಡಿದ ಎಸ್‌ಎಫ್‌ಐ ಜಿಲ್ಲಾಧ್ಯಕ್ಷ ಎಸ್.ಬಿ. ಮಹಬೂಬ್‌ಬಾಷಾ ರಾಜ್ಯ ಸರಕಾರದ ನೂತನ ಬಸ್‌ಪಾಸ್‌ನೀತಿ ವಾಪಸ್ಸಾಗದಿದ್ದರೆ ತೀವ್ರ ಹೋರಾಟ ನಡೆಸುವುದಾಗಿ ಎಚ್ಚರಿಕೆ ನೀಡಿದರು.

ಮಂಡ್ಯ: ಜೂನ್ 23ರಂದು ಹೊಸಬಸ್ ಪಾಸ್ ನೀತಿಯನ್ನು ವಿರೋಧಿಸಿ ಮಂಡ್ಯ ನಗರದಲ್ಲಿ ಬೃಹತ್ ಪ್ರತಿಭಟನಾ ಮೆರವಣಿಗೆಯನ್ನು ನಡೆಸಲಾಯಿತು. ಸುಮಾರು 500ಕ್ಕಿಂತ ಹೆಚ್ಚು ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರು ಭಾಗವಹಿಸಿದ್ದರು. ಫ್ಯಾಕ್ಟರಿ ಸರ್ಕಲ್ ಹೊಸ ಬಸ್ ನೀತಿಯನ್ನು ವಿರೋಧಿಸಿ ಘೋಷಣೆಗಳನ್ನು ಡಿ.ಸಿ. ಕಛೇರಿಯ ಬಳಿ ನಡೆದ ಸಭೆಯನ್ನು ಉದ್ದೇಶಿಸಿ ಎಸ್.ಎಫ್.ಐ.ನ ಜಿಲ್ಲಾ ಉಪಾಧ್ಯಕ್ಷರಾದ ಎನ್.ಎಸ್. ಶಂಕರೇಗೌಡ ಕಾರ್ಯದರ್ಶಿ ಕೃಷ್ಣೇಗೌಡರು ಮಾತನಾಡಿ ಸರ್ಕಾರ ಒಂದು ವಾರದೊಳಗಾಗಿ ಹೊಸ ಬಸ್ ಪಾಸ್ ನೀತಿಯನ್ನು ಹಿಂತೆಗೆದುಕೊಳ್ಳದಿದ್ದರೆ ಮಂಡ್ಯ ಜಿಲ್ಲಾದ್ಯಂತ ಶಾಲಾ ಕಾಲೇಜು ವಿದ್ಯಾರ್ಥಿಗಳು ರೈಲು ತಡೆ ಮತ್ತು ರಸ್ತೆ ತಡೆ ಚಳುವಳಿ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು.

ಸಿಂಧನೂರು: ಭಾರತ ವಿದ್ಯಾರ್ಥಿ ಫೆಡರೇಷನ್ ಎಸ್‌ಎಫ್‌ಐ ರಾಜ್ಯ ಸಮಿತಿ ಕರೆ ಮೇರೆಗೆ ಹೊಸ ಬಸ್‌ಪಾಸ್ ಪದ್ಧತಿಯನ್ನು ವಿರೋಧಿಸಿ ಸಿಂಧನೂರಿನ ಎಲ್ಲಾ ಶಾಲಾ ಕಾಲೇಜು ವಿದ್ಯಾರ್ಥಿಗಳು ಎಸ್‌ಎಫ್‌ಐನ ನೇತೃತ್ವದಲ್ಲಿ ಮೆರವಣಿಗೆ ಮುಖಾಂತರ ತಹಶೀಲ್ದಾರ್ ಕಾರ್ಯಾಲಯಕ್ಕೆ ಬಂದು ಸಹಾಯಕ ಆಯುಕ್ತರಿಗೆ ಮನವಿ ಪತ್ರವನ್ನು ಅರ್ಪಿಸಿದರು.

ನಂತರ ನಡೆದ ಬಹಿರಂಗ ಸಭೆಯಲ್ಲಿ ಎಸ್‌ಎಫ್‌ಐನ ಮುಖಂಡರಾದ ಜೆ.ಪನುಮೇಶ್ ಅವರು ಮಾತನಾಡಿ, ಕೆಎಸ್‌ಆರ್‌ಟಿಸಿ ಕಳ್ಳರ ಸಾರಿಗೆ ಸಂಸ್ಥೆಯಾಗಿ ಮಾರ್ಪಟ್ಟಿದೆಯೆಂದು ಟೀಕಿಸಿದರು. ಕೆ.ಎಸ್.ಆರ್.ಟಿ.ಸಿ.ಯಲ್ಲಿ ನಡೆಯುವ ಭ್ರಷ್ಟಾಚಾರವನ್ನು ನಿಲ್ಲಿಸದೇ ವಿದ್ಯಾರ್ಥಿಗಳ ಮೇಲೆ ಶುಲ್ಕವನ್ನು ಏರಿಸಿರುವದನ್ನು ಖಂಡಿಸಿದರು. ಪ್ರಸಕ್ತ ಶೈಕ್ಷಣಿಕ ವರ್ಷಕ್ಕೆ ತಂದಿರುವ ಹೊಸಬಸ್ ಪಾಸ್ ಪದ್ಧತಿಯನ್ನು ಕೂಡಲೇ ಹಿಂತೆಗೆದುಕೊಳ್ಳಬೇಕೆಂದು ಅವರು ಒತ್ತಾಯಿಸಿದರು. ಹೊಸಬಸ್ ಪಾಸ್ ಪದ್ಧತಿಯನ್ನು ಹಿಂತೆಗೆದುಕೊಳ್ಳದಿದ್ದರೆ ಮುಂದೆ ಸಂಭವಿಸಬಹುದಾದ ಅನಾಹುತಗಳಿಗೆ ಸರಕಾರವೇ ಹೊಣೆಯಾಗಬೇಕಾಗುತ್ತದೆಂದು ಎಚ್ಚರಿಸಿದರು.

ಕೊನೆಯಲ್ಲಿ ಎಸ್.ಎಫ್.ಐ.ನ ತಾಲೂಕು ಸಮಿತಿ ಕಾರ್ಯದರ್ಶಿ ಶಿವಮೂರ್ತಿಯವರು ವಂದಿಸಿದರು.

"ದೇಶ ಉಳಿಸಿ"

ಪುಟ 3ರಿಂದ

ಸಾಧ್ಯವಾಗುತ್ತದೆ, ಅಲ್ಲವೆ?

ಅದನ್ನು ಬರೆದ ನಮ್ಮ ದಕ್ಷಿಣ ಕನ್ನಡದ ಹೆಮ್ಮೆಯ ಪುತ್ರ ಕಾರಂತರಿಗೆ. ಅದನ್ನು ಪಠ್ಯಪುಸ್ತಕ ಮಾಡಿರುವ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಕ್ಷೌರಿಕ ರಂಗನ ಮಗ ಕ್ಷೌರಿಕ ವೃತ್ತಿಯನ್ನೇ ಮಾಡಬೇಕು, ಬೇಡುವವನ ಮಗ ಬೇಡಬೇಕು ಎಂದು ಆದೇಶ ನೀಡುವ ಅಧಿಕಾರ ಎಲ್ಲಿಂದ ಬಂದಿತು? ನನ್ನ ಮಗ ಕಲಿತು ಎಂಜಿನಿಯರೋ, ಡಾಕ್ಟರೋ, ವಿಜ್ಞಾನಿಯೋ ಆಗ ಬಾರದೇಕೆ? ಈ ಪಾಠ ಪಠ್ಯ ಪುಸ್ತಕದಲ್ಲಿ ಸೇರಿಸಬೇಕಾದ ಅಗತ್ಯವಿತ್ತೆ?

ಕಾರಂತರನ್ನು ಮತ್ತೊಂದು ಮಾತು ಕೇಳಬೇಕೆನಿಸುತ್ತದೆ: ಸಾವಿರಾರು ವರ್ಷಗಳಿಂದ ಕೆಳಜಾತಿಯ ಜನರನ್ನು ಅವಹೇಳನ ಮಾಡುತ್ತಲೇ ಬರಲಾಗಿದೆ. ನಿಮಗೆ ಇನ್ನೂ ತೃಪ್ತಿಯಾಗಿಲ್ಲವೇ? ನಮ್ಮನ್ನು ಈಗಲಾದರೂ ಮನುಷ್ಯರಂತೆ ಕಾಣಬೇಕು ಎನ್ನಿಸುವುದಿಲ್ಲವೇ?"

****

ಇನ್ನೊಬ್ಬ ಓದುಗರು ಇದೇ ಕಾರಂತರ ಪಠ್ಯಪುಸ್ತಕದ ಮತ್ತೊಂದು ನುಡಿಮುತ್ತು "ಆಳಾಗಿ ಧನಿಗೆರಡ ಬಗೆವಾತ ಹೊಲೆಯ" ಎಂಬ ಬಗ್ಗೆ ಪ್ರಸ್ತಾಪಿಸಿದ್ದಾರೆ.

****

ವಿಧಾನಸೌಧದ ಬ್ಯಾಂಕ್ವೆಟ್ ಸಭಾಂಗಣದಲ್ಲಿ ಏರ್ಪಡಿಸಿದ್ದ 'ದೇಶ ಉಳಿಸಿ' ಸಮಾವೇಶದ ಅಧ್ಯಕ್ಷತೆ ವಹಿಸಿದ್ದ ಈ ಹಿರಿಯ ಚಿಂತಕ 'ದೇಶವನ್ನು ಉಳಿಸಿ ಎಂದು ಯಾರನ್ನು ಕೇಳುತ್ತೀರಿ' ಎಂದು ವ್ಯಂಗ್ಯವಾಗಿ ಪ್ರಶ್ನಿಸಿದರು ಎಂದು ಪತ್ರಿಕೆಗಳು ವರದಿ ಮಾಡಿವೆ.

ಆಹಾ! ಎಂತಹಾ ವ್ಯಂಗ್ಯ!!.

ಇದನ್ನು ಹಿರಿಯ ಚಿಂತಕರೊಬ್ಬರ ಕುಟುನುಡಿಯೆನ್ನಬಹುದೇ? ಇಲ್ಲ- "ಆಳು" ಮತ್ತು "ಧನಿ" ಇತ್ಯಾದಿ ವರ್ಗ ವಿಭಜನೆ, ಬ್ರಾಹ್ಮಣ-ಹೊಲೆಯ ಜಾತಿ ವಿಭಜನೆ ದೈವನಿರ್ಮಿತ ಎನ್ನುವ ದೇಶದ್ರೋಹಿಗಳ ಪರವಾಗಿ ಮಾಡಿರುವ ಕ್ರೂರ ವ್ಯಂಗ್ಯ ಇದು!

-ಕೆ.ಎ.

ಅಧ್ಯಕ್ಷ ಯೆಲ್ಟ್ಸಿನ್‌ರಲ್ಲಿ ಪಾರ್ಲಿಮೆಂಟು ಅವಿಶ್ವಾಸ -ಚೆಚೆನ್ಯಾದ ಪ್ರತಿಧ್ವನಿ

ಲೋಕ ಸಂಚಾರ

ಶರತ್ಚಂದ್ರ

ಚೆಚೆನ್ಯಾದ ಗೆರಿಲ್ಲಾಗಳು ಬುಡೆನೊವ್‌ಸ್ಕ್ ಒತ್ತೆಯಾಳುಗಳ ಪ್ರಕರಣವನ್ನು ಸರ್ಕಾರ ನಿರ್ವಹಿಸಿದ ರೀತಿಯ ವಿಷಯದಲ್ಲಿ, ರಶ್ಯಾದ ಪಾರ್ಲಿಮೆಂಟು (ಡೂಮಾ) ಅಧ್ಯಕ್ಷ ಯೆಲ್ಟ್ಸಿನ್‌ರಲ್ಲಿ ಅವಿಶ್ವಾಸ ನಿರ್ಣಯ ಪಾಸು ಮಾಡಿದೆ. ಅವಿಶ್ವಾಸ ನಿರ್ಣಯದ ವಿರುದ್ಧ 71 ಹಾಗೂ ಪರವಾಗಿ 244 ಮತಗಳು ಚಲಾಯಿಸಲ್ಪಟ್ಟವು. ಬುಡೆನೊವ್ ಸ್ಕ್ ಒತ್ತೆಯಾಳುಗಳ ಪ್ರಕರಣದಲ್ಲಿ ಯೆಲ್ಟ್ಸಿನ್ ಸರ್ಕಾರ ಎಂದಿನಂತೆ ತನ್ನ ಅರಾಜಕತೆ, ದರ್ಪ ರಾಜಕೀಯ ಸೂಕ್ಷ್ಮತೆಯ ಅಭಾವ, ನಾಲಾಯಕ್ಕುತನ, ಪ್ರದರ್ಶಿಸಿ ನಗೆಪಾಟಲಾಗಿದೆ. ಯೆಲ್ಟ್ಸಿನ್ ಸರ್ಕಾರದ ಮೇಲೆ ರಶ್ಯನರ ಕೋಪ ಅವಿಶ್ವಾಸ ನಿರ್ಣಯದಲ್ಲಿ ಪ್ರತಿಫಲಿತವಾಗಿದೆ. ಇದರಲ್ಲಿ ಮಡಿದ 150 ಜನರ ಸಾವಿಗೆ ರಶ್ಯನ್ ಸರ್ಕಾರವೇ ಹೊಣೆ.

ಆದರೆ ರಶ್ಯನ್ ಸಂವಿಧಾನದ ಪ್ರಕಾರ (ಇದು ಅತ್ಯಂತ ಪ್ರಜಾಪ್ರಭುತ್ವ ವಿರೋಧಿ ಅಂಶ ಎಂದು ಬೇರೆ ಹೇಳಬೇಕಾಗಿಲ್ಲ) ಸರ್ಕಾರ ಅವಿಶ್ವಾಸಮತ ಪಾಸಾದರೂ ರಾಜಿನಾಮೆ ಕೊಡಬೇಕಾಗಿಲ್ಲ. ಆದರೆ ಮೂರು ತಿಂಗಳೊಳಗೆ ಇನ್ನೊಂದು ಅವಿಶ್ವಾಸ ಮತ ಪಾಸಾದರೆ ಆಗ ಸರ್ಕಾರವನ್ನು ಅಧ್ಯಕ್ಷರು ವಜಾ ಮಾಡಬೇಕಾಗುತ್ತದೆ. ಅಥವಾ ಪಾರ್ಲಿಮೆಂಟು ವಿಸರ್ಜಿಸಬಹುದು. ಆದರೆ ಅಧ್ಯಕ್ಷರು ಮುಂದುವರೆಯಬಹುದು. ಪಾರ್ಲಿಮೆಂಟಿನಲ್ಲಿ ಎಡ ಹಾಗೂ ದೇಶಪ್ರೇಮಿ ಪಕ್ಷಗಳ ವಿರೋಧಿ ಕೂಟ ಈಗ ಎರಡನೇ ಅವಿಶ್ವಾಸ ಮತಕ್ಕೆ ತಯಾರಿ ನಡೆಸುತ್ತಿದೆ. ರಶ್ಯನ್ ಪಾರ್ಲಿಮೆಂಟು ಒಂದು ನಿರ್ಣಯದ ಮೂಲಕ ಜುಲೈ 1 ರಂದು ಎರಡನೇ ಅವಿಶ್ವಾಸ ನಿರ್ಣಯದ ಮೇಲೆ ಮತದಾನ ನಡೆಯುವುದು. ಎರಡನೇ ಅವಿಶ್ವಾಸ ನಿರ್ಣಯ ಪಾಸಾದರೆ (ಅದರ ಸಾಧ್ಯತೆ ಬಹಳ ಅಧಿಕವಾಗಿದೆ) ಅಧ್ಯಕ್ಷ ಯೆಲ್ಟ್ಸಿನ್ ಪಾರ್ಲಿಮೆಂಟು ವಿಸರ್ಜಿಸುವ ಸಂಭವ ಹೆಚ್ಚು.

ಈ ನಡುವೆ ಬುಡೆನೊವ್‌ಸ್ಕ ಒತ್ತೆಯಾಳು ಪ್ರಕರಣ ಯೆಲ್ಟ್ಸಿನ್ ಸರ್ಕಾರಕ್ಕೆ ಅವಮಾನಕಾರಿ ಪರಾಜಯ, ಹಾಗೂ ಚೆಚೆನ್ಯಾ ಗೆರಿಲ್ಲಾಗಳಿಗೆ ವಿಜಯದಲ್ಲಿ ಪರ್ಯವಸನಗೊಂಡಿದೆ. ಈ ಪ್ರಕರಣದ ವಿವರಗಳು ರಶ್ಯನರಲ್ಲಿ ಸರ್ಕಾರದ ಬಗ್ಗೆ ಇನ್ನಷ್ಟು ಕೋಪ, ಹೇಸಿಗೆ ಉಂಟು ಮಾಡಿಸಿದೆ. 5 ದಿನಗಳ ಕಾದಾಟದ ನಂತರ ರಶ್ಯನ್ ಸರ್ಕಾರ ಚೆಚೆನ್ಯಾ ಗೆರಿಲ್ಲಾಗಳ ಎಲ್ಲಾ ಷರತ್ತುಗಳಿಗೆ ಒಪ್ಪಬೇಕಾಯಿತು. ಚೆಚೆನ್ಯಾ ವಿರುದ್ಧ ರಶ್ಯಾದ ಯುದ್ಧದಲ್ಲಿ ಕದನ ವಿರಾಮ, ರಶ್ಯಾದ ಗಡಿದಾಟುವವರೆಗೆ 150 ಒತ್ತೆಯಾಳುಗಳು ಜತೆಗೆ ಬರಬೇಕು. (ಇದರಲ್ಲಿ ಸ್ವಇಚ್ಛೆಯಿಂದ ಹೋದ ಪಾರ್ಲಿಮೆಂಟು ಸದಸ್ಯರು, ಸ್ಥಳೀಯ ಅಧಿಕಾರಿಗಳು ಪತ್ರಕರ್ತರು ಇದ್ದರು). ಚೆಚೆನ್ಯಾ ಸಮಸ್ಯೆ ಪರಿಹಾರಕ್ಕೆ ಮಾತುಕತೆ ನಡೆಯಬೇಕು. ಈ ಎಲ್ಲಾ ಷರತ್ತುಗಳಿಗೆ ರಶ್ಯಾದ ಪ್ರಧಾನಿ ಹಾಗೂ ಗೆರಿಲ್ಲಾ ನಾಯಕ ಬಸಾಯೆವ್ ರವರ ನಡುವೆ ನಡೆದ ಟೆಲಿಫೋನ್ ಮಾತುಕತೆಗಳಲ್ಲಿ ಒಪ್ಪಲಾಯಿತು. ಬುಡೆನೊವ್‌ಸ್ಕ ನಗರ ಬಿಡುವಾಗ ಹಲವಾರು ಬಸ್ಸುಗಳಲ್ಲಿ ಡಾಕ್ಟರುಗಳು, ಒತ್ತೆಯಾಳುಗಳು ಹಾಗೂ ಶಸ್ತ್ರಾಸ್ತ್ರಗಳೊಂದಿಗೆ ಗೆರಿಲ್ಲಾಗಳು ವಿಜಯದ ಸಂಕೇತ ತೋರಿಸುತ್ತಾ ಹರ್ಷೋದ್ಗಾರ ಮಾಡಿದ್ದು ರಶ್ಯನ್ ಸರ್ಕಾರಕ್ಕೆ ತೀವ್ರವಾಗಿ ಅವಮಾನಕಾರಿಯಾಗಿತ್ತು. ಹೆಂಗಸರು,ಮಕ್ಕಳು, ರೋಗಿಗಳನ್ನು ಆಸ್ಪತ್ರೆಯಲ್ಲಿ ಒತ್ತೆಯಾಳು ಆಗಿ ತೆಗೆದುಕೊಂಡದ್ದು ಚೆಚೆನ್ಯಾ ಗೆರಿಲ್ಲಾಮಾಫಿಯಾ ರೀತಿ ಅಪರಾಧಿ ಪ್ರವೃತ್ತಿಯ ಪ್ರದರ್ಶನ ವಿದ್ದಾಗ, ಸರ್ಕಾರ ರಾಜಕೀಯ ಚಾಣಾಕ್ಷತನದಿಂದ ನಡೆದುಕೊಂಡಿದ್ದರೆ ಈ ದುರಂತ ತಪ್ಪಿಸಬಹುದಿತ್ತು. ಮಾತ್ರವಲ್ಲ ಚೆಚೆನ್ಯಾ ಗೆರಿಲ್ಲಾಗಳು ದೇಶದೊಳಗೆ ಹಾಗೂ ಅಂತರ್ರಾಷ್ಟ್ರೀಯವಾಗಿ ಅಪಕೀರ್ತಿ ಹೊಂದುವಂತೆ ಮಾಡಬಹುದಿತ್ತು. ಆದರೆ ರಶ್ಯನ್ ಸರ್ಕಾರದ ನಾಲಾಯಕ್ಕುತನ ಅದನ್ನು ದೊಡ್ಡ ದುರಂತವಾಗಿಸಿ ತಾನೇ ಅಪಕೀರ್ತಿಗೀಡಾಗಿದೆ. ರಶ್ಯದೊಳಗಿರುವ ಬುಡೆನೊವ್ ಸ್ಕವರೆಗೆ ಇಷ್ಟು ಸಶಸ್ತ್ರ ಗೆರಿಲ್ಲಾಗಳು ಎಂಬ ಪ್ರಶ್ನೆಗೆ ಗೆರಿಲ್ಲಾ ನಾಯಕ ಬಸಾಯೆವ್ ಉತ್ತರಿಸುತ್ತಾ ಸಾಕಷ್ಟು ದುಡ್ಡಿದ್ದರೆ ರಶ್ಯನ್ ಸರ್ಕಾರವನ್ನು ಕೊಳ್ಳಬಹುದು ಎಂದು ಹಾರಿಸಿದ ಚಟಾಕಿಗಿಂತ ದೊಡ್ಡ ಅವಮಾನ ಬೇರೆ ಇರಲಿಕ್ಕಿಲ್ಲ. ಪ್ರಧಾನ ಮಂತ್ರಿ ಕದನ ವಿರಾಮ ಹಾಗೂ ಒತ್ತೆಯಾಳುಗಳು ಬಿಡುಗಡೆಗೆ ಪ್ರಯತ್ನಿಸುತ್ತಿದ್ದಾಗ, ಅಧ್ಯಕ್ಷ ಯೆಲ್ಟ್ಸಿನ್ ತಾನು ಮಿಲಿಟರಿ ಕಾರ್ಯಾಚರಣೆಗೆ ಆಜ್ಞೆ ಮಾಡಿದ್ದೇವೆ ಎಂದು ಹೇಳಿಕೆ ನೀಡುವುದು (ಅದೂ ಜಿ-7 ಸೇರಿದ್ದ ಕೆನಡಾದಲ್ಲಿ) ಹಾಸ್ಯಾಸ್ಪದವಲ್ಲದೆ ಇನ್ನೇನು - ಈ ಭಾರಿ ದುರಂತದ ಮಧ್ಯೆಯೂ?

ಜಪಾನ್ ಅಮೇರಿಕನ್ ವಾಣಿಜ್ಯ ಮಾತುಕತೆ ವಿಫಲ

ಜಿನೇವಾದಲ್ಲಿ ಜಪಾನ್ ಹಾಗೂ ಅಮೇರಿಕನ್ ಪ್ರತಿನಿಧಿಗಳು ಆ ಎರಡು ದೇಶಗಳ ನಡುವೆ ಕಾರು ಹಾಗೂ ವಿಮಾನ ಸಾರಿಗೆ ಬಗ್ಗೆ ಇರುವ ವಿವಾದಗಳು ಮಾತುಕತೆ ನಡೆಸುತ್ತಿದ್ದು, ಅದು ವಿಫಲವಾಗುವ ಹಾದಿಯಲ್ಲಿದೆ. ಅಮೇರಿಕನ್ ಸರಕುಗಳು ಹಾಗೂ ಸೇವೆಗಳಿಗೆ ಜಪಾನ್ ಸಾಕಷ್ಟು ಮಾರುಕಟ್ಟೆ ತೆರೆಯುತ್ತಿಲ್ಲ ಎಂದು ಅಮೇರಿಕದ ಆಪಾದನೆ. ಜಪಾನ್ ತನ್ನ ಷರತ್ತುಗಳಿಗೆ ಒಪ್ಪದಿದ್ದರೆ, ಅಮೇರಿಕ ಜಪಾನ್ ಮೇಲೆ ದಿಗ್ಬಂಧನ ಹಾಕುವುದೆಂದು ಬೆದರಿಸಿದೆ. ಅಮೇರಿಕ ದಿಗ್ಬಂಧನ ಹಾಕಿದರೆ ಜಪಾನ್ ತಾನು ವಾಪಸು ದಿಗ್ಬಂಧನ ಹೇರುವುದಾಗಿ ಪ್ರತಿಕ್ರಿಯಿಸಿದೆ. ಇದರಿಂದಾಗಿ ಸಾಮ್ರಾಜ್ಯಶಾಹಿ ದೇಶಗಳು ಗ್ಯಾಟ್ ಒಪ್ಪಂದದ ನಂತರ ಹುಟ್ಟು ಹಾಕಿದ ಡಬ್ಲ್ಯುಟಿ.ಓ. (ವಿಶ್ವ ವ್ಯಾಪಾರ ಸಂಘಟನೆ) ಮೂರನೇ ಜಗತ್ತಿನ ದೇಶಗಳನ್ನು ನಿಯಂತ್ರಿಸಲು ಮಾತ್ರ. ಅದಕ್ಕೆ ಸಾಮ್ರಾಜ್ಯಶಾಹಿ ದೇಶಗಳು ಬದ್ಧವಾಗಿರುವುದಿಲ್ಲ ಎಂಬ ಬಗ್ಗೆ ಯಾರಿಗಾದರೂ ಭ್ರಮೆ ಇದ್ದರೆ ಅದನ್ನು ನಿವಾರಿಸಿದೆ. ಡಬ್ಲ್ಯುಟಿ.ಓ.ನ ನಿಯಮಗಳನ್ನು ಒಪ್ಪಿದರೆ ಈ ರೀತಿ ವ್ಯಾಪಾರ ಒಪ್ಪಂದದ ಬಗೆಗಿನ ವಿವಾದ ಡಬ್ಲ್ಯು.ಟಿ.ಓ. ಬಗೆಹರಿಸಬೇಕು.

ಅಮೇರಿಕದ ಏಕಪಕ್ಷೀಯ ನೀತಿ ಹಾಗೂ ಉದ್ಧಟತನಕ್ಕೆ ಸಾಮ್ರಾಜ್ಯಶಾಹಿ ವಲಯದಲ್ಲೂ ಯಾವುದೇ ಬೆಂಬಲ ಸಿಗುತ್ತಿಲ್ಲ. ಇತ್ತೀಚೆಗೆ ಕೆನಡಾದಲ್ಲಿ ನಡೆದ ಜಿ-೭ ಸಾಮ್ರಾಜ್ಯಶಾಹಿ ಕೂಟದಲ್ಲಿ ಜಪಾನ್ ಹಾಗೂ ಇರಾನ್ ವಿರುದ್ಧ ದಿಗ್ಬಂಧನ ಹೊರಿಸಬೇಕು ಎಂಬ ಅಮೇರಿಕನ್ ಪ್ರಸ್ತಾಪವನ್ನು ತಿರಸ್ಕರಿಸಲಾಯಿತು.

ಫಿಲಿಪ್ಪೀನ್ಸ್‌ನಲ್ಲಿ ಸಾಮ್ರಾಜ್ಯಶಾಹಿ -ವಿರೋಧಿ ಅಲೆ

ಸಿಂಗಾಪೂರ್‌ನಲ್ಲಿ ಫಿಲಿಪ್ಪೀನ್ಸ್ ನ ಮನೆ ಕೆಲಸದಾಳಿಗೆ ನೀಡಿದ ಮರಣದಂಡನೆ ಅತ್ಯಂತ ವಿವಾದಾಸ್ಪದವಾಗಿದ್ದು, ಭಾರಿ ಪ್ರದರ್ಶನಗಳು ನಡೆದಿವೆ. 42 ವರ್ಷದ ಫ್ಲೋರ್ ಕಂಟೆಪ್ಲಾಸಿಯನ್ ಸಿಂಗಾಪೂರ್‌ನಲ್ಲಿ ಸಿಂಗಾಪೂರ್‌ನ ಒಂದು ಮಗು ಹಾಗೂ ಇನ್ನೊಬ್ಬ ಮನೆ ಕೆಲಸದಾಳುವಿನ ಕೊಲೆ ಆಪಾದನೆಯಲ್ಲಿ ಮರಣ ದಂಡನೆಗೀಡಾಗಿದ್ದಳು. ಇದು ಸುಳ್ಳು ಆಪಾದನೆ ಎಂದು ವ್ಯಾಪಕವಾಗಿ ಹರಡಿರುವ ಆಪಾದನೆ. ಸಿಂಗಾಪೂರ್‌ನ ಶ್ರೀಮಂತರು ಮನೆಕೆಲಸದಾಳುಗಳನ್ನು ಹೆದರಿಸಲು ಬೆದರಿಸಲು ಸುಳ್ಳು ಆಪಾದನೆಗಳನ್ನು ಹಾಕಿ, ಕಠಿಣ ಶಿಕ್ಷೆ ಕೊಡಿಸುವುದು ಸಾಮಾನ್ಯ. ಇದೂ ಅಂತಹದೇ ಪ್ರಕರಣ ಕುಟುಂಬದೊಳಗಿನ ವೈಮನಸ್ಯದಲ್ಲಿ ಆದ ಅಪರಾಧಗಳನ್ನು ಮನೆಕೆಲಸದಾಳುಗಳ ಮೇಲೆ ಹೊರಿಸುವುದು ಸಾಮಾನ್ಯ. ಈ ಪ್ರಕರಣದಲ್ಲಿ ನಡೆದ ಕೋರ್ಟು ವಿಚಾರಣೆಯಲ್ಲಿ ಕೆಲವು ಪ್ರಮುಖ ಪುರಾವೆ ಹಾಗೂ ಸಾಕ್ಷಿಗಳನ್ನು ಹಾಜರು ಪಡಿಸಿಕೊಳ್ಳಲು ಅವಕಾಶ ಕೊಡಲಿಲ್ಲ. ಈ ತೀವ್ರ ಆಪಾದನೆಯನ್ನು ಸಿಂಗಾಪೂರ ಸರಕಾರ ನಿರ್ಲಕ್ಷಿಸಿದೆ. ಇದನ್ನು ಪ್ರತಿಭಟಿಸಿ ದೇಶದಾದ್ಯಂತ ಭಾರಿ ಪ್ರದರ್ಶನ ನಡೆದವು. ಸಿಂಗಾಪೂರ್ ಜತೆ ಸಂಬಂಧ ಕಡಿದುಕೊಳ್ಳಬೇಕು ಎಂಬ ಬೇಡಿಕೆಯೆದ್ದಿತ್ತು. ಹಲವು ನಗರ, ಸ್ಥಳೀಯ ಸರ್ಕಾರಗಳು ಸಿಂಗಾಪೂರ್ ಸರಕುಗಳನ್ನು ಬಹಿಷ್ಕರಿಸಿದವು.

ಈ ಪ್ರತಿಭಟನೆಗೆ ಮಣಿದು ಫಿಲಿಪ್ಪೀನ್ಸ್ ಸರ್ಕಾರ ವಿಚಾರಣೆಗೆ ಆಜ್ಞೆ ಮಾಡಿದೆ. ಈ ವಿಚಾರಣೆಯಲ್ಲಿ ಈ ಕೊಲೆ ಆಪಾದನೆ ಸುಳ್ಳು ಎಂದು ಸಾಬೀತಾದರೆ, ಸಿಂಗಾಪೂರ್ ಜತೆ ಸಂಬಂಧ ಕಡಿದುಕೊಳ್ಳುವುದಾಗಿ ಅಧ್ಯಕ್ಷ ರಾಮೋಸ್ ಭರವಸೆ ಕೊಡಬೇಕಾಯಿತು. ಫಿಲಿಪ್ಪೀನ್ಸ್‌ನ ಶೇಕಡಾ 60 ಜನ ಬಡತನದ ರೇಖೆಯ ಕೆಳಗೆ ಇದ್ದು, ದೊಡ್ಡ ಪ್ರಮಾಣದಲ್ಲಿ ವಿದೇಶಗಳಲ್ಲಿ ಮನೆ ಕೆಲಸದಾಳುಗಳಾಗಿ ದುಡಿಯುತ್ತಾರೆ. ಇವರ ಸಂಕಷ್ಟ, ಸಮಸ್ಯೆಗಳ ಬಗ್ಗೆ ಸರ್ಕಾರ ತಲೆ ಕೆಡಿಸಿಕೊಳ್ಳುವುದಿಲ್ಲ ಎಂಬ ಆಕ್ರೋಶವೇ ಈ ಪ್ರಕರಣದಲ್ಲಿ ಭುಗಿಲೆದ್ದಿರುವುದು. ಸುಮಾರು 30 ಲಕ್ಷ ಫಿಲಿಪ್ಪೀನ್ನರು ವಿದೇಶಗಳಲ್ಲಿ ಕೆಲಸ ಮಾಡುತ್ತಿದ್ದ 1989-93 ರಲ್ಲಿ 8 ಶತಕೋಟಿ ಡಾಲರ್‌ಗಳನ್ನು ಸ್ವದೇಶಕ್ಕೆ ಕಳುಹಿಸಿದ್ದಾರೆ. ದೇಶದ ವಿದೇಶಿ ವಿನಿಮಯ ಆದಾಯದ ಅತಿ ದೊಡ್ಡ ಅಂಶ ಇದು. ರಾಷ್ಟ್ರೀಯ ಒಟ್ಟು ಉತ್ಪನ್ನದ ಶೇಕಡಾ 4 ರಷ್ಟು ಇದು. ಫಿಲಿಪ್ಪೀನ್‌ಗಳು ಸಾಮಾನ್ಯವಾಗಿ ದಕ್ಷಿಣ ಪೂರ್ವ ಏಶ್ಯಾದ ಬೆಳೆಯುತ್ತಿರುವ ದೇಶಗಳಲ್ಲಿ ಶ್ರೀಮಂತ ಮನೆಯಾಳುಗಳಾಗಿ ದುಡಿಯುತ್ತಿದ್ದು, ಅವರ ಸ್ಥಿತಿ ದಯನೀಯ. ಯಾವುದೇ ರೀತಿಯ ಹಕ್ಕುಗಳು ಅವರಿಗೆ ಇಲ್ಲ. ಸಿಂಗಾಪೂರ್ ನಲ್ಲಿ ಕೆಲಸ ಮಾಡುವ 65 ಸಾವಿರ ಫಿಲಿಪ್ಪೀನ್ ಗಳು ಅತ್ಯಂತ ಕ್ರೂರ ದಬ್ಬಾಳಿಕೆಗೆ ಒಳಗಾದವರು ಫಿಲಿಪ್ಪೀನ್‌ನ ಮನೆಕೆಲಸದಾಳುಗಳನ್ನು ಲೇಬರ್ ಕಂಟ್ರಾಕ್ಟರುಗಳು ನೇಮಿಸುತ್ತಾರೆ. ಇವರು ತಾವು ಕೆಲಸ ಮಾಡುವ ದೇಶಗಳಲ್ಲಿ ಆದಾಯ ತೆರಿಗೆ ಕೊಡುವುದಲ್ಲದೆ, ಪ್ರದೇಶವಲ್ಲಿ ಆದಾಯ ತೆರಿಗೆ ಕೊಡಬೇಕಾಗುತ್ತದೆ. ಅಲ್ಲದೆ ತಮ್ಮ ಆದಾಯದ ಒಂದು ಭಾಗವನ್ನು ಸ್ವದೇಶಕ್ಕೆ ಕಳಿಸಲೇ ಬೇಕು. ಫಿಲಿಪ್ಪೀನ್ಸ್ ಸರ್ಕಾರದ ವಿರುದ್ಧ ಆಕ್ರೋಶ ಸಿಡಿದೆದ್ದು, ಅಮೇರಿಕ ಪುನಃ ಈ ದೇಶದಲ್ಲಿ ಹಿಂಬಾಗಿಲಿನಿಂದ ಮಿಲಿಟರಿ ನೆಲೆಗಳನ್ನು ಸ್ಥಾಪಿಸುವುದರ ವಿರುದ್ಧ ತೀವ್ರ ಪ್ರತಿಭಟನೆ ಕಂಡು ಬಂದಿದೆ.

ಮೇಜರ್ ರಾಜೀನಾಮೆ

ಬ್ರಿಟಿಷ್ ಪ್ರಧಾನ ಮಂತ್ರಿ ಜಾನ್ ಮೇಜರ್ ಬ್ರಿಟಿಷ್ ಕನ್ಸರ್ವೇಟಿವ್ ಪಕ್ಷದ ನಾಯಕತ್ವಕ್ಕೆ ರಾಜೀನಾಮೆ ನೀಡಿದ್ದಾರೆ. ಅವರ ಮಂತ್ರಿಮಂಡಲದ ಹಿರಿಯ ವಿದೇಶಾಂಗ ಮಂತ್ರಿ ಡೊಗ್ಲಾಸ್ ಹರ್ಡ್ ರಾಜಿನಾಮೆ ನೀಡಿದ್ದಾರೆ.

ಕನ್ಸರ್ವೇಟಿವ್ ಪಕ್ಷ ಪಾರ್ಲಿಮೆಂಟಿನಲ್ಲಿ ಕೇವಲ 9 ಸೀಟುಗಳ ಬಹುಮತ ಹೊಂದಿದ್ದು ಕೆಲವು ಭಿನ್ನಮತೀಯರು ಜಾನ್ ಮೇಜರ್ ಅವರ ನಾಯಕತ್ವವನ್ನು ಪ್ರಶ್ನಿಸುತ್ತಾ ಬಂದಿದ್ದಾರೆ. ಮುಖ್ಯ ಭಿನ್ನಾಭಿಪ್ರಾಯ ಯುರೋಪ್ ಜತೆ ಐಕ್ಯಗೊಳ್ಳುವ ನೀತಿ ಬಗ್ಗೆ ಆಗಿದೆ. ಇದರಿಂದ ಬೇಸತ್ತ ಮೇಜರ್ ಈ ನಿರ್ಧಾರ ಕೈಗೊಂಡಿದ್ದಾರೆ. ಜುಲೈ 4 ರಂದು ಪಕ್ಷದ ನಾಯಕತ್ವಕ್ಕೆ ಚುನಾವಣೆ ನಡೆಯಲಿದೆ. ಪಕ್ಷದ ನಿಯಮಗಳ ಪ್ರಕಾರ ನಾಯಕತ್ವದ ಆಯ್ಕೆಗೆ ಶೇಕಡಾ 50ಕ್ಕಿಂತ ಹೆಚ್ಚು ಮತಪಡೆಯಬೇಕು ಹಾಗೂ ಹತ್ತಿರದ ಪ್ರತಿಸ್ಪರ್ಧಿಯಿಂದ ಶೇಕಡಾ 15 ಹೆಚ್ಚು ಮತಗಳಿಸಬೇಕು. ಮೇಜರ್ ರವರೇ ಪಕ್ಷದ ನಾಯಕತ್ವಕ್ಕೆ ಪುನರಾಯ್ಕೆಯಾಗುವ ನಿರೀಕ್ಷೆ ಇದೆ.

ಕ್ಯೂಬಾದ ಜತೆ ಸೌಹಾರ್ದತಾ ಸಮಾವೇಶ ಆಸ್ಟ್ರೇಲಿಯಾದಲ್ಲಿ

ಆಸ್ಟ್ರೇಲಿಯಾದ ಸಿಡ್ನಿ ನಗರದಲ್ಲಿ ಮೇ 19 ರಿಂದ 21ರವರೆಗೆ ಆಸ್ಟ್ರೇಲಿಯಾ ಕ್ಯೂಬಾ ಸ್ನೇಹ ಸಂಘದ ವಾರ್ಷಿಕ ಸಮಾವೇಶ ನಡೆಯಿತು. ಕ್ಯೂಬಾದ ಸ್ವಾತಂತ್ರ್ಯ ಹೋರಾಟಗಾರ ಜೋಸ್ ಮಾರ್ತಿಯ ಶತಮಾನೋತ್ಸವದ ಸಂದರ್ಭದಲ್ಲಿ ಈ ಸಮಾವೇಶವನ್ನು ವಿಶೇಷವಾಗಿ ಹಮ್ಮಿಕೊಳ್ಳಲಾಗಿತ್ತು. ಕ್ಯೂಬಾದ ಜನತೆಗಳ ಜತೆ ಸ್ನೇಹ ಸಂಘಟನೆ (ICAP) ಯಿಂದ ಇಬ್ಬರು ಪ್ರತಿನಿಧಿಗಳು ಸಮಾವೇಶದಲ್ಲಿ ಹಾಜರಿದ್ದರು.

ಕ್ಯೂಬಾದ ಜತೆ ಆಸ್ಟ್ರೇಲಿಯಾದ ಜನತೆ ಹಾಗೂ ಸರ್ಕಾರ ತೋರುತ್ತಿರುವ ಸ್ನೇಹ ಸೌಹಾರ್ದತೆ ಬಗ್ಗೆ ಕೃತಜ್ಞತೆ ವ್ಯಕ್ತಪಡಿಸುತ್ತಾ, ಅಮೇರಿಕದ ಜತೆ ಘನವಾದ ವಾಣಿಜ್ಯ ಸಂಬಂಧವಿದ್ದರೂ ಆದೇಶದ ವಾಣಿಜ್ಯ ನಿರ್ಬಂಧವನ್ನು ಧಿಕ್ಕರಿಸುವ ನೀತಿಯನ್ನು ಅಭಿನಂದಿಸಿದರು. ಈಗ ಕ್ಯೂಬಾ ತನ್ನ ಚರಿತ್ರೆಯಲ್ಲಿ ನಿರ್ಣಾಯಕ ಘಟ್ಟವನ್ನು ಕ್ರಮಿಸುತ್ತಿದ್ದು, ಇಂತಹ ಸೌಹಾರ್ದತೆ ಅತ್ಯಂತ ಮಹತ್ವದ್ದು ಎಂದರು.

ಆಸ್ಟ್ರೇಲಿಯಾ ಸರ್ಕಾರ ಫ್ರೆಂಚ್ ಸರ್ಕಾರ ಫೆಸಿಫಿಕ್ ನಲ್ಲಿ ಅಣ್ವಸ್ತ್ರ ಪರೀಕ್ಷಣೆ ಪುನಾರಾರಂಭಿಸುವ ನಿರ್ಣಯಕ್ಕೆ ತೀವ್ರ ಪ್ರತಿಭಟನೆ ವ್ಯಕ್ತಪಡಿಸಿ, ಫ್ರಾನ್ಸ್ ನಲ್ಲಿ ತನ್ನ ರಾಯಭಾರಿಯನ್ನು ತುರ್ತಾಗಿ ವಾಪಸು ಕರೆಸಿಕೊಂಡಿದೆ. ಅಲ್ಲದೆ ಎಲ್ಲಾ ಮಿಲಿಟರಿ ಸಂಬಂಧಗಳನ್ನು ಕಡಿದುಕೊಂಡಿವೆ. ಆಸ್ಟ್ರೇಲಿಯಾದಾದ್ಯಂತ ಫ್ರೆಂಚ್ ನಿರ್ಧಾರದ ವಿರುದ್ಧ ಕೋಪಾವೇಶದ ಪ್ರತಿಭಟನೆ ವ್ಯಕ್ತವಾಗಿತ್ತು. ಸರ್ಕಾರ ಸಾಕಷ್ಟು ತೀವ್ರವಾಗಿ ಪ್ರತಿಭಟಿಸಿಲ್ಲ ಎಂದು ಟೀಕೆಯ ಹಿನ್ನೆಲೆಯಲ್ಲಿ ಸರ್ಕಾರ ಈ ಕ್ರಮಗಳನ್ನು ಕೈಗೊಂಡಿದೆ.

ಆಸ್ಟ್ರೇಲಿಯಾದಲ್ಲಿ ಇನ್ನೊಂದು ಮಹತ್ವಪೂರ್ಣ ಬೆಳವಣಿಗೆಯೆಂದರೆ ಬ್ರಿಟಿಷ್ ಡೊಮಿನಿಯನ್ ಆಗಿ ಮುಂದುವರೆಯುವುದನ್ನು ನಿಲ್ಲಿಸುವ ಬಗ್ಗೆ ಪ್ರಬಲ ಜನಮತ ವ್ಯಕ್ತವಾಗಿದೆ. ಈಗಿನ ಪ್ರಧಾನಿ ಇದಕ್ಕೆ ತಮ್ಮ ಬೆಂಬಲ ವ್ಯಕ್ತಪಡಿಸಿದ್ದಾರೆ. ಬ್ರಿಟಿಷ್‌ರಿಗಾಗಿ ಔಪಚಾರಿಕವಾಗಿ ಆಸ್ಟ್ರೇಲಿಯಾದ ಸಂವಿಧಾನಾತ್ಮಕ ಮುಖ್ಯಸ್ಥ ಇದನ್ನು ಬದಲಾಯಿಸಿ ಆಸ್ಟ್ರೇಲಿಯಾವನ್ನು ಸರ್ವತಂತ್ರ ಸ್ವತಂತ್ರ ದೇಶ ಮಾಡಲು ಸಂವೈಧಾನಿಕ ಬದಲಾವಣೆ ಬೇಕಾಗಿದೆ. ಇದರೊಂದಿಗೆ ಬ್ರಿಟಿಷ್ ಸಾಮ್ರಾಜ್ಯದ ಕೊನೆಯ ಪಳೆಯುಳಿಕೆ ಕೊನೆಗೊಂಡಂತಾಗುತ್ತದೆ.

ಜನತೆಯ ಕೊರಳಿಗೆ ಹಾಕಿರುವ ಒರಳುಗಲ್ಲುಗಳು

ಪುಟ 5 ರಿಂದ'

ಯನ್ನೇ ಆಧಾರವಾಗಿಟ್ಟುಕೊಳ್ಳಲಾಗಿದೆ.

⊙ ಈ ಯೋಜನೆಯ ವೆಚ್ಚದ ಮುಕ್ಕಾಲು ಪಾಲು ಸಾಲದಿಂದ, ಕಾಲು ಪಾಲು ಶೇರು ಬಂಡವಾಳದಿಂದ ಬರುತ್ತದೆ. ಒಟ್ಟು 1229.96 ಕೋಟಿ ಶೇರು ಬಂಡವಾಳದಲ್ಲಿ ಕೊಜೆಂಟ್ರಿಕ್ಸ್ ಕಂಪನಿ ಮತ್ತು ಅದರ ಪಾಲುದಾರ ಇನ್ನೊಂದು ಅಮೇರಿಕನ್ ಕಂಪೆನಿ ಜನರಲ್ ಇಲೆಕ್ಟ್ರಿಕ್‌ನ ಶೇರು ಬಂಡವಾಳ ಒಟ್ಟು ಕೇವಲ ರೂ. 2350 ಕೋಟಿ ರೂ. ಅಂದರೆ ಶೇ. 24. ಯೋಜನೆಯ ಒಟ್ಟು ವೆಚ್ಚವನ್ನು ತಗೊಂಡರೆ ಇದು ಕೇವಲ ಶೇ. 6 ಆಗುತ್ತದೆ. ಇದನ್ನು ಕೂಡಾ ಆ ಕಂಪೆನಿಗಳು ಆರಂಭದಲ್ಲಿ ತೊಡಗಿಸಬೇಕಾಗಿಲ್ಲ. ಯೋಜನೆ ಕಾರ್ಯನಿರ್ವಹಿಸಲಾರಂಭಿಸಿದ ಮೊದಲ ವರ್ಷದಲ್ಲಿ ತೊಡಗಿಸದರಾಯಿತು. ಯೋಜನೆಯ ನಿರ್ಮಾಣವನ್ನು ತನ್ನ ಸ್ವತಃ ಹಣವನ್ನೇನೂ ತೊಡಗಿಸದೆ ಕೇವಲ ಸಾಲದಿಂದಲೇ ಮಾಡಲು ಅವಕಾಶ ನೀಡಲಾಗಿದೆ. ಭಾರತದ ಯಾವ ಕಂಪೆನಿಗೂ ತನ್ನ ಸ್ವಂತ ಹಣವನ್ನು ಗಮನಾರ್ಹ ಪ್ರಮಾಣದಲ್ಲಿ ತೊಡಗಿಸದೆ ವ್ಯವಹಾರ ನಡೆಸಲು ಅವಕಾಶ ನೀಡಲಾಗುವುದಿಲ್ಲ. ಅಂದರೆ ಯಾವ ಕಂಪೆನಿಯ ಸ್ವಂತ ಬಂಡವಾಳಕ್ಕೂ ತಕ್ಷಣ ಫಲ ದೊರೆಯಲಾರಂಭಿಸುವುದಿಲ್ಲ. ಆದರೆ ಕೊಜೆಂಟ್ರಿಕ್ಸ್ ಕಂಪೆನಿಗೆ ತಾನು ತೊಡಗಿಸಿದ ಅಲ್ಪ ಬಂಡವಾಳದ ಮೇಲೆ ತಕ್ಷಣವೇ ಫಲ ದೊರೆಯಲಾರಂಭಿಸುತ್ತದೆ.

⊙ ಈ ಯೋಜನೆಯಲ್ಲಿ ಸಾಲದ ಮೊತ್ತ 3689.87 ಕೋಟಿ ರೂ. ಇದರಲ್ಲಿ ವಿದೇಶೀ ಮೂಲದ ಸಾಲ ರೂ. 2459.92 ಕೋಟಿ ಅಥವಾ ಶೇ. 67

⊙ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ 1997 ರಿಂದ 30 ವರ್ಷ ವಿದ್ಯುತ್ ಖರೀದಿಸುತ್ತದೆ. ವಿದ್ಯುತ್ ಖರೀದಿ ಬೆಲೆಯನ್ನು ಉತ್ಪಾದನಾ ಖರ್ಚು ಹಾಗೂ ಕೊಜೆಂಟ್ರಿಕ್ಸ್ ಗೆ ಮಂಗಳೂರು ಕಂಪೆನಿ ಉತ್ಪಾದಿಸಬಲ್ಲ ಕನಿಷ್ಠ ಶೇ. 68.5 ವಿದ್ಯುತ್ ಖರೀದಿಸುವ ಆಧಾರದ ಮೇಲೆ ಅದು ತೊಡಗಿಸಿದ ಬಂಡವಾಳ ಶೇ. 16 ಲಾಭಾಂಶ ಸಿಗಲೇಬೇಕು ಎಂಬ ಆಧಾರದ ಮೇಲೆ ಲೆಕ್ಕ ಹಾಕಲಾಗುವುದು. ಅಂದರೆ ರೂಪಾಯಿಯ ಮತ್ತು ಡಾಲರಿನ ಹಣದುಬ್ಬರದೊಂದಿಗೆ ಇದೂ ಏರುತ್ತದೆ.

⊙ ಮಂಗಳೂರು ಪವರ್ ಕಂಪೆನಿ ವಿದ್ಯುತ್ ಉತ್ಪಾದನೆ ಮಾಡಲಾರಂಭಿಸಿದ ಮೊದಲ ವರ್ಷದಲ್ಲಿ ಕೆ.ಇ.ಬಿ. ಕನಿಷ್ಠ ಶೇ. 68.5 ವಿದ್ಯುತ್ ಖರೀದಿಗೆ 1531.49 ಕೋಟಿ ರೂ. ತೆರಬೇಕಾಗುತ್ತದೆ.(ಅದಕ್ಕಿಂತ ಹೆಚ್ಚು ಖರೀದಿಸಿದರೆ ಇನ್ನೂ ಹೆಚ್ಚು ತೆರಬೇಕು.) 1993-94ರಲ್ಲಿ ಕೆ.ಇ.ಬಿ. ಒಟ್ಟು ವ್ಯವಹಾರವೇ 1592.27 ಕೋಟಿ ರೂ. ಎಂಬುದನ್ನು ಹೋಲಿಸಿ ನೋಡಿ.

⊙ ವಿದ್ಯುತ್ ಕುರಿತ ಸಂಸದೀಯ ಸಭೆಯಲ್ಲಿ ಸಮಿತಿಯ 26ನೇ ವಾರ್ಷಿಕ ವರದಿಯ ಪ್ರಕಾರ ಕೊಜೆಂಟ್ರಿಕ್ಸ್ ಯೋಜನೆಯ ಖರ್ಚು ಪ್ರತಿ ಮೆಗಾವಾಟಿಗೆ 5.08 ಕೋಟಿ ರೂ. ಬಿ.ಹೆಚ್.ಇ.ಎಲ್. ಉಪಕರಣಗಳನ್ನು ಬಳಸಿದರೆ ಇದು ಸುಮಾರು 4. ಕೋಟಿ ರೂ. ಇಳಿಯುವುದು ಸಾಧ್ಯ ಎಂದು ಅದು ಹೇಳಿದೆ.

KRNM/BGS-405 MAG (2) PRB DECR 319-78/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ.ರಾಮಚಂದ್ರರಾವ್. ಸಂಪಾದಕರು: ಪಿ.ರಾಮಚಂದ್ರರಾವ್. ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ ಸಂಪಂಗಿರಾಮನಗರ, ಬೆಂಗಳೂರು-27. ಫೋನ್ ನಂ. 2236462 ಮುದ್ರಣ: ರಾಜಾ ಪ್ರಿಂಟರ್ಸ್, ಸಂಪಂಗಿರಾಮನಗರ, ಬೆಂಗಳೂರು. -27

ನೂತನ ಬಸ್ ನೀತಿಯ ವಿರುದ್ಧ

ಜುಲೈ 5 ರಿಂದ ವಿದ್ಯಾರ್ಥಿಗಳ ಅನಿರ್ದಿಷ್ಟ ಅಸಹಕಾರ ಚಳುವಳಿ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಜಾರಿಗೆ ತಂದಿರುವ ನೂತನ ಬಸ್ ಪಾಸ್ ನೀತಿಯನ್ನು ವಿರೋಧಿಸಿ ಜುಲೈ ೫ ರಿಂದ ರಾಜ್ಯಾದ್ಯಂತ 'ಅನಿರ್ದಿಷ್ಟ ಅಸಹಕಾರ ಚಳುವಳಿ'ಯನ್ನು ನಡೆಸಲು ಭಾರತ ವಿದ್ಯಾರ್ಥಿ ಫೆಡರೇಷನ್, (ಎಸ್.ಎಫ್.ಐ.) ದಲಿತ ವಿದ್ಯಾರ್ಥಿ ಒಕ್ಕೂಟ. (ಡಿ.ಎಸ್.ಎಫ್.) ಮತ್ತು ಅಖಿಲ ಭಾರತ ವಿದ್ಯಾರ್ಥಿ ಫೆಡರೇಷನ್ (ಎ.ಐ.ಎಸ್.ಎಫ್.) ಈ ಮೂರು ಸಂಘಟನೆಗಳು ಜಂಟಿಯಾಗಿ ನಿರ್ಧರಿಸಿವೆ.

ನೂತನ ಬಸ್ ಪಾಸ್ ನೀತಿಯು ಯಾವುದೇ ರೀತಿಯಲ್ಲೂ ಒಪ್ಪುವಂತಹುದಲ್ಲ, ಇದು ರಾಜ್ಯದ ವಿದ್ಯಾರ್ಥಿ ಸಮೂಹವನ್ನು ಸಂಕಷ್ಟಕ್ಕೀಡು ಮಾಡುವುದೇ ಅಲ್ಲದೆ ಗ್ರಾಮೀಣ ವಿದ್ಯಾರ್ಥಿಗಳ ಶಿಕ್ಷಣವನ್ನು ಅಂತ್ಯಗೊಳಿಸುವ ಪಿತೂರಿಯನ್ನು ಹೊಂದಿದೆ. 3 ರಿಂದ 12 ಪಟ್ಟು ಪಾಸ್ ಶುಲ್ಕವನ್ನು ಏರಿಸಲಾಗಿದೆ. ಎಲ್ಲರಿಗೂ ಶಿಕ್ಷಣವನ್ನು ನೀಡಲು ನಿತ್ಯ ನೂತನ ಯೋಜನೆಗಳನ್ನು ಬಿಡುತ್ತಿರುವ ಸರ್ಕಾರಕ್ಕೆ ಬಸ್ ಪಾಸ್ ಶುಲ್ಕ ಏರಿಕೆಯಿಂದ ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯ ಹಾಳಾಗುತ್ತದೆಂಬ ಕಲ್ಪನೆ ಕೂಡಾ ಬರದಿದ್ದದು ಶೋಚನೀಯ. ಈ ವಿದ್ಯಾರ್ಥಿ ವಿರೋಧಿ ನೀತಿಯೆದುರು ರಾಜ್ಯದ ವಿದ್ಯಾರ್ಥಿ ಸಮುದಾಯ ಸಾಕಷ್ಟು ಪ್ರತಿಭಟನೆ ನಡೆಸಿದರೂ ಸಹ ಸಾರಿಗೆ ಸಂಸ್ಥೆ ಚಕಾರವೆತ್ತುತ್ತಿಲ್ಲ.

ಆದ್ದರಿಂದ ಸಾರಿಗೆ ಸಂಸ್ಥೆಯ ಮತ್ತು ಸರ್ಕಾರದ ಈ ಕ್ರೂರ ನೀತಿಯನ್ನು ಉಗ್ರವಾಗಿ ಪ್ರತಿಭಟಿಸಲು ಉದ್ದೇಶಿಸಿ ಎಸ್.ಎಫ್.ಐ., ಡಿ.ಎಸ್.ಎಫ್., ಎ.ಐ.ಎಸ್.ಎಫ್. ಸಂಘಟನೆಗಳು ಜಂಟಿಯಾಗಿ ತೀರ್ಮಾನಿಸಿ ಜುಲೈ 5 ರಿಂದ ರಾಜ್ಯಾದ್ಯಂತ ಅಸಹಕಾರ ಚಳುವಳಿಯನ್ನು ನಡೆಸಬೇಕೆಂದು ವಿದ್ಯಾರ್ಥಿಗಳಿಗೆ ಕರೆ ನೀಡಿದೆ. ಅಂದಿನಿಂದ ಅನಿರ್ದಿಷ್ಟವಾಗಿ ತರಗತಿಗಳ ಬಹಿಷ್ಕಾರ, ಶಾಸಕ-ಸಚಿವರಿಗೆ ಘೆರಾವ್, ರಸ್ತೆ ತಡೆ, ಸಾರಿಗೆ ಡಿಪೋಗಳ ಪಿಕೆಟಿಂಗ್, ಭೂತದಹನ, ಟಿಕೇಟ್ ಇಲ್ಲದೆ ಬಸ್ ಗಳಲ್ಲಿ ಸಂಚರಿಸುವುದು ಮುಂತಾದ ರೀತಿಯಲ್ಲಿ ಪ್ರತಿಭಟಿಸಬೇಕೆಂದು ರಾಜ್ಯದ ವಿದ್ಯಾರ್ಥಿ ಸಮುದಾಯಕ್ಕೆ ಸಂಘಟನೆಗಳ ಕರೆ ನೀಡಿವೆ.

"ಐಕ್ಯತೆಯನ್ನು ಕ್ರೋಢೀಕರಿಸಿ ಹೋರಾಟ ಮುಂದುವರೆಸಿ"

ಟೆಲಿಕಾಂ ಸಂಘಗಳ ಕರೆ

ಅಖಿಲ ಭಾರತ ಟೆಲಿಕಾಂ ಮೂರನೇ ದರ್ಜೆ ನೌಕರರ ಸಂಘ, ಅಖಿಲ ಭಾರತ ಟೆಲಿಗ್ರಾಫ್ ಟ್ರಾಫಿಕ್ ಮೂರನೇ ದರ್ಜೆ ನೌಕರರ ಸಂಘ ಹಾಗೂ ಅಖಿಲ ಭಾರತ ಟೆಲಿಕಾಂ ಆಡಳಿತ ಕಛೇರಿಗಳ ನೌಕರರ(ಮೂರನೇ ಹಾಗೂ ನಾಲ್ಕನೇ ದರ್ಜೆ) ಸಂಘ ಜೂನ್ 24ರಂದು ಒಂದು ಜಂಟಿ ಹೇಳಿಕೆ ನೀಡಿ ಜೂನ್ 23 ರಂದು ಟೆಲಿಕಾಂ ನೌಕರರ ಒಕ್ಕೂಟಗಳ ನಾಲ್ಕು ಮುಖಂಡರು ಇದ್ದಕ್ಕಿದ್ದಂತೆ ಟೆಲಿಕಾಂ ಮುಷ್ಕರವನ್ನು ಜೂನ್ 23ರಂದು ಹಿಂತೆಗೆದುಕೊಂಡುದರ ಬಗ್ಗೆ ತಮ್ಮ ಅಸಮ್ಮತಿ ವ್ಯಕ್ತಪಡಿಸಿದ್ದಾರೆ. ಸಂಬಂಧಪಟ್ಟ ಸಂಘಗಳ ಎಲ್ಲಾ ಪ್ರಧಾನಕಾರ್ಯದರ್ಶಿ ಅಭಿಪ್ರಾಯವನ್ನು ನಿರ್ಲಕ್ಷಿಸಿ ಕೈಗೊಂಡ ಈ ನಿರ್ಣಯ ಹಲವೆಡೆ ನೌಕರರಲ್ಲಿ ವ್ಯಾಪಕ ಅಸಂತೃಪ್ತಿ ಹರಡಿಸಿದೆ ಎಂದು ಈ ಹೇಳಿಕೆ ತಿಳಿಸಿದೆ.

ಜೂನ್ 19ರಿಂದ ಆರಂಭವಾದ ಈ ಮುಷ್ಕರದಲ್ಲಿ ಅಪರೂಪದ ಐಕ್ಯತೆ ಮೂಡಿ ಬಂದಿದ್ದು ಇಡೀ ದೂರಸಂಪರ್ಕ ಜಾಲದ ಮೇಲೆ ತೀವ್ರ ಪ್ರಭಾವ ಬೀರಿತ್ತು. ಸುಮಾರಾಗಿ ಎಲ್ಲಾ ರಾಜ್ಯಗಳಲ್ಲಿ ಅದು ಸಂಪೂರ್ಣ ಯಶಸ್ವಿಯಾಗಿ ರಾಷ್ಟ್ರೀಯ ಮಹತ್ವ ಪಡೆದಿದ್ದ ವೇಳೆಗೆ ಇದ್ದಕ್ಕಿದ್ದಂತೆ ಅದನ್ನು ಹಿಂತೆಗೆದುಕೊಂಡದ್ದು ಸರಿಯಲ್ಲ ಎಂದು ಈ ಹೇಳಿಕೆ ಅಭಿಪ್ರಾಯ ಪಟ್ಟಿದೆ.

ಈ ಮುಷ್ಕರದಲ್ಲಿ ಸಾಧಿಸಿದ ಐಕ್ಯತೆಯನ್ನು ಕ್ರೋಢೀಕರಿಸಿ ಜನತೆಯ ಬೆಂಬಲದಿಂದ ಅದನ್ನು ಶ್ರೀಮಂತಗೊಳಿಸಿ ಮುಂದಿನ ದೀರ್ಘ ಹೋರಾಟಕ್ಕೆ ಸಿದ್ಧರಾಗಿ ಎಂದು ಟೆಲಿಕಾಂ ನೌಕರರಿಗೆ ಈ ಹೇಳಿಕೆ ಕರೆ ನೀಡಿದೆ.

(ಐ.ಎನ್.ಎಸ್.)

ಮುಖಂಡರು ವಿಶ್ವಾಸಘಾತ ಮಾಡಿದರೂ........

ಪುಟ 1 ರಿಂದ

ಗೆ ಸೇರಿದ ಒಕ್ಕೂಟಗಳ ಮುಖಂಡರು ತಮಗೆ ಸಂಬದ್ಧವಾದ ಸಂಘಗಳ ಪ್ರಧಾನ ಕಾರ್ಯದರ್ಶಿಗಳೊಡನೆ ಸಮಾಲೋಚಿಸದೆಯೇ ಈ ಒಪ್ಪಂದಕ್ಕೆ ಬಂದರು. ಮುಷ್ಕರದ ಬೇಡಿಕೆಗಳಿಗೆ ಸಂಬಂಧಪಟ್ಟ ಹಲವು ಅಂಶಗಳೂ ಈ ಒಪ್ಪಂದದಲ್ಲಿ ಸೇರಿವೆ. ಆರಂಭದಿಂದಲೇ ಮೂರು ಒಕ್ಕೂಟಗಳ ಉನ್ನತ ಮುಖಂಡರು "ಸರಕಾರದೊಡನೆ ಒಪ್ಪಂದಕ್ಕೆ ಬರಲು ಕಸರತ್ತು ನಡೆಸಿದ್ದರೂ ಆ ಒಕ್ಕೂಟಗಳಿಗೆ ಸಂಬಂದ್ಧವಾದ ನೌಕರ ಸಂಘಟನೆಗಳ ಪ್ರಧಾನ ಕಾರ್ಯದರ್ಶಿಗಳ ಪ್ರತಿರೋಧದಿಂದಾಗಿ ಅದು ಸಾಧ್ಯವಾಗಿರಲಿಲ್ಲ.

ವಿಶ್ವಾಸಘಾತಕ್ಕೆ ಪ್ರತಿಭಟನೆ

ಈ ವಿಶ್ವಾಸಘಾತಕ್ಕೆ ದೇಶಾದ್ಯಂತ ಟೆಲಿಕಾಂ ನೌಕರರ ಪ್ರತಿಕ್ರಿಯೆ ಗಮನಿಸಿದಾಗ ನೌಕರರು ತಮ್ಮ ಮುಖಂಡರು ಮಾಡಿಕೊಂಡ ಈ ಒಪ್ಪಂದವನ್ನು ಸ್ವೀಕರಿಸಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಕೆಲವೆಡೆ ಮತಪ್ರದರ್ಶನಗಳು, ಪ್ರತಿಭಟನೆಗಳು ನಡೆದವು. ಕೆಲವೆಡೆ ಮುಖಂಡರನ್ನು ಹೀಯಾಳಿಸಲಾಯಿತು. ಅವರು ಏಟು ಕೂಡಾ ತಿನ್ನಬೇಕಾಯಿತು. ಹೀಗೆ ವಿಶ್ವಾಸಘಾತದ ವಂಚನೆಯ ಭಾವನೆ ನೌಕರರಲ್ಲಿ ಬಂದಿರುವುದು ಸಹಜ ಎಂದಿರುವ ಬಾಲಾನಂದನ್ ರವರು ಐದು ದಿನಗಳ ಅಮೋಘ ಹೋರಾಟದ ನಂತರ ಅವರಿಗೆ ದೊರೆತದ್ದು ತಮ್ಮ ಹಿತಾಸಕ್ತಿಗಳನ್ನು ಬಲಿಕೊಡುವ ಕಲಮುಗಳಿರುವ ಒಂದು ಒಪ್ಪಂದ ಎಂದು ಖೇದವ್ಯಕ್ತಪಡಿಸಿದ್ದಾರೆ. ಇಂತಹ ಒಂದು ವಿಶ್ವಾಸಘಾತ ದೇಶದ ಕಾರ್ಮಿಕ ಆಂದೋಲನದ ಇತಿಹಾಸದಲ್ಲಿ ಇತ್ತೀಚಿನ ವರ್ಷಗಳಲ್ಲಂತೂ ಕಂಡು ಬಂದಿಲ್ಲ ಎಂದು ಅವರು ಹೇಳಿದ್ದಾರೆ. ಟೆಲಿಕಾಂ ವಲಯದ ಖಾಸಗೀಕರಣವನ್ನು ರದ್ದು ಪಡಿಸಬೇಕೆನಿಸುತ್ತಿದ್ದ ಮುಖಂಡರೇ ಕೊನೆಗೆ ತಾನೇ ಖಾಸಗೀಕರಣಕ್ಕೆ ಬದ್ಧತೆ ತೋರ್ಪಡಿಸಿದರು. ಅಷ್ಟೇ ಅಲ್ಲ, ಇನ್ನೂ ನಾಚಿಕೆಗೇಡಿನ ವಿಷಯವೆಂದರೆ ನೌಕರರನ್ನು ಬಡಿಯಲು ಆಡಳಿತ ವರ್ಗದ ಕೈಗೆ ತಾನಾಗಿಯೇ ಬಡಿಗೆ ನೀಡಿದ್ದಾರೆ ಎಂದೂ ಸಿಐಟಿಯು ಅಧ್ಯಕ್ಷರು ಟೀಕಿಸಿದ್ದಾರೆ.

ಹೋರಾಟ ಮುಂದುವರಿಯಲಿ

ಇದರಿಂದ ನೌಕರರು ಕಲಿಯಬೇಕಾದ ಪಾಠವೆಂದರೆ ಒಂದು ಐಕ್ಯ ಕಾರ್ಯಾಚರಣೆಗಿಳಿದಾಗ ಕಾರ್ಮಿಕರು ಅಥವಾ ನೌಕರರು ಪ್ರತಿ ಹಂತದಲ್ಲಿನ ಬೆಳವಣಿಗೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿರಬೇಕು, ಮುಖಂಡರಿಗೆ ಮುಕ್ತ ಅವಕಾಶ, ಸಂಪೂರ್ಣ ಅಧಿಕಾರ ನೀಡಬಾರದು, ಮುಖಂಡರು ಯಾವುದೇ ಪ್ರಮುಖ ನಿರ್ಣಯಕ್ಕೆ ಬರುವ ಮೊದಲು ಕಾರ್ಮಿಕ ಸಮೂಹದ, ಪ್ರಜಾಸತ್ತಾತ್ಮಕವಾಗಿ ಚುನಾಯಿತವಾದ ಸಮಿತಿಗಳ ಅಭಿಪ್ರಾಯ ಪಡೆಯುವಂತೆ ಮಾಡಬೇಕು ಎಂದು ಬಾಲಾನಂದನ್ ಹೇಳುತ್ತಾರೆ.

ಟೆಲಿಕಾಂ ನೌಕರರಿಗೆ ತಮ್ಮ ಮುಖಂಡರಿಂದ ವಂಚನೆಯಾಗಿದ್ದರೂ ಹತಾಶರಾಗಬೇಕಾಗಿಲ್ಲ, ಏಕೆಂದರೆ ಈ ಐದು ದಿನಗಳ ಮುಷ್ಕರ ದೇಶದ ಕಾರ್ಮಿಕ ಆಂದೋಲನ ಇತಿಹಾಸಕ್ಕೆ ಇನ್ನೊಂದು ಅಮೋಘ ಅಧ್ಯಾಯ ಸೇರಿಸಿದೆ. ಅವರು ದೇಶದ ಹಿತಾಸಕ್ತಿಗಳ ರಕ್ಷಣೆಗಾಗಿ ಹೋರಾಟಕ್ಕಿಳಿದರು ಎಂದು ದಾಖಲಾಗುತ್ತದೆ. ಈಗ ತಮ್ಮಲ್ಲಿರುವ ಭಿನ್ನತೆಗಳನ್ನು ಬದಿಗಿಟ್ಟು ಹೊಸ ಟೆಲಿಕಾಂ ನೀತಿಯ ವಿರುದ್ಧ ಒಂದು ಬಲವಾದ ಆಕ್ರಮಣಕ್ಕೆ ಸಿದ್ಧರಾಗಿರಬೇಕು. ದುಡಿಯುವ ಜನಗಳ ಇತರ ವಿಭಾಗಗಳೊಡಗೂಡಿ ಉದಾರೀಕರಣ ಹಾಗೂ ಖಾಸಗೀಕರಣದ ವಿರುದ್ಧ ಹೋರಾಟ ಮುಂದುವರಿಸಬೇಕು. ಅದರ ಜೊತೆಗೇ ಈಗಿನ ತಮ್ಮ ಹತಾಶೆಗೆ ಕಾರಣವಾದ ಮುಖಂಡರೆನಿಸಿಕೊಂಡವರನ್ನು ಹೊರಗೆಸೆಯಬೇಕು ಎಂದು ಬಾಲಾನಂದನ್ ಕರೆ ನೀಡಿದ್ದಾರೆ.

ಪತ್ರಿಕೆಗಳ ವರ್ಗ ನಿಲುವು

ದೇಶದ ದೊಡ್ಡ ಪತ್ರಿಕೆಗಳು ಈ ಮುಷ್ಕರದ ಬಗ್ಗೆ ನಿರೀಕ್ಷಿತ ರೀತಿಯಲ್ಲೇ ಪ್ರತಿಕ್ರಿಯಿಸಿವೆ. ಕಾರ್ಮಿಕ ಸಂಘಗಳಿಗೆ ದೇಶಕ್ಕೆ ಸಂಬಂಧಪಟ್ಟ ನೀತಿಗಳ ಬಗ್ಗೆ ಯೋಚಿಸಬೇಕಾದ ಅಗತ್ಯವಿಲ್ಲ, ಆ ಹಕ್ಕೂ ಇಲ್ಲ ಎಂದು ಅವು ಭಾವಿಸಿದಂತಿದೆ. ಸರಕಾರ ತನ್ನ ಮನಬಂದಂತೆ ಮಾಡಲು ಬಿಡಬೇಕು, ಅವನ್ನು ವಿರೋಧಿಸಬಾರದು ಎನ್ನುವ ಈ ಪತ್ರಿಕೆಗಳೂ ಹಾಗೆಯೇ ಮಾಡಿದರೆ ಏನಾಗುತ್ತದೆ ಎಂದು ಅವರು ಯೋಚಿಸಿದ್ದಾರೆಯೇ ಎಂದು ಬಾಲಾನಂದನ್ ಪ್ರಶ್ನಿಸಿದ್ದಾರೆ.

ಮಳೆಯ ಅಭಾವವನ್ನೆದುರಿಸಲು ಸಿದ್ಧರಾಗಿದ್ದೀರಾ?

ಪುಟ 1 ರಿಂದ

ಕೂತಿದ್ದಾರೆಯೇ ಎಂಬ ಸಂಶಯ ಬರುತ್ತಿದೆ. ಜನತಾ ಸರಕಾರ ಸುಳ್ಳು ಹೇಳುವ ಕಾಂಗ್ರೆ ಸರಕಾರದಂತಲ್ಲ, ಅದು ವಾಸ್ತವ ಪರಿಸ್ಥಿತಿಯನ್ನು ಅರ್ಥೈಸಿಕೊಂಡು ಎದುರಿಸಬಹುದಾದ ಗಂಭೀರ ಸಮಸ್ಯೆಗಳಿಗೆ ಸಮರ್ಪಕವಾದ ಪರಿಹಾರ ಒದಗಿಸುವ ಸರಕಾರವೆಂದು ಜನ ನಂಬಿದ್ದಾರೆ. ಆ ಕಾರಣದಿಂದ ದೇವೇಗೌಡರು ಮಳೆಯ ಅಭಾವದಿಂದ ಉಂಟಾಗಬಹುದಾದ ಗಂಭೀರ ಸಮಸ್ಯೆಗಳನ್ನೆದುರಿಸಲು ತುರ್ತುಕ್ರಮ ಕೈಗೊಳ್ಳಬೇಕೆಂದು ತಾವು ಒತ್ತಾಯಿಸುತ್ತೇವೆ.

ಅನಾವೃಷ್ಟಿ ವಿದ್ಯುತ್ ಉತ್ಪಾದನೆಯ ಮೇಲೂ ಪರಿಣಾಮ ಬೀರುತ್ತದೆ. ಕೈಗಾರಿಕೆ ನೀರು ಪೂರೈಕೆಯ ಮೇಲೆ ಅದರ ಪರಿಣಾಮವಾಗುತ್ತದೆ.

ಕುಡಿಯುವ ನೀರಿನ, ದನಗಳಿಗೆ ಮೇವಿನ, ಉದ್ಯೋಗ ಇಲ್ಲದ ಜನರಿಗೆ ಕೆಲಸದ, ಅವರಿಗೆ ಅಗ್ಗದರದಲ್ಲಿ ಆಹಾರ ಪೂರೈಕೆಯ ವ್ಯವಸ್ಥೆಯನ್ನು ಕೂಡಲೇ ಮಾಡಬೇಕು. ಅದರ ಜೊತೆಯಲ್ಲಿಯೇ ನೀರಾವರಿ ಯೋಜನೆಗಳಿಗೆ ಪ್ರಾಮುಖ್ಯತೆ ನೀಡಬೇಕು. ಕಾಲುವೆ ತೋಡುವ, ಮನೆಕಟ್ಟುವ ಕೆಲಸಗಳನ್ನು ಈ ಜನರಿಂದ ಮಾಡಿಸಬೇಕು.

ಭಾರೀ ಕೈಗಾರಿಕೋದ್ಯಮಿಗಳು ಬ್ಯಾಂಕುಗಳಿಂದ ಪಡೆದ ಸಾಲದಲ್ಲಿ ಮೂವತ್ತು ಮೂರು ಸಾವಿರ ಕೋಟಿ ರೂಪಾಯಿಯನ್ನು ಮನ್ನಾಮಾಡಲಾಗಿದೆಯಂತೆ. ಆ ರೀತಿ ಮನ್ನ ಮಾಡಿದ ಹಣವನ್ನು ಸಂಗ್ರಹಿಸಿ ಬರಗಾಲ ಪರಿಹಾರ ಕಾರ್ಯಗಳಿಗೆ, ಕೃಷ್ಣಾ-ಕಾವೇರಿ ಯೋಜನೆಗಳಿಗೆ ಕೊಡಬೇಕೆಂದು ಕೇಂದ್ರ ಸರಕಾರದ ಮೇಲೆ ಒತ್ತಡ ತರಬೇಕೆಂದೂ ನಾವು ಒತ್ತಾಯ ಮಾಡುತ್ತಿದ್ದೇವೆ. ಕಾಂಗ್ರೆ ಸರಕಾರಕ್ಕೆ ಪರ್ಯಾಯವಾದ ನೀತಿಯನ್ನು ದೇವೇಗೌಡ ಸರಕಾರ ಅನುಸರಿಸಿ, ಸಕಾಲದಲ್ಲಿ ಸಮರ್ಪಕವಾದ ಪರಿಹಾರವನ್ನು ಅಭಾವ ಪೀಡಿತ ಜನರಿಗೆ ಒದಗಿಸಬೇಕೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ದೇವೇಗೌಡರನ್ನು ಒತ್ತಾಯಿಸುತ್ತದೆ. ಆ ರೀತಿ ಮಾಡಿದರೆ ಅಂಥ ಪರಿಹಾರ ಕಾಮಗಾರಿಗಳಲ್ಲಿ ನಮ್ಮ ಪಕ್ಷ ಸಹಕರಿಸುತ್ತದೆಂದು ಹೇಳಲಿಚ್ಛಿಸುತ್ತೇವೆ.

ಉತ್ತರ ಪ್ರದೇಶದಲ್ಲಿ ಏನು ನಡೆಯುತ್ತಿದೆ?

ದೇಶದ ಅತಿ ಹೆಚ್ಚು ಜನಸಂಖ್ಯೆಯ ರಾಜ್ಯದ ಇತ್ತೀಚಿನ ರಾಜಕೀಯ ಬೆಳವಣಿಗೆಗಳ ಬಗ್ಗೆ ಸಿಪಿಐ(ಎಂ)ನ ನಿಲುವನ್ನು ವಿವರಿಸಿರುವ 'ಪೀಪಲ್ಸ್ ಡೆಮಾಕ್ರಸಿ' ಪತ್ರಿಕೆಯ ಸಂಪಾದಕೀಯ

ಬಿಜೆಪಿ ಸೃಷ್ಟಿಸಿ, ಊರುಗೋಲು ಕೊಟ್ಟು ನಿಲ್ಲಿಸಿರುವ ಮಾಯಾವತಿ ಸರಕಾರ ಉತ್ತರ ಪ್ರದೇಶ ವಿಧಾನ ಸಭೆಯಲ್ಲಿ ಜೂನ್ 20 ರಂದು ವಿಶ್ವಾಸ ಮತ ಪಡೆದಿದೆ. ಇದರ ಹಿಂದೆ ಇದ್ದದ್ದು ಶಾಸಕರನ್ನು ಒಂದೆಡೆ ಕುರಿಮಂದೆಗಳಂತೆ ಹಾಕಿದ್ದು ಕಾವಲು ಕಾಯ್ದ ಎರಡು ವಾರಗಳ ಹೊಲಸು ದೃಶ್ಯ ಹಾಗೂ ರಾಜ್ಯಪಾಲರು ಮತ್ತು ವಿಧಾನಸಭಾಧ್ಯಕ್ಷರ ಕಸರತ್ತುಗಳು, ಪ್ರತಿ-ಕಸರತ್ತುಗಳು. ಈ ಪ್ರಕ್ರಿಯೆಯಲ್ಲಿ ಸಂಸದೀಯ ಪ್ರಜಾಪ್ರಭುತ್ವ ನೀತಿ-ನಿಯಮಗಳನ್ನೆಲ್ಲಾ ಗಾಳಿಗೆ ತೂರಲಾಯಿತು. ಪ್ರಜಾಪ್ರಭುತ್ವ ವಿಧಿ-ವಿಧಾನಗಳನ್ನು ತುಳಿದು ಹಾಕುವ ಕೆಲಸವನ್ನು ರಾಜ್ಯಪಾಲರೇ ಆರಂಭಿಸಿದ್ದರು. ಮುಲಾಯಂ ಸಿಂಗ್ ರವರ ಹೇಳಿಕೆಗಳನ್ನು ಬಿ.ಎಸ್.ಪಿ.ಯ ಪ್ರತಿ ಹೇಳಿಕೆಗಳನ್ನು ವಿಧಾನಸಭೆಯಲ್ಲಿ ಪರೀಕ್ಷಿಸಲು ಅವರು ಅವಕಾಶ ನೀಡಲಿಲ್ಲ. ಮುಲಾಯಂ ಸಿಂಗ್ ರನ್ನು ವಜಾ ಮಾಡಿ ಮಾಯಾವತಿಯವರನ್ನು ಮುಖ್ಯಮಂತ್ರಿಯಾಗಿ ಪ್ರತಿಜ್ಞೆ ಸ್ವೀಕರಿಸುವಂತೆ ಮಾಡುವಾಗ ಅವರು ವಿಧಾನಸಭೆಯನ್ನು ಬದಿಗೊತ್ತಿದರು. ಕೇಂದ್ರದ ಆಣತಿಯ ಪ್ರಕಾರ ಹೀಗೆ ಮಾಡಿದ ಮೇಲೆ ವಿಧಾನಸಭೆ ಇದನ್ನು ಅನುಮೋದಿಸುವಂತೆ ಮಾಡಲು ಮುಂದಾದರು.

ಜೂನ್ 19-20 ರಂದು ಕರೆದ ವಿಧಾನಸಭೆಯ ಅಧಿವೇಶನದ ಮೊದಲು ರಾಜ್ಯಪಾಲರು ಮತ್ತು ವಿಧಾನಸಭಾಧ್ಯಕ್ಷರ ನಡುವೆ ಜಗ್ಗಾಟ ನಡೆಯಿತು. ಇದರಲ್ಲಿ ಇಬ್ಬರೂ ಹೇಳಿಕೆಗಳನ್ನು ವಿಧಿ-ವಿಧಾನಗಳನ್ನು ಉಲ್ಲಂಘಿಸಿದರು. ಅಧಿವೇಶನದ ಮೊದಲು ವಿಧಾನಸಭಾಧ್ಯಕ್ಷರು ಕಲಾಪ ಸಲಹಾ ಸಮಿತಿಯನ್ನು ವಿಸರ್ಜಿಸಿ ಸಮಾಜವಾದಿ ಪಕ್ಷದ ಪರವಾಗಿರುವಂತೆ ಅದನ್ನು ಪುನರ್ರಚಿಸಲಾಯಿತು. ತನ್ನ ವಿರುದ್ಧ ಇರುವ ಅವಿಶ್ವಾಸ ಸೂಚನೆಯನ್ನು ಗಮನಕ್ಕೆ ತೆಗೆದುಕೊಳ್ಳಲು ಕೂಡಾ ಅವರು ನಿರಾಕರಿಸಿದರು. ರಾಜ್ಯಪಾಲರು ಪ್ರತಿ ಬಾಣ ಬಿಟ್ಟರು. ಸಂವಿಧಾನದ 175(2)ಕಲಮನ್ನು ಬಳಸಿ ವಿಧಾನಸಭೆಗೆ ಸಂದೇಶ ಕಳಿಸಿದರು. ಈ ಕಲಮು 'ವಿಧಾನಸಭೆ ಯಾವುದೇ ಒಂದು ಮಸೂದೆಯನ್ನು, ಬೇರೆ ಯಾವುದೇ ವ್ಯವಹಾರವನ್ನು ಕೈಗೆತ್ತಿಕೊಳ್ಳಬೇಕೆಂದು ರಾಜ್ಯಪಾಲರು ಸಂದೇಶ ಕಳಿಸಲು ಅವಕಾಶ ನೀಡುತ್ತದೆ. ಆದರೆ ಅದು ಹೇಗೆ ವ್ಯವಹಾರ ನಡೆಸಬೇಕು ಎಂಬ ಬಗ್ಗೆ ಮಾನ್ಯ ಮಾಡಬೇಕಾದ ನಿರ್ದೇಶನ ನೀಡಲು ಅವಕಾಶ ನೀಡುವುದಿಲ್ಲ. ರಾಜ್ಯಪಾಲರಾದ ಮೋತಿಲಾಲ್ ವೋರಾ ಇದನ್ನೇ ಮಾಡಿದರು. ಇಲ್ಲಿ ರಾಜ್ಯಪಾಲರು ತಮ್ಮ ಅಧಿಕಾರ ವ್ಯಾಪ್ತಿ ಮೀರಿ ವಿಧಾನ ಸಭೆ ಏನು ಮಾಡಬೇಕು ಎಂದು ನಿರ್ದೇಶಿಸಿದರು. ನಿಜ ಇದನ್ನು ಅವರು ಮಾಡಿದ್ದು ಪ್ರಧಾನಮಂತ್ರಿಗಳ, ಕೇಂದ್ರ ಸರಕಾರ ಆಣತಿ ಮೇರೆಗೆ. ನರಸಿಂಹರಾಯರು ಮಾಯಾವತಿ ಮುಖ್ಯಮಂತ್ರಿಯಾದದ್ದು "ಪ್ರಜಾಪ್ರಭುತ್ವ ಪವಾಡ" ಎಂದು ಮೆಚ್ಚಿಕೊಂಡು ಬಿ.ಎಸ್.ಪಿ. ಮುಖಂಡ ಕಾನ್ಶಿರಾಮ್ ರವರ ಕೇಳಿಕೆಯನ್ನು ಒಪ್ಪಲು ನಿರ್ಧರಿಸಿದ್ದರು. ಉತ್ತರ ಪ್ರದೇಶದಲ್ಲಿ ಬಿ.ಜೆ.ಪಿ.ಗೆ ಈ ರೀತಿ ನೆರವಾಗುವುದರಲ್ಲಿ ಅವರಿಗೇನೂ ಸಮಸ್ಯೆ ಕಾಣುವುದಿಲ್ಲ. ಕಾಂಗ್ರೆಸ್ ಅಧ್ಯಕ್ಷರು ಉತ್ತರ ಪ್ರದೇಶದಲ್ಲಿ ಬಿಜೆಪಿಯ ರಾಜಕೀಯ ಆಟದ ಬಗ್ಗೆ ತುಟಿಪಿಟಿಕ್ಕೆನ್ನಲಿಲ್ಲ ಎಂಬುದು ಅವರ ರಾಜಕೀಯ ಮಾದರಿಗೆ ಅನುಗುಣವಾಗಿಯೇ ಇದೆ.

ಮುಲಾಯಂ ಸಿಂಗ್ ಯಾದವ್ ರವರ ಪಕ್ಷಪಾತಿಯಾದ ವಿಧಾನಸಭಾಧ್ಯಕ್ಷ ಧನಿರಾಂ ವರ್ಮಾ ತಮ್ಮ ತಂತ್ರಗಳನ್ನು ಪ್ರಯೋಗಿಸಿದರು. ಕಲಾಪ ಸಲಹಾ ಸಮಿತಿಯನ್ನು ಪುನರ್ರಚಿಸಿದ ನಂತರ ತನ್ನ ವಿರುದ್ಧ ಅವಿಶ್ವಾಸ ನಿರ್ಣಯವನ್ನು ಕೈಗೆತ್ತಿಕೊಳ್ಳದಿರಲು ನಿರ್ಧರಿಸಿದರು. ಜೂನ್ 19 ರಂದು ಅಧಿವೇಶನದ ಆರಂಭದಲ್ಲಿ ರಾಜ್ಯಪಾಲರ ಕ್ರಮ ಸಂವಿಧಾನ ಬಾಹಿರ ಎಂದು ಘೋಷಿಸಿ, ಸದನವನ್ನು ಅನಿರ್ದಿಷ್ಟ ಕಾಲ ಮುಂದೂಡಿ ಸದನದಿಂದ ನಿರ್ಗಮಿಸಿದರು. ನಂತರ ಹೊಸ "ವಿಧಾನಸಭಾಧ್ಯಕ್ಷ"ರನ್ನು ಚುನಾಯಿಸುವ ಮರು ದಿನ ವಿಧಾನಸಭಾಧ್ಯಕ್ಷರ ವಿರುದ್ಧ ಅವಿಶ್ವಾಸ ನಿರ್ಣಯವನ್ನು ಅವಿರೋಧವಾಗಿ ಅಂಗೀಕರಿಸುವ, ರಾಜ್ಯಪಾಲರು ಹೊಸ ಸ್ಪೀಕರ್ ತಾತ್ಕಾಲಿಕ ಸ್ಪೀಕರ್ ಆಗಿ ಮಾನ್ಯತೆ ನೀಡುವ ನಾಟಕ ನಡೆಯಿತು. ಇವೆಲ್ಲಾ ಸದನದ ಕಲಾಪಗಳನ್ನು ಅಪಹಾಸ್ಯಕ್ಕೀಡು ಮಾಡಿದವು. ಬಿಜೆಪಿ ಆಡಳಿತದಲ್ಲಿ ತನ್ನ ಪ್ರಭಾವವನ್ನು ಬಳಸಿ ಹಾಗೂ ರಾಜ್ಯಪಾಲರಿಂದ ಸ್ವಲ್ಪ ನೆರವನ್ನು ಪಡೆದು ಮೊದಲ ದಿನದ ಅಧಿಕೃತ ಕಲಾಪಗಳಲ್ಲಿ ಸದನವನ್ನು ಅನಿರ್ದಿಷ್ಟ ಕಾಲ ಮುಂದೂಡುವ ಸ್ಪೀಕರ್ ರವರ ಆಜ್ಞೆ ದಾಖಲಾಗದಂತೆ ನೋಡಿಕೊಂಡಿತು. ಬಿ.ಎಸ್.ಪಿ. ಮತ್ತು ಬಿಜೆಪಿ ಬಿಟ್ಟು ಈ ತಮಾಷೆಯಲ್ಲಿ ಪಾಲುಗೊಂಡ ಇತರರು ಮುಲಾಯಂ ಸಿಂಗ್ ಯಾದವ್‌ರ ಬಗ್ಗೆ ತಮ್ಮ ಹಗೆತನದಿಂದಾಗಿ ತಮ್ಮ ಪ್ರಮಾಣ ಪ್ರಜ್ಞೆಯನ್ನೆಲ್ಲಾ ಕಳಕೊಂಡಂತಿತ್ತು.

ಸಿಪಿಐ(ಎಂ) ಈ ಕಸರತ್ತುಗಳು ಹಾಗೂ ಪ್ರತಿ-ಕಸರತ್ತುಗಳಿಂದ ದೂರವುಳಿಯಲು ನಿರ್ಧರಿಸಿತು. ಪಕ್ಷ ಕೈಗೊಂಡ ರಾಜಕೀಯ ನಿಲುವು ಹೊಸ ಸನ್ನಿವೇಶದ ಕೇಂದ್ರ ಅಂಶವನ್ನು ಮರೆಯಲಿಲ್ಲ. ಬಿಜೆಪಿ ಎಸ್.ಪಿ. -ಬಿ.ಎಸ್.ಪಿ. ಮೈತ್ರಿಯನ್ನು ಮುರಿದು ತನ್ನ ಹತೋಟಿಯಲ್ಲಿರುವ, ತನ್ನ ನಿರ್ದೇಶನದಂತೆ ನಡೆಯುವ ಒಂದು ಸರಕಾರವನ್ನು ಅಧಿಕಾರದಲ್ಲಿಡುವಲ್ಲಿ ಕಸರತ್ತಿನಲ್ಲಿ ಯಶಸ್ವಿಯಾಗಿದೆ. ಉತ್ತರ ಪ್ರದೇಶದಲ್ಲಿ ಪ್ರಜಾಪ್ರಭುತ್ವ ಮತ್ತು ಜಾತ್ಯಾತೀತ ಮೌಲ್ಯಗಳಿಗೆ ಪ್ರಧಾನ ಬೆದರಿಕೆಯೆಂದರೆ ಬಿಜೆಪಿ. ಆದ್ದರಿಂದ ಸಿಪಿಐ(ಎಂ) ಸ್ಪಷ್ಟವಾಗಿ ಬಿಜೆಪಿ ಊರುಗೋಲಾಗಿರುವ ಮಾಯಾವತಿ ಸರಕಾರವನ್ನು ವಿರೋಧಿಸುತ್ತದೆ. ಅದೇ ವೇಳೆಗೆ ಸಿಪಿಐ(ಎಂ) ಮುಲಾಯಂ ಸಿಂಗ್ ಸರಕಾರ 18 ತಿಂಗಳ ಕೆಲಸ ಕಾರ್ಯಗಳನ್ನು ಬೆಂಬಲಿಸುವುದಿಲ್ಲ ಕೂಡಾ. ಏಕೆಂದರೆ ಕೋಮುವಾದ-ವಿರೋಧ ಎನ್ನೊಂದನ್ನು ಬಿಟ್ಟರೆ ಈ ಅವಧಿ ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಣದ ತರಾತುರಿ, ಉತ್ತರಾಖಂಡ ಆಂದೋಲನದ ಬಗ್ಗೆ ಪ್ರಜಾಪ್ರಭುತ್ವ-ವಿರೋಧಿ ನಿಲುವು ಹಾಗೂ ಪಂಚಾಯತು ಚುನಾವಣೆಗಳಲ್ಲಿ ಬಹಿರಂಗ ದುರಾಚರಣೆಗಳಿಂದ ಕೂಡಿದ ಅವಧಿ. ಆದರೆ ಸರಕಾರದ ಈ ಕಾರ್ಯವೈಖರಿ ಗೆ ವಿರೋಧ ಬಿಜೆಪಿಯ ಮರ್ಜಿಯಲ್ಲಿರುವ ಒಂದು ಸರಕಾರವಿದೆಯೆಂದರೆ ಅದರರ್ಥ ಕೋಮುವಾದಿ ಶಕ್ತಿಗಳಿಗೆ ಆಡಳಿತದ ಮೇಲೆ ತಮ್ಮ ಹಿಡಿತವನ್ನು ಬಿಗಿಗೊಳಿಸಲು ಹಾಗೂ ತಮ್ಮ ಕೋಮುವಾದಿ ರಾಜಕೀಯವನ್ನು ಪ್ರತಿಪಾದಿಸಲು ಸಾಕಷ್ಟು ಅವಕಾಶ ನೀಡಲಾಗಿದೆಯೆಂದೇ. ಆದ್ದರಿಂದ ಸಿಪಿಐ(ಎಂ)ನ ಏಕಮಾತ್ರ ಶಾಸಕರು ಕಲಾಪ ಸಲಹಾ ಸಮಿತಿಯಲ್ಲಿ ಭಾಗವಹಿಸಿ ಸ್ಪೀಕರ್ ರವರ ತಂತ್ರಗಳಿಗೆ ಅನುಮೋದನೆ ನೀಡುವಂತೆಯೂ ಆಗಬಾರದು, ಅತ್ತ ವಿಧಾನಸಭೆಯಲ್ಲಿ ಬಿಜೆಪಿ ನಿರ್ದೇಶನದ ನಾಟಕಕ್ಕೂ ವಿಶ್ವಾಸಾರ್ಹತೆ ನೀಡುವಂತೆಯೂ ಆಗಬಾರದು ಎಂದು ಸಿಪಿಐ(ಎಂ) ನಿರ್ಧರಿಸಿತು. ಸಿಪಿಐ(ಎಂ) ಶಾಸಕರು ಹೊಸ 'ಸ್ಪೀಕರ್' ನಡೆಸಿಕೊಟ್ಟ ಅಧಿವೇಶನದಲ್ಲಿ ಭಾಗವಹಿಸಲಿಲ್ಲ. ಬಿಜೆಪಿ ಬೆಂಬಲಿತ ಮಾಯಾವತಿ ಸರ್ಕಾರದ ವಿರುದ್ಧ ಮತ ನೀಡುವ ಸ್ಪಷ್ಟ ನಿಲುವನ್ನು ಸಿಪಿಪಿಐ(ಎಂ) ತಳೆದಿತ್ತು.

ಸಂಸದೀಯ ಚುನಾವಣೆಗಳು ಮತ್ತು ಸದ್ಯದಲ್ಲೇ ಅನಿವಾರ್ಯವಾಗಿ ನಡೆಯಬೇಕಾದ ವಿಧಾನಸಭಾ ಚುನಾವಣೆಗಳ ವಶಪಡಿಸಿಕೊಳ್ಳುವ ಬಿಜೆಪಿಯ ಯುದ್ಧದಲ್ಲಿ ಅದರ ತಂತ್ರಕ್ಕೆ ಸಿಕ್ಕಿರುವ ಈ ಯಶಸ್ಸು ಪರಿಸ್ಥಿತಿಯನ್ನು ಇಂದು ಕಠಿಣಗೊಳಿಸಿದೆ. ಬಿ.ಎಸ್.ಪಿ. ಮುಖಂಡತ್ವದ ಸಿನಿಕ ಸಮಯಸಾಧಕತನ ಇಂದಲ್ಲ ನಾಳೆ ಅದಕ್ಕೆ ತಿರುಗುಬಾಣವಾಗಲಿದೆ. ರಾಜ್ಯದಲ್ಲಿ ಇನ್ನೂ ಅತಿ ದೊಡ್ಡ ಜಾತ್ಯಾತೀತ ಶಕ್ತಿಯಾಗಿರುವ ಸಮಾಜವಾದಿ ಪಕ್ಷ ತನ್ನ ತಪ್ಪುಗಳನ್ನು ಹಿಂದಿನ ಸಂಕುಚಿತ ವರ್ತನೆಯನ್ನು ಅರಿತು ಸರಿಪಡಿಸಿಕೊಂಡು ಜಾತ್ಯಾತೀತ ಹಾಗೂ ಎಡ ಶಕ್ತಿಗಳೊಂದಿಗೆ ಸಹಕರಿಸುವ ಬಗ್ಗೆ ಯೋಚಿಸಬೇಕಾಗಿದೆ. ರಾಷ್ಟ್ರಮಟ್ಟದಲ್ಲಿ ಜನತಾದಳ ಮತ್ತು ಸಿಪಿಐನ ತಿಳುವಳಿಕೆಯನ್ನು ಉತ್ತರ ಪ್ರದೇಶದಲ್ಲೂ ಅನುಷ್ಠಾನಕ್ಕೆ ತಂದು ಇಂತಹ ಒಂದು ವ್ಯಾಪಕ ಐಕ್ಯತೆ ತರಲು ಅನುವಾಗುತ್ತದೆ ಎಂದು ನಿರೀಕ್ಷಿಸಬೇಕಾಗಿದೆ.